ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೫ ಏಪ್ರಿಲ್ - ೨೦೧೫ ಸಂಚಿಕೆ - ೦೯

ಬೆಳೆಯುತ್ತಿರುವ ಯುವಶಕ್ತಿಯ ಉಪಯೋಗವೆಂತು?

*

ಸಾಮಾಜಿಕ ಆಚರಣೆ ಅರ್ಥಪೂರ್ಣವಾಗಿರಲಿ

*

'ಭಾರತೀಯ ಸಂಸ್ಕೃತಿ' ಸಾನೇಯವರ ಅಭಿಪ್ರಾಯ

*

ಕೈಮಗ್ಗ ಉದ್ಯಮ ಮತ್ತು ಕೇಂದ್ರ ಬಜೆಟ್

ಜನಪದ ವಿಚಾರದಲ್ಲಿ

ಏಪ್ರಿಲ್–೨೦೧೫

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಏಪ್ರಿಲ್ - ೨೦೧೫
ಸಂಪುಟ - ೧೫
ಸಂಚಿಕೆ - ೦೯

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.net

ಬದುಕು ಕಂಬಳದ ಆಟ

ಕಂಬಳಕ್ಕೆ ಸಿಕ್ಕಿಕೊಂಡ
ಕೋಣಗಳು ನಾವು
ಸಂಬಳಕ್ಕೆ ಸಿಕ್ಕಿಕೊಂಡ ಪ್ರಾಣಗಳು ನಾವು
ಅನ್ನ ಬೆಳೆವ ಮಣ್ಣಿನಲ್ಲಿ
ಚಿನ್ನ ಅಳೆವ ಮತ್ತಿನಲ್ಲಿ
ಲೆಕ್ಕಿಸದೆ ಕಷ್ಟವ ಓಡುವೆವು
ನಿಮ್ಮ ಮೋಜಿಗೆ
ಕೆಸರು ಮೆತ್ತದ ಚಿನ್ನದ ಬಿಲ್ಲೆ
ನಿಮ್ಮ ಜೇಬಿಗೆ
ಅಣ್ಣ, ತಮ್ಮರೆನ್ನದೆ ಜಿದ್ದಿಗೆ ಬಿದ್ದೆವು
ಗುರಿಗೆ ಕಣ್ಣ ನೆಟ್ಟು ಕೆಸರ ಒದ್ದೆವು
ಜೊತೆಯಲೆ ತಿಂದಿದ್ದೆವು ಹುಲ್ಲು
ಆದರೀಗ ಒಂದೇ ಕೂಗು ಗೆಲ್ಲು
ಗೆದ್ದು ಬಾಳೆ, ತೆಂಗ ತಿನ್ನಲಿಕ್ಕೆ
ಸೋತು ಚಾಟಿ ಏಟ ತಿನ್ನಲಾರದ್ದಕ್ಕೆ
ಮುಖಕೆ ಮುಗುಳು ನಗೆಯ ಧರಿಸಿ
ನೋವ ಕೊಂಚ ಬದಿಗೆ ಸರಿಸಿ
ಬದುಕ ಬಲವ ಬಲಿಯ ನೀಡಿ
ಕವಡೆ ಕಾಸ ಮುಖವ ನೋಡಿ
ಎದ್ದು ಬಿದ್ದು ಓಡುವ
ಕಾರ್ಪೊರೇಟ್ ಕೋಣಗಳು ನಾವು!

- ನವೀನ್ ಹಳೇಮನೆ, ತುಮಕೂರು
ಸಾಭಾರ ಮಯೂರ

ಚಿಂತನೆಗೊಂದು ಸಂಗತಿ

ರಾಜ್ಯದಲ್ಲಿ ಜಾತಿ ಆಧಾರಿತ ಗಣತಿ ಆರಂಭವಾಗಲಿದೆ. ಗಣತಿಯ ಪರ ಮತ್ತು ವಿರೋಧವಾಗಿ ಅನೇಕರಿಂದ ಅನೇಕ ವಿಚಾರಗಳು ಮತ್ತು ಅಭಿಪ್ರಾಯಗಳು ಪ್ರಕಟಗೊಳ್ಳುತ್ತಿವೆ. ಜಾತಿ ಆಧಾರಿತ ಈ ಗಣತಿಯ ಹಿಂದೆ ಸರ್ವರಿಗೆ ಸಮಬಾಳು ಮತ್ತು ಸಮಪಾಲು ಎಂಬ ಉದಾತ್ತ ವಿಚಾರವಿದೆ. ಸ್ವಾತಂತ್ರ್ಯ ಬಂದು ಆರು ದಶಕಗಳಾದ ಮೇಲೆಯೂ ಗಾಂಧೀಜಿಯವರ ಸಮಾಜದ ಪುನರುತ್ಥಾನದ ಕೆಲಸ ನಡೆದು ಎಂಟು ದಶಕಗಳ ಮೇಲೆಯೂ ದೇಶದಲ್ಲಿ ಜಾತಿಗಳ ಭೇದವಲ್ಲದೆ ಬಡತನ, ಅಜ್ಞಾನ, ಅನಾರೋಗ್ಯ, ನಿರುದ್ಯೋಗ ಮುಂತಾದ ಸಮಾಜ ಪೀಡನೆಯ ರೋಗಗಳೂ ಕಾಡುತ್ತಿವೆ. ಇದು ದುರ್ದೈವದ ಸಂಗತಿ. ಈ ರೋಗಗಳನ್ನು ನಿರ್ಮೂಲನ ಮಾಡಬೇಕಾದುದು ಪ್ರಭುತ್ವದ ಆದ್ಯ ಕರ್ತವ್ಯ. ಆದರೆ ಸಮಸ್ಯೆಯ ಪರಿಹಾರಕ್ಕೆ ಕೈಗೊಳ್ಳಲಾಗುವ ಮಾರ್ಗೋಪಾಯಗಳೇ ಇನ್ನಷ್ಟು ಸಮಸ್ಯೆಗಳ ಉದ್ಭವಕ್ಕೆ ಕಾರಣವಾಗಬಾದೆಂಬ ಎಚ್ಚರಿಕೆ ಕೂಡ ಇರಬೇಕಾದುದು ಅಗತ್ಯ. ಇಲ್ಲವಾದರೆ 'ನೆಗಡಿ ಬಂತೆಂಬ ಕಾರಣಕ್ಕಾಗಿ ಮೂಗು ಕುಯ್ದಂತೆ' ಆಗುವುದು.

ಎಲ್ಲಿಯವರೆಗೆ ಭಾರತದಲ್ಲಿರುವ ಜನರು ತಾವು ಹಿಂದುಗಳಲ್ಲ ಎಂದು ಹೇಳುವುದಿಲ್ಲವೊ ಅಥವಾ ತೀರ್ಮಾನಮಾಡುವುದಿಲ್ಲವೊ ದೇಶದಲ್ಲಿ ಹಿಂದೂಧರ್ಮ ಇದ್ದೇ ಇರುತ್ತದೆ. ಆದ್ದರಿಂದ ಈಗ ಅತ್ಯಗತ್ಯವಾಗಿ ಮಾಡಬೇಕಾದುದು ಹಿಂದೂಧರ್ಮದಲ್ಲಿ ಜಾತಿ-ಜಾತಿಗಳ ಮಧ್ಯದಲ್ಲಿ ಇರುವ ಅಸ್ಪ್ರಶ್ಯತೆ ಹೋಗಲಾಡಿಸುವ ಕೆಲಸವನ್ನು ಎಲ್ಲರೂ ಮಾಡಬೇಕು. ದೇಶದಲ್ಲಿ ಯಾರು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ವೈಚಾರಿಕವಾಗಿ ಮುಂದುವರೆದಿದ್ದಾರೊ, ಅವರು ಯಾವುದೇ ಜಾತಿಯವರಾಗಿರಲಿ ಮತ್ತು ಧರ್ಮದವರಾಗಿರಲಿ ಯಾವುದೇ ಪ್ರಕಾರದ ಅಸ್ಪ್ರಶ್ಯತೆಯ ಆಚರಿಸುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಅವರ ಆರ್ಥಿಕೋನ್ನತಿ. ಜಾತಿ ಆಧಾರಿತ ಜನಗಣತಿ ಇತಿಹಾಸದ ಮರುಸೃಷ್ಟಿಗೆ ಕಾರಣವಾಗದಿರಲಿ. ಗಾಂಧೀಜಿಯವರು ಜಾತಿಗಳ ಮತ್ತು ಧರ್ಮಗಳ ರಾಜಕೀಯ ಬೇಡಿಕೆಗಳ ವಿರುದ್ಧ ಆಮರಣ ಉಪವಾಸಗಳನ್ನು ಕೈಗೊಂಡಿದ್ದರು. ಆದರೂ ಕೊನೆಗೆ ಜಾತಿಗಳ ಮತ್ತು ಧರ್ಮದ ಪ್ರತ್ಯೇಕತಾ ಬೇಡಿಕೆಗಳ ಕೈಯೇ ಮೇಲಾಗಿ ದೇಶ ವಿಭಜನೆಗೊಂಡಿತು ಮತ್ತು ಸಮಾಜ ಅನೇಕಾನೇಕ ಜಾತಿಗಳ ಬಲಸಂವರ್ಧನೆಗೆ ಕಾರಣವಾಯಿತು. ಜಾತಿ ಆಧಾರಿತ ಗಣತಿಯನ್ನು ಮಾಡುವುದಕ್ಕೆ ಬದಲಾಗಿ ವೈಜ್ಞಾನಿಕವಾಗಿ, ಭ್ರಷ್ಟಾಚಾರರಹಿತವಾಗಿ ಪಾರದರ್ಶಕ ವ್ಯವಸ್ಥೆಯ ಮೂಲಕ ಸಮಾಜದ ಸಮಸ್ತ ವರ್ಗಗಳ ಜನರ ಆರ್ಥಿಕ ಸ್ಥಿತಿಯ ಸಮೀಕ್ಷೆ ಮಾಡಬೇಕು. ಆನಂತರ ಅದರ ಆಧಾರದ ಮೇಲೆ ಆಯಾ ವರ್ಗಗಳ ಸಾಮಾಜಿಕ ಸ್ಥಿತಿಗತಿಗಳನ್ನು ಗಮನಿಸಿ ಸರ್ವತೋಮುಖ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಬೇಕು. ತನ್ಮೂಲಕ ಗಾಂಧೀಜಿಯವರು ಹೇಳಿದ್ದ, "ಅಂತ್ಯೋದಯದ ಮೂಲಕ ಸರ್ವೋದಯ" ಸಾಧಿಸಲು ಪ್ರಯತ್ನಿಸಬೇಕು.

ಬೆಳೆಯುತ್ತಿರುವ ಯುವಶಕ್ತಿಯ ಉಪಯೋಗವೆಂತು?

– ಸುರೇಂದ್ರ ಕೌಲಗಿ

ಬರಲಿರುವ ನಲ್ವತ್ತು ವರ್ಷಗಳಲ್ಲಿ ಉತ್ಪಾದಕ ಪರಿಶ್ರಮ ಮಾಡಬಲ್ಲಂತಹ ಯುವಶಕ್ತಿಯಿಂದ ಭಾರತ ತುಂಬಿ ತುಳುಕುತ್ತದೆ. ಅಂತರರಾಷ್ಟ್ರೀಯ ಶ್ರಮ ಸಂಸ್ಥೆಯ ಪ್ರಕಾರ (ಐ.ಎಲ್.ಒ) ೨೦೨೦ರ ವೇಳೆಗೆ ೧೧೬ ದಶಲಕ್ಷ ಕಾರ್ಮಿಕರು ಭಾರತದಲ್ಲಿರುತ್ತಾರೆ. ಅವರ ಸರಾಸರಿ ವಯಸ್ಸು ೨೦ ರಿಂದ ೨೪. ಅದೇ ಸಮಯದಲ್ಲಿ ಚೀನಾದಲ್ಲಿ ಕೇವಲ ೯೪ ದಶಲಕ್ಷ ಕಾರ್ಮಿಕರಿರುತ್ತಾರೆ. ಮತ್ತು ಅವರ ಸರಾಸರಿ ವಯಸ್ಸು ೪೦ ಇದ್ದರೆ ಯೂರೋಪಿನಲ್ಲಿ ೪೬ ಮತ್ತು ಜಪಾನಿನಲ್ಲಿ ೪೭ ಇರುತ್ತದೆ. ಬರಲಿರುವ ೨೦ ವರ್ಷಗಳಲ್ಲಿ ಕೈಗಾರಿಕೀಕೃತಗೊಂಡ ದೇಶಗಳಲ್ಲಿ ಕಾರ್ಮಿಕರ ಸಂಖ್ಯೆ ೪% ರಷ್ಟು ಕಡಿಮೆಯಾಗುತ್ತದೆ. ಅದು ಚೈನಾದಲ್ಲಿ ೫%ರಷ್ಟು ಕಡಿಮೆಯಾಗುತ್ತದೆ. ಅದೇ ಹೊತ್ತಿಗೆ ಭಾರತದಲ್ಲಿ ಕಾರ್ಮಿಕರ ಸಂಖ್ಯೆ ೩೨% ರಷ್ಟು ಹೆಚ್ಚಾಗುತ್ತದೆ! ಅಮೇರಿಕಾದ ಬೋಸ್ಟೋನ್ನಿನ ವಿಚಾರ ವಿನಿಮಯ ಸಮಿತಿಯ ಪ್ರಕಾರ (ಬೋಸ್ಟೋನ್ ಕನ್ಸ್‌ಲ್ಟಿಂಗ್ ಗ್ರೂಪ್) ಪ್ರಕಾರ ೨೦೨೦ರ ವೇಳೆಗೆ ಜಾಗತಿಕ ಮಟ್ಟದಲ್ಲಿ ೪೭ ದಶಲಕ್ಷ ಕಾರ್ಮಿಕರ ಕೊರತೆ ಇರುತ್ತದೆ. ಈ ಮಾನವ ಶಕ್ತಿಯ ಕೊರತೆಯ ಲಾಭವನ್ನು ಭಾರತ ಪಡೆಯಬೇಕು. ಅದಕ್ಕಾಗಿ ಭಾರತ ತನ್ನಲ್ಲಿಯ ಮಾನವ ಶಕ್ತಿಯನ್ನು ಎಲ್ಲ ರೀತಿಯಲ್ಲೂ ಸಬಲೀಕರಿಸಬೇಕು. ವಿಶೇಷವಾಗಿ ಯುವಶಕ್ತಿ ಕುಶಲ-ಕಾರ್ಮಿಕ ಶಕ್ತಿಯಾಗಿ ಹೊರಹೊಮ್ಮುವಂತೆ ಮಾಡಬೇಕು ಆಗ ಜಗತ್ತಿನ ಬೇರೆ ದೇಶಗಳಲ್ಲಿ ಉಂಟಾಗಿರುವ ಕುಶಲ ಕರ್ಮಿಗಳ ಅಭಾವವನ್ನು ಭಾರತದ ಕುಶಲ ಯುವಶಕ್ತಿ ತುಂಬಬಹುದು.

ಯಾವುದೇ ಸಮಾಜದ ಬೆಳವಣಿಗೆ ಅದರ ಯುವಶಕ್ತಿಯಲ್ಲಿರುವ ಕುಶಲತೆಯನ್ನು ಅವಲಂಬಿಸಿರುತ್ತದೆ. ಹೊರಗಿನಿಂದ ಬರಬಹುದಾದ ಸ್ಪರ್ಧೆಯನ್ನು ಎದುರಿಸಬಲ್ಲ ಶಕ್ತಿಯನ್ನು ಪಡೆದಿರುತ್ತದೆ. ಆದರೆ ಕಳೆದ ೬೦ ವರ್ಷಗಳಿಂದ ಭಾರತವು ಅನುಸರಿಸಿದ ಕೇಂದ್ರೀಕೃತ ಆರ್ಥಿಕಾಭಿವೃದ್ಧಿಯ ನೀತಿಯ ಕಾರಣದಿಂದಾಗಿ ಕೈಗಾರಿಕಾ ಉತ್ಪಾದನಾ ಶಕ್ತಿ ಮತ್ತು ಕಾರ್ಮಿಕರ ಉತ್ಪಾದನಾ ಶಕ್ತಿ ದಯನೀಯವಾಗಿ ಕೆಳಮಟ್ಟದಲ್ಲಿದೆ. ಇದಕ್ಕೆ ಕಾರಣ ನಮ್ಮ ಯುವಕರಿಗೆ ಉದ್ಯೋಗಾಧಾರಿತ ಶಿಕ್ಷಣ ಮತ್ತು ಪ್ರಶಿಕ್ಷಣ ಕೊಡದೆ ಇರುವುದೇ ಆಗಿದೆ. ತತ್‌ಪರಿಣಾಮವಾಗಿ ಎಲ್ಲ ಕ್ಷೇತ್ರಗಳಲ್ಲಿ ಕುಶಲ ಮತ್ತು ಪರಿಪೂರ್ಣ ಪ್ರಶಿಕ್ಷಣ ಪಡೆದ ಯುವಶಕ್ತಿಯ ತೀವ್ರತರ ಅಭಾವವನ್ನು ಎದುರಿಸುತ್ತಿದ್ದೇವೆ. ಆ ಕ್ಷೇತ್ರವು ವ್ಯಾವಸಾಯಿಕವಾಗಿರಬಹುದು, ಪದಾರ್ಥಗಳ ಉತ್ಪಾದನಾ ಕ್ಷೇತ್ರವಾಗಿರಬಹುದು ಮತ್ತು ಸೇವಾ ಕೈಗಾರಿಕೆಗಳಾಗಿರಬಹುದು. ತೀವ್ರಗತಿಯಲ್ಲಿ ಆರ್ಥಿಕಾಭಿವೃದ್ಧಿಯ ದಾರಿಯಲ್ಲಿ ನಡೆಯುತ್ತಿರುವ ಭಾರತ ದೊಡ್ಡ ಸಂಖ್ಯೆಯಲ್ಲಿ ಸುಶಿಕ್ಷಿತ ನಿರುದ್ಯೋಗಿಗಳನ್ನು ಹೊಂದಿದೆ.

ಇದಕ್ಕೆ ಭಾರತ ಅನುಸರಿಸುತ್ತಿರುವ ತಪ್ಪು ಕೈಗಾರಿಕಾ ನೀತಿಯೇ ಕಾರಣವಾಗಿದೆ.

೨೦೦೫ರಲ್ಲಿ ನಾಸ್ಕಾಮ್ - ಕಿನ್‌ಸೆ ವರ್ಡ್ ಇನ್‌ಸ್ಟಿಟ್ಯೂಟ್‌ನ ಅಧ್ಯಯನದ ಪ್ರಕಾರ ಭಾರತದಲ್ಲಿ ೭೫%ರಷ್ಟು ಎಂಜಿನಿಯರಿಂಗ್ ಮತ್ತು ೮೫%ರಷ್ಟು ಕಲಾ-ವಿಜ್ಞಾನ ಮತ್ತು ವಾಣಿಜ್ಯ ಶಾಸ್ತ್ರದ ಪದವೀಧರರು ಉದ್ಯೋಗಕ್ಕೆ ಅನರ್ಹರಾಗಿದ್ದಾರೆ! ಅವರಿಗೆ ಯಾವ ಪಠ್ಯಾಧಾರಿತ ಶಿಕ್ಷಣವನ್ನು ಕೊಡಲಾಗುತ್ತಿದೆಯೊ ಅದು ಕಾಲಕ್ಕೆ ತಕ್ಕನಾಗಿಲ್ಲ. ಮತ್ತು ಅವರ ಕಾಲೇಜಿನ ನಾಲ್ಕು ವರ್ಷಗಳ ಅವಧಿಯಲ್ಲಿ ಉದ್ಯೋಗಕ್ಕನುಗುಣವಾದ ಕುಶಲತೆಯನ್ನೂ ಕಲಿಸಿಲ್ಲ. ಈ ಎಲ್ಲ ಕಾರಣಗಳಿಂದ ವೃತ್ತಿಪರ ಶಿಕ್ಷಣ ಪಡೆದ ಯುವಕ-ಯುವತಿಯರು ಉದ್ಯೋಗಕ್ಕೆ ಅನರ್ಹರಾಗಿರುತ್ತಾರೆ.

೨೦೨೨ರ ಹೊತ್ತಿಗೆ ೧೫೦ ದಶಲಕ್ಷ ಜನರನ್ನು ಕುಶಲಕರ್ಮಿಗಳನ್ನಾಗಿ ಮಾಡಬೇಕೆಂದು ಪ್ರಧಾನಮಂತ್ರಿಗಳು ಆದೇಶಿಸಿದ್ದಾರೆ. ಆದ್ದರಿಂದ ದೇಶದಲ್ಲಿರುವ ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳು ಈ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ತಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ತಂದುಕೊಳ್ಳಬೇಕು. ತಮ್ಮ ಸಂಸ್ಥೆಯು ಕೊಡಮಾಡುವ ಶಿಕ್ಷಣದಿಂದಾಗಿ ತಮ್ಮ ವಿದ್ಯಾರ್ಥಿಗಳು ಉದ್ಯೋಗಾರ್ಹರಾಗುವಂತೆ ಕಾಳಜಿವಹಿಸಬೇಕು. ಅನೇಕ ಸಂದರ್ಭದಲ್ಲಿ ಶೈಕ್ಷಣಿಕ ಅರ್ಹತೆಯನ್ನು ತೋರಿಸುವ ಅರ್ಹತಾ ಪತ್ರದ ಕಾಗದದ ಬೆಲೆಯಷ್ಟೂ ಅವರು ಪಡೆದ ಶಿಕ್ಷಣಕ್ಕೆ ಇರುವುದಿಲ್ಲವೆಂಬುದು ಅನೇಕರ ಅನುಭವ.

ಪ್ರಪಂಚದ ಉಳಿದ ದೇಶಗಳಲ್ಲಿಯ ಜನಸಂಖ್ಯೆ ವೃದ್ಧಾಪ್ಯದತ್ತ ಕಾಲಿಡುತ್ತಿರುವಾಗ! ಭಾರತದಲ್ಲಿ ಸೃಷ್ಟಿಯಾಗುತ್ತಿರುವ ಅಗಾಧವಾದ ಯುವಶಕ್ತಿಯನ್ನು ಹೇಗೆ ಪಳಗಿಸಿಕೊಳ್ಳುತ್ತೇವೆಂಬುದರ ಮೇಲೆ ದೇಶದ ಭವಿಷ್ಯ ನಿಂತಿದೆ. ದೇಶದಲ್ಲಿ ಬಹಳಷ್ಟು ನಗರೀಕರಣ ಕ್ರಿಯೆ ನಡೆಯುತ್ತಿದ್ದರೂ ಇಂದೂ ಸಹ ೧೦೦ಕ್ಕೆ ೬೦ರಷ್ಟು ಜನಸಂಖ್ಯೆ ಗ್ರಾಮ ಭಾರತದಲ್ಲಿಯೇ ಇದೆ. ಅಲ್ಲಿ ವ್ಯವಸಾಯವೇ ಪ್ರಧಾನ ಉದ್ಯೋಗವಾಗಿದೆ, ವ್ಯವಸಾಯ ಕ್ಷೇತ್ರದಲ್ಲಿ ಇರುವಷ್ಟು ಉದ್ಯೋಗಾವಕಾಶಗಳು ಬೇರೆ ಯಾವ ಕ್ಷೇತ್ರದಲ್ಲಿಯೂ ಇಲ್ಲ. ಆದರೆ ನಮ್ಮ ಸರ್ಕಾರಗಳು ಹೆಚ್ಚು ಉದ್ಯೋಗಾವಕಾಶಕೊಡುವ ವ್ಯವಸಾಯ ಕ್ಷೇತ್ರವನ್ನು ಉದಾಸೀನ ಮಾಡಿ ಅತ್ಯಂತ ದುಬಾರಿಯಾದ ಅಂದರೆ ಕೋಟಿಗಟ್ಟಲೆ ಬಂಡವಾಳ ಬಯಸುವ, ನೂರಾರು ಎಕರೆ ಭೂಮಿ ಬಯಸುವ, ಮಿಲಿಯ ಲೀಟರ್‌ಗಳಷ್ಟು ನೀರು ಬಯಸುವ, ನೂರಾರು ಕಿಲೋವ್ಯಾಟ್ ವಿದ್ಯುತ್‌ಚ್ಛಕ್ತಿ ಬಯಸುವ, ಪರಿಸರವನ್ನು ಪ್ರದೂಷಣಗೊಳಿಸುವ, ಅರಣ್ಯ ಮತ್ತು ನದಿಗಳನ್ನು ನಾಶಮಾಡುವ ಕೆಲವು ಸಾವಿರ ಜನರಿಗೆ ಮಾತ್ರ ಉದ್ಯೋಗ ಕೊಡುವ ಕೈಗಾರಿಕೆಗಳಿಗೆ ಮಹತ್ವಕೊಡುತ್ತಿದೆ. ಇದು ಬೆಳೆಯುತ್ತಿರುವ ಯುವಶಕ್ತಿಯ ಸದುಪಯೋಗ ಮಾಡಿಕೊಳ್ಳುವ ರೀತಿಯಲ್ಲ; ದೇಶ ಕಟ್ಟುವ ನೀತಿಯಲ್ಲ. ಗ್ರಾಮಗಳಲ್ಲಿಯೇ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಯುವಕರು ಉದ್ಯೋಗಾವಕಾಶ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುವುದನ್ನು ತಪ್ಪಿಸಬೇಕಾದುದು ಇಂದಿನ ತುರ್ತು ಅಗತ್ಯ. ಬೆಳೆಯುತ್ತಿರುವ ಯುವಶಕ್ತಿಯ ಉಪಯೋಗ ಸರಿಯಾಗಿ ಆಗದಿದ್ದಲ್ಲಿ ದೇಶ ಪ್ರಗತಿ ಹೊಂದುವ ಬದಲು ವಿಗತಿ ಹೊಂದುತ್ತದೆ. ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಂದ ಹೊರ ಬರುತ್ತಿರುವ ವಿದ್ಯಾರ್ಥಿಗಳ

ಸಂಖ್ಯೆ ಪ್ರತಿವರ್ಷ ದ್ವಿಗುಣಗೊಳ್ಳುತ್ತಾ ಹೋಗುತ್ತಿದೆ. ಓದು ಮುಗಿಸಿ ಹೊರ ಬಂದ ಎಲ್ಲ ಯುವಕರಿಗೂ ಸರ್ಕಾರಿ ಕೆಲಸ ಕೊಡುವುದು ಸಾಧ್ಯವಿಲ್ಲ. ಅದೇ ರೀತಿ ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿರುವ ತಾಂತ್ರಿಕತೆಯ ಕಾರಣದಿಂದಾಗಿ ಅತೀ ಬಂಡವಾಳ ನುಂಗಿ ಸ್ಥಾಪಿತಗೊಂಡಿರುವ ಕೈಗಾರಿಕೆಗಳೂ ಸಹ ಹೆಚ್ಚು ಜನರಿಗೆ ಉದ್ಯೋಗ ಕೊಡಲಾರವು. ದೇಶದ ಕೈಗಾರಿಕೀಕರಣದ ಮೊದಲ ಹಂತದಲ್ಲಿ ಹೆಚ್ಚು ಯುವಕರಿಗೆ ಉದ್ಯೋಗ ದೊರೆಯಬಹುದು. ನಂತರದ ಎರಡನೆ ಮತ್ತು ಮೂರನೆ ಹಂತದಲ್ಲಿಯ ಕೈಗಾರಿಕೆಗಳಲ್ಲಿ ಉದ್ಯೋಗಾವಕಾಶ ಕಡಿಮೆಯಾಗುತ್ತಾ ಹೋಗುತ್ತದೆ. ಆದರೆ ಇದಕ್ಕೆ ಅಪವಾದವೆಂಬಂತೆ ವ್ಯವಸಾಯ ಕ್ಷೇತ್ರವಿದೆ. ಈ ಕ್ಷೇತ್ರದ ವೈಶಿಷ್ಟ್ಯವೇನೆಂದರೆ ಇಲ್ಲಿ ಉದ್ಯೋಗ ಮಾಡಿದಷ್ಟೂ ಬೇರೆ ಉದ್ಯೋಗಗಳು ಸೃಷ್ಟಿಯಾಗುತ್ತಾ ಹೋಗುತ್ತದೆ. ಪರಿಸರವನ್ನು ಮಲಿನಗೊಳಿಸುವ ಬದಲು ಮತ್ತು ಪ್ರಕೃತಿಯನ್ನು ನಾಶಮಾಡುವ ಬದಲು ಅವನ್ನು ರಕ್ಷಿಸುತ್ತದೆ ಮತ್ತು ವೃದ್ಧಿಸುತ್ತದೆ. ಆದ್ದರಿಂದ ಈಗ ದೇಶದಲ್ಲಿ ಬೆಳೆಯುತ್ತಿರುವ ನಿರುದ್ಯೋಗದ ಪರಿಹಾರಕ್ಕೆ ನಿಜವಾದ ಉಪಾಯ ವ್ಯವಸಾಯ ಕ್ಷೇತ್ರವನ್ನು ಬಲಪಡಿಸುವುದೇ ಆಗಿದೆ. ಆಧುನಿಕ ಕೈಗಾರಿಕೆಗಳಿಗಾಗಿ ಕುಶಲ ಕರ್ಮಿಗಳನ್ನು ತಯಾರಿಸಲು ಹೇಗೆ ವ್ಯವಸ್ಥಿತವಾದ ಪ್ರಯತ್ನವನ್ನು ಮಾಡಲಾಗುತ್ತದೆಯೊ ಅದೇ ರೀತಿ ವ್ಯವಸ್ಥಿತವಾದ ಪ್ರಯತ್ನವನ್ನು ವ್ಯವಸಾಯ ಕ್ಷೇತ್ರದಲ್ಲಿಯೂ ಮಾಡಬೇಕು ಮತ್ತು ಸುಶಿಕ್ಷಿತ, ಅರೆಶಿಕ್ಷಿತ, ಕುಶಲ, ಅಕುಶಲ ಮುಂತಾದ ಎಲ್ಲ ಬಗೆಯ ಯುವಕರು ವ್ಯವಸಾಯ ಕ್ಷೇತ್ರದಲ್ಲಿ ಉದ್ಯೋಗ ಪಡೆಯುವಂತೆ ಮಾಡಬೇಕು. ಇದು ಸಾಕಾರಗೊಳ್ಳಬೇಕಾದರೆ ಮೂಲಭೂತ ನೀತಿಯನ್ನು ಪ್ರಭುತ್ವ ಅನುಸರಿಸಬೇಕಾಗುತ್ತದೆ. ಆ ಮೂಲಭೂತ ನೀತಿಯ ಹೃದಯ "ಉಳುವವನಿಗೆ ಭೂಮಿ ಮತ್ತು ಆಯಾ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾ ೧೫ ಎಕರೆಗಳಂತೆ ಒಟ್ಟು ಎಷ್ಟು ಎಕರೆ ಭೂಮಿ ಬೇಕಾಗುತ್ತದೊ ಅಷ್ಟನ್ನು ಯಾವ ಕಾರಣಕ್ಕೂ ಮತ್ತು ಯಾವ ರೀತಿಯಿಂದಲೂ ಸರ್ಕಾರ ಮುಟ್ಟಕೂಡದೆ"ಂಬುದು ಆಗಿರುತ್ತದೆ. ಅದಕ್ಕಾಗಿ ಈಗ ಸರ್ಕಾರ ಜಾರಿಗೊಳಿಸಬೇಕೆಂದಿರುವ ಭೂಸ್ವಾಧೀನ ಕಾನೂನನ್ನು ಸೂಕ್ತವಾಗಿ ಬದಲಿಸಬೇಕು. ವ್ಯವಸಾಯಾಧಾರಿತ ಉದ್ಯೋಗ ಸೃಷ್ಟಿಯ ಪ್ರಕ್ರಿಯೆ ಪ್ರಾರಂಭವಾದಲ್ಲಿ ದೇಶದ ಯುವಕರಲ್ಲಿ ಶ್ರಮನಿಷ್ಠೆ ಬೆಳೆಯಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಈಗ ಉಂಟಾಗುತ್ತಿರುವ ಅತ್ಯಾಚಾರ ಪ್ರಕರಣಗಳು, ಕೊಲೆ ಸುಲಿಗೆಗಳು, ಸ್ವೇಚ್ಛಾಚಾರಗಳು, ರೋಗ-ರುಜಿನಗಳು ತಾವೇ ತಾವಾಗಿ ಕಡಿಮೆಯಾಗುತ್ತವೆ. ಜೀವನದ ಬಗ್ಗೆ ಈಗಿರುವ ಲಘು ವಿಚಾರವು ಹೋಗಿ ಗೌರವ ಭಾವನೆ ಮೂಡುತ್ತದೆ. ದೇಶ್‌ಮೊಂಡ್ ಟುಟು(Desmond Tutu) ಎಂಬ ವಿದ್ವಾಂಸ ಹೇಳಿದಂತೆ ಯಾವ ಸಮಾಜದಲ್ಲಿ ಜನರಿಗೆ ಮನ್ನಣೆ ಇರುತ್ತದೊ ಎಲ್ಲಿ ಬೇರೆಲ್ಲ ಪದಾರ್ಥಕ್ಕಿಂತ, ಆಸ್ತಿಗಿಂತ ಮನುಷ್ಯರು ಮುಖ್ಯವಾಗಿರುತ್ತಾರೊ ಎಲ್ಲಿ ಜೀವನದ ಬಗ್ಗೆ ಗೌರವ ಹೊಂದಿರುವುದಷ್ಟೆ ಅಲ್ಲದೆ ಸಕಾರಾತ್ಮಕವಾಗಿ ಪೂಜಿಸಲ್ಪಡುತ್ತದೊ ಎಲ್ಲಿ ಜನರು ಭಯ, ಹಸಿವು, ಅಜ್ಞಾನ ಮುಂತಾದವುಗಳಿಂದ ಸುರಕ್ಷಿತವಾಗಿರುತ್ತಾರೊ ಎಲ್ಲಿ ಸಂತೋಷ ಮತ್ತು ಶಾಂತಿ ಇರುತ್ತದೊ ಹಾಗೂ ಯುದ್ಧವೇ ಇರುವುದಿಲ್ಲವೊ ಅಂಥ ಸಮಾಜದ ನಿರ್ಮಾಣಕ್ಕಾಗಿ ನಾವು ಕೆಲಸ ಮಾಡಬೇಕೆಂಬ ದೇವರ ಇಚ್ಛೆಯನ್ನು ಅರಿತುಕೊಳ್ಳಬಲ್ಲವರಾಗುತ್ತಾರೆ. ✷

ಸಾನೇ ಅವರ ಅಭಿಪ್ರಾಯದಲ್ಲಿ
'ಭಾರತೀಯ ಸಂಸ್ಕೃತಿ'

-ಎಸ್.ಆರ್.ರಾಮಸ್ವಾಮಿ

(ವಿಶುದ್ಧ ರಾಷ್ಟ್ರಪ್ರೇಮವೆಂದರೆ ಏನೆಂದು ಅರ್ಥಮಾಡಿಕೊಳ್ಳಬೇಕಾದರೆ ಎಲ್ಲರೂ ಸಾನೇ ಅವರ ಸಾಹಿತ್ಯ ಓದಬೇಕು. ಶ್ರೇಷ್ಠ ಚಿಂತಕರ ಒಂದು ಮಹತ್ವದ ಕೃತಿ 'ಭಾರತೀಯ ಸಂಸ್ಕೃತಿ'. ಆ ಮರಾಠಿ ಕೃತಿಯನ್ನು ಕನ್ನಡಕ್ಕೆ ಹುಬ್ಬಳ್ಳಿಯ ಭಾಸ್ಕರ ಗೋವಿಂದ ಗೋಖಲೆ ಎಂಬುವರು ಈಗ್ಗೆ ಆರೂವರೆ ದಶಕಗಳ ಹಿಂದೆ (೧೯೪೪) ಅನುವಾದ ಮಾಡಿ ಪ್ರಕಟಿಸಿದ್ದರು. ಅನೇಕ ವರ್ಷಗಳಿಂದ ಕನ್ನಡ ಓದುಗರಿಗೆ ಈ ಕೃತಿ ಅಲಭ್ಯವಾಗಿತ್ತು. ಈಗ್ಗೆ ಕೆಲವು ವರ್ಷಗಳ ಹಿಂದೆ(೨೦೦೧) "ಸಾಹಿತ್ಯ ಸಿಂಧು" ಪ್ರಕಾಶನ ಅದನ್ನು ಪುನರ್ಮುದ್ರಣ ಮಾಡಿದೆ - ಸಂ)

ಸಾನೇ ಅವರ ಪೂರ್ಣ ಹೆಸರು ಪಾಂಡುರಂಗ ಸದಾಶಿವ. ಅವರು ನಿಧನರಾದದ್ದು ೧೧ಜೂನ್ ೧೯೫೦ರಂದು. ನಿಧನರಾದಾಗ ಅವರಿಗೆ ೫೧ ವರ್ಷವಷ್ಟೆ ಆಗಿತ್ತು.

ಸಾನೇ ಜನಿಸಿದ್ದು ಮಹಾರಾಷ್ಟ್ರದ ಕೊಂಕಣ ಭಾಗದ ರತ್ನಾಗಿರಿ ಜಿಲ್ಲೆಯ ಒಂದು ಸಣ್ಣ ಗ್ರಾಮದಲ್ಲಿ - ೨೪ಡಿಸೆಂಬರ್ ೧೮೯೯ರಂದು. ಅವರ ತಂದೆ ಭಾವೂರಾವ್ ಸ್ವದೇಶೀ ಆಂದೋಲನದಲ್ಲಿ ಸಕ್ರಿಯರಾಗಿದ್ದರು. ತಾಯಿ ಯಶೋದಾಬಾಯಿ. ತಮ್ಮ ಪ್ರೇಮಳ ಸ್ವಭಾವಕ್ಕೂ ಅನ್ಯಾನುಕಂಪಕ್ಕೂ ಸಂಸ್ಕಾರವಂತಿಕೆಗೂ ಹೆಸರಾಗಿದ್ದವರು.

ತೀರಾ ಬಡತನದಲ್ಲಿ ಸಾನೇ ಅವರ ಬಾಲ್ಯ ಕಳೆಯಿತು. ಮನೆಪಾಠ ಮೊದಲಾದವನ್ನು ಆಶ್ರಯಿಸಿ ವಿದ್ಯಾರ್ಥಿವೇತನ ಪಡೆದು ಪುಣೆಯಲ್ಲಿ ಬಿ.ಎ.ಪರೀಕ್ಷೆ ಮುಗಿಸಿದರು. ಆಮೇಲೆ ಭೀಡ್ ಜಿಲ್ಲೆಯ ಅಮಲ್‌ನೇರ್‌ನ ಪ್ರಸಿದ್ಧ ತತ್ವಶಾಸ್ತ್ರಾಧ್ಯಯನ ಸಂಸ್ಥೆಯಲ್ಲಿ (ಇನ್‌ಸ್ಟಿಟ್ಯೂಟ್ ಆಫ್ ಫಿಲಾಸಫಿ) ಎಂ.ಎ.ಪದವಿ ಪಡೆದರು. ಪ್ರೌಢಶಾಲೆಯೊಂದರಲ್ಲಿ ಶಿಕ್ಷಕರಾಗಿ ಸೇರಿದರು. ನಿಗದಿಯಾದ ಪಾಠಗಳನ್ನು ಮಾಡುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಉನ್ನತ ವ್ಯಕ್ತಿಸಂಸ್ಕಾರವನ್ನು ಬೆಳೆಸುವುದಕ್ಕೆ ಬಗೆಬಗೆಯಾಗಿ ಶ್ರಮಿಸಿದರು. ಈ ಕಾರಣದಿಂದಾಗಿ ಸಾನೇ ಅವರು ತುಂಬಾ ಜನಪ್ರಿಯರಾದರು. ವಿದ್ಯಾರ್ಥಿಗಳಿಗೆ ಉಪಯುಕ್ತವಾದ ವಿಷಯಗಳನ್ನು ಲೇಖನಗಳ ರೂಪದಲ್ಲಿ ತಾವೇ ಬರೆದು ಓದಲು ಒದಗಿಸುತ್ತಿದ್ದರು. ಅನ್ಯರಚಿತ ಹಾಗೂ ಸ್ವರಚಿತ ದೇಶಭಕ್ತಿಗೀತೆಗಳನ್ನು ವಿದ್ಯಾರ್ಥಿಗಳಿಂದ ಹಾಡಿಸುತ್ತಿದ್ದರು. ಬಿಡುವಿನ ವೇಳೆಯಲ್ಲಿ ಖಾದಿ ಪ್ರಚಾರ ಮಾಡುತ್ತಿದ್ದರು. ಕೆಲಕಾಲದ ತರುವಾಯ ಶಿಕ್ಷಕವೃತ್ತಿಗೆ ರಾಜೀನಾಮೆ ಕೊಟ್ಟು ತಮ್ಮ ಅಷ್ಟೂ ಸಮಯವನ್ನು ಸ್ವಾತಂತ್ರ್ಯ ಸಂದೇಶದ ಪ್ರಸಾರಕ್ಕೆ ಮುಡುಪಾಗಿಟ್ಟರು.

ಸಾನೇ ಅವರದು ಸಾಹಿತ್ಯಸಂಪನ್ನವಾದ ವ್ಯಕ್ತಿತ್ವ. ಅವರ ವಾಗ್ಮಿತೆಯೂ ಸ್ವಾತಂತ್ರ್ಯಪ್ರೇಮವೂ ಎಲ್ಲರ ಮನಸ್ಸನ್ನು ಸೆಳೆಯುತ್ತಿದ್ದವು. ಮಕ್ಕಳನ್ನು ಕಂಡರೆ ಅವರಿಗೆ ವಿಶೇಷ ಪ್ರೇಮ. ಪ್ರಚಾರಭಾಷಣಗಳಿಗೋಸ್ಕರ ಪ್ರವಾಸ ಹೋದಾಗ ಅವರು ಬಿಡುವಿನ

ಸಮಯವಷ್ಟನ್ನೂ ಮಕ್ಕಳ ಒಡನಾಟದಲ್ಲಿ ಕಳೆಯುತ್ತಿದ್ದರು. ಪಾರಂಪರಿಕವಾದ ಹಾಗೂ ಅವರೇ ರಚಿಸಿದ ಕಥೆಗಳನ್ನು ಅವರ ಬಾಯಿಂದ ಕೇಳುವುದೆಂದರೆ ಮಕ್ಕಳಿಗೆ ಉತ್ಸವಪ್ರಾಯವಾಗಿರುತ್ತಿತ್ತು.

ಸ್ವಾತಂತ್ರ್ಯಸಂದೇಶದ ಪ್ರಸಾರಕ

ಸಾನೇ ಅವರಿಂದ ಪ್ರಭಾವಿತರಾದ ನೂರಾರು ಮಂದಿ ಯುವಕರು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ನಿರಂತರವಾಗಿ ಸ್ವಾತಂತ್ರ್ಯಪರವಾದ ಭಾಷಣಗಳನ್ನು ಮಾಡುತ್ತಿದ್ದ ಸಾನೇ ಅವರು ೧೯೩೦ರ ಮಧ್ಯಭಾಗದಲ್ಲಿ ಬಂಧನಕ್ಕೊಳಗಾಗಿ ಕಠಿಣ ಶಿಕ್ಷೆಯನ್ನು ಅನುಭವಿಸಿದರು. ಕೆಲಕಾಲದ ತರುವಾಯ ಆಚಾರ್ಯ ವಿನೋಬಾ ಭಾವೆಯವರಿಂದ ಆಕರ್ಷಿತರಾಗಿ ಅವರ ಆಪ್ತ ಶಿಷ್ಯರಾದರು.

ಭಗತ್‌ಸಿಂಗ್, ರಾಜಗುರು, ಸುಖದೇವ್ ಮೊದಲಾದವರ ಬಲಿದಾನವನ್ನು ತಮ್ಮ ಭಾಷಣಗಳಲ್ಲಿ ಭಾವಪೂರ್ಣವಾಗಿ ವರ್ಣಿಸಿ ಕರೆ ಕೊಡುತ್ತಿದ್ದರು – "ಬನ್ನಿ, ಸೆರೆಮನೆಯನ್ನೇ ಅರಮನೆಯೆಂದು ಭಾವಿಸೋಣ, ತಾಯಿ ಭಾರತಿಯನ್ನು ಆರಾಧಿಸೋಣ" – ಎಂದು. ತಮ್ಮ ಭಾಷಣಗಳಲ್ಲಿ ಅವರು ಒಂದು ಘೋಷವಾಕ್ಯದ ರೀತಿಯಲ್ಲಿ ಪದೇಪದೇ ಹೇಳುತ್ತಿದ್ದರು.

ವಿನೋಬಾ ಭಾವೆಯವರ ಪ್ರಸಿದ್ಧ ಕೃತಿಗಳಲ್ಲೊಂದು 'ಗೀತಾ ಪ್ರವಚನ'. ಧುಲೇ ಕಾರಾಗೃಹದಲ್ಲಿ ಬಂದಿಯಾಗಿದ್ದಾಗ ವಿನೋಬಾ ಅವರು ಮಾಡಿದ ಪ್ರವಚನಗಳ ಸಂಕಲನ ಅದು. ಅದೇ ಕಾರಾಗೃಹದಲ್ಲಿಯೇ ಇದ್ದ ಸಾನೇ ಅವರೇ ಆ ಪ್ರವಚನಗಳನ್ನು ನೆನಪಿನ ಬಲದಿಂದ ಲಿಪಿಬದ್ಧಗೊಳಿಸಿದರು. ಅದು ಇವತ್ತಿಗೂ ಜನಪ್ರಿಯ ಗೀತಾವ್ಯಾಖ್ಯಾನವಾಗಿದೆ. ಅನಂತರ ಸಾನೇಯವರನ್ನು ಅಲ್ಲಿಂದ ನಾಸಿಕ್ ಜೈಲಿಗೆ ಸ್ಥಾನಾಂತರ ಮಾಡಲಾಯಿತು. ಅವರು ಭಾರತೀಯ ಸಾಹಿತ್ಯದಲ್ಲಿಯೇ ಅನನ್ಯವೆನಿಸಿರುವ 'ಶಾಮನ ತಾಯಿ' ('ಶ್ಯಾಮಚೀ ಆಯೀ') ಕಾದಂಬರಿಯನ್ನು ಬರೆದದ್ದು ನಾಸಿಕ್ ಕಾರಾಗೃಹವಾಸದಲ್ಲಿ. ಬಹುಮಟ್ಟಿಗೆ ಅದು ಸಾನೇ ಅವರ ಆತ್ಮಕಥೆಯೇ. ಅದರಲ್ಲಿ ಅವರು ಹೃದಯಂಗಮವಾಗಿ ಚಿತ್ರಿಸಿರುವುದು ತಮ್ಮ ಸ್ವಂತ ತಾಯಿಯನ್ನೇ. ಆ ಪುಸ್ತಕವನ್ನು ಓದುವುದು ಎಲ್ಲರಿಗೂ ಒಂದು ಮರೆಯಲಾಗದ ಅನುಭವ. ಅದನ್ನು ಒಂದು ಶ್ರೇಷ್ಠ ಗದ್ಯಕಾವ್ಯವೆಂಬಂತೆ ಜನ ಮೆಚ್ಚಿದ್ದಾರೆ. ಆಚಾರ್ಯ ಪಿ.ಕೆ.ಅತ್ರೆ ಅವರು 'ಶ್ಯಾಮನ ತಾಯಿ' ಕಾದಂಬರಿಯನ್ನು 'ಮಾತೃಪ್ರೇಮಾ ಮಹನ್ಮಂಗಲ ಸ್ತೋತ್ರ' ಎಂದು ಉತ್ಕಂಠೆಯಿಂದ ಪ್ರಶಂಸೆ ಮಾಡಿದ್ದರು.

ಜೈಲಿನಿಂದ ಹೊರಕ್ಕೆ ಬಂದ ಮೇಲೆ ೧೯೩೪ರಲ್ಲಿ ಸಾನೇ ತಾವು ದೀರ್ಘಕಾಲದಿಂದ ಸಂಕಲ್ಪಿಸಿದ್ದ 'ಭಾರತೀಯ ಸಂಸ್ಕೃತಿ' ಕೃತಿಯನ್ನು ಬರೆದರು.

೧೯೩೮-೧೯೪೦ರ ವರ್ಷಗಳಲ್ಲಿ ಅವರು ಹಳ್ಳಿಯಿಂದ ಹಳ್ಳಿಗೆ ಪ್ರವಾಸ ಮಾಡುತ್ತ ಸ್ವಾತಂತ್ರ್ಯ ಸಂದೇಶದ ಪ್ರಸಾರ ಮಾಡಿದರು. ೧೯೪೧ರಲ್ಲಿ ಪುನಃ ಸರ್ಕಾರ ಅವರನ್ನು ಬಂಧಿಸಿತು. ೧೦ ಆಗಸ್ಟ್ ೧೯೪೨ರಲ್ಲಿ ಬಿಡುಗಡೆಯಾಗಿ ಸಮಾಜವಾದಿ ಭೂಗತ ಕಾರ್ಯಕರ್ತರೊಡನೆ ಆಂದೋಲನ ಮುಂದುವರಿಸಿ ಎಂಟು ತಿಂಗಳ ನಂತರ ೧೮ ಏಪ್ರಿಲ್ ೧೯೪೩ರಲ್ಲಿ ಮತ್ತೆ ಸೆರೆಸಿಕ್ಕಿದರು. ೧೯೪೫ರ ಪ್ರಾರಂಭದವರೆಗೆ ಬಂಧನದಲ್ಲಿದ್ದರು. ಹಲವು ಶ್ರೇಷ್ಠ ಇಂಗ್ಲಿಷ್ ಕಾದಂಬರಿಗಳ ಮರಾಠಿ ತರ್ಜುಮೆಯನ್ನು ಆ ದಿನಗಳಲ್ಲಿ ಮಾಡಿದರು.

೧೯೪೭-೪೭ರಲ್ಲಿ ಪಂಢರಪುರದ ವಿಠ್ಠಲಮಂದಿರದಲ್ಲಿ ಹರಿಜನ ಬಾಂಧವರಿಗೆ ಪ್ರವೇಶಾವಕಾಶ ದೊರಕಿಸುವ ಆಂದೋಲನದಲ್ಲಿ ಪ್ರಮುಖ ಪಾತ್ರವಹಿಸಿದ್ದವರು ಸೇನಾಪತಿ ಬಾಪಟ್ ಮತ್ತು ಸಾನೇ.

೧೯೪೮ರಲ್ಲಿ ಗಾಂಧಿ ಹತ್ಯೆಯಿಂದ ಸಾನೇ ಮಾನಸಿಕವಾಗಿ ತೀವ್ರ ವಿಚಲಿತರಾದರು. ಆಮೇಲಿನ ದಿನಗಳಲ್ಲಿ ರಾಷ್ಟ್ರೀಯ ಸೇವಾದಳವನ್ನು ಬೆಳೆಸುವುದರಲ್ಲಿ ತೊಡಗಿಕೊಂಡರು. 'ಶ್ರಮದಾನ ಪಥಕ' ಮೊದಲಾದ ಬಗೆಬಗೆಯ ರಚನಾತ್ಮಕ ಕಾರ್ಯಕ್ರಮಗಳನ್ನು ಮುನ್ನಡೆಸಿದರು.

ಸಾಮಾಜಿಕ ವಲಯದಲ್ಲಿ ಶಿಥಿಲತೆ ಹೆಚ್ಚುತ್ತಿದ್ದುದರಿಂದಲೋ ಅಥವಾ ಅನುತ್ಸಾಹಕರ ರಾಜಕೀಯ ಸನ್ನಿವೇಶಗಳಿಂದಲೋ ಬಹುಶಃ ಹತಾಶೆಗೊಳಗಾಗಿ ಅದನ್ನು ಭರಿಸಲಾರದೆ ೧೯೫೦ರ ಜೂನ್ ೧೧ರಂದು ನಿದ್ರೆಗುಳಿಗೆ ಸೇವಿಸಿ ಸಾನೇ. ತಮ್ಮ ಜೀವನಯಾತ್ರೆ ಮುಗಿಸಿದರು.

<u>ಪ್ರೇರಣದಾಯಕ ಬರಹ</u>

ಸಾನೇ ಸ್ವಭಾವತಃ ಭಾವಜೀವಿ. ತಮ್ಮ ಭಾವನೆಗಳನ್ನು ಅವಿಸ್ಮರಣೀಯ ರೀತಿಯಲ್ಲಿ ಕಾವ್ಯದಲ್ಲಿಯೂ ಗದ್ಯದಲ್ಲಿಯೂ ಅವರು ನಿವೇಶಗೊಳಿಸಿದ್ದಾರೆ. ಯಾರಾದರೂ ಹತ್ತುಜನ ಮಕ್ಕಳೋ ವಿದ್ಯಾರ್ಥಿಗಳೋ ತರುಣರೋ ಕಂಡರೆ ಅವರನ್ನು ಸುತ್ತಲೂ ಕೂಡಿಸಿಕೊಂಡು ಇತಿಹಸದ್ದೋ ಪುರಾಣದ್ದೋ ಪ್ರೇರಕ ಪ್ರಸಂಗಗಳನ್ನು ಹೇಳುವರು. ಮಕ್ಕಳಿಗೆ ಪೌರಾಣಿಕ ಕಥೆಗಳಲ್ಲದೆ ತಾವೇ ಬೋಧಕ ಕಥೆಗಳನ್ನು ರಚಿಸಿ ಹೇಳುವರು. ಹೀಗೆ ಅವರ ಕಾಲದಲ್ಲಿ ಸಾನೇ ವೈಶಿಷ್ಟ್ಯಮಯ ವ್ಯಕ್ತಿ ಎನಿಸಿದ್ದರು. ಅವರು ಬರೆದ ಅನೇಕ ಗ್ರಂಥಗಳು ಇವತ್ತಿಗೂ ಮೂಲ ಮರಾಠಿಯಲ್ಲಿಯೂ ಅನ್ಯಭಾಷೆಗಳಲ್ಲಿಯೂ ಜನಜನಿತವಾಗಿವೆ.

ಸಾಹಿತ್ಯಕ್ಷೇತ್ರದ ಸಾಧನೆಗಾಗಿ ಸಾನೇ ದೊಡ್ಡ ಸ್ಥಾನವನ್ನು ಪಡೆದಿದ್ದಾರೆ. ಅವರು ದೇಶಭಕ್ತರ ಬಗೆಗೆ ಉತ್ಕೃಷ್ಟ ಗದ್ಯ-ಪದ್ಯ ಕೃತಿಗಳನ್ನು ಬರೆದರು. ಛತ್ರಪತಿ ಶಿವಾಜಿ, ಈಶ್ವರಚಂದ್ರ ವಿದ್ಯಾಸಾಗರ, ಮಹಾತ್ಮ ಜ್ಯೋತಿಬಾಫುಲೆ, ಲೋಕಮಾನ್ಯ ತಿಲಕ್, ಗೋಪಾಲಕೃಷ್ಣ ಗೋಖಲೆ ಮೊದಲಾದ ಅನೇಕರ ಜೀವನ ಚರಿತ್ರೆಗಳನ್ನು ಅವರು ಬರೆದರು. ಶ್ರೀಕೃಷ್ಣ ಮೊದಲಾದ ಪೌರಾಣಿಕ-ಐತಿಹಾಸಿಕ ವ್ಯಕ್ತಿಗಳ ಬಗೆಗೆ, ಗಾಂಧಿ-ವಿನೋಬಾ ಬಗೆಗೆ ಬರೆದರು. ಪ್ರಬಂಧ-ಹರಟೆ-ಪತ್ರಗಳ ರೂಪದಲ್ಲಿ ವೈಚಾರಿಕ-ಸಾಂಸ್ಕೃತಿಕ ಸಾಹಿತ್ಯವನ್ನು ವಿಫುಲವಾಗಿ ಬರೆದರು. ಮಕ್ಕಳಿಗಾಗಿ ಅವರು ಬರೆದ ಕಥೆಗಳೇ ಐದಾರು ಸಂಪುಟಗಳಷ್ಟು ಇವೆ. ವಿಕ್ಟರ್ ಹ್ಯೂಗೋ, ಜಾರ್ಜ್ ಈಲಿಯಟ್, ಥಾಮಸ್ ಹಾರ್ಡಿ ಮೊದಲಾದವರ ಶ್ರೇಷ್ಠ ಕಾದಂಬರಿಗಳನ್ನು ಮರಾಠಿಗೆ ಅನುವಾದಿಸಿದ್ದಾರೆ. ರವೀಂದ್ರನಾಥ ಠಾಕೂರ್, ಲಿಯೋ ಟಾಲ್‌ಸ್ಟಾಯ್ ಬರಹಗಳನ್ನೂ ವಿಲ್‌ಡ್ಯೂರಂಟ್‌ನ 'ಸ್ಟೋರಿ ಆಫ್ ಸಿವಿಲಿಜೇಶನ್' ಉದ್ಗ್ರಂಥವನ್ನೂ ಅವರು ಅನುವಾದ ಮಾಡಿದರು. 'ಆಸ್ತಿಕ', 'ಕ್ರಾಂತಿ' ಮೊದಲಾದ ಹದಿನಾಲ್ಕು ಸ್ವತಂತ್ರ ಕಾದಂಬರಿಗಳನ್ನು ಅವರು ಬರೆದರು.

ಈಗಾಗಲೆ ಪ್ರಸ್ತಾವಿತವಾಗಿರುವ 'ಶ್ಯಾಮನ ತಾಯಿ' ಸಾಂಸ್ಕೃತಿಕ ಮತ್ತು ಪ್ರಾದೇಶಿಕ ಸೊಗಡಿನ ಒಂದು ವಿಶಿಷ್ಟ ಕಾದಂಬರಿ ಎಂದು ಹೆಸರಾಗಿದೆ. ಪರಿಶುದ್ಧತೆ, ಸರಳತೆ, ಉದಾತ್ತತೆ, ಅನುಕಂಪ ಮೊದಲಾದ ಗುಣಗಳೆಲ್ಲ ಸಾಂದ್ರವಾಗಿ ಹರಳುಗಟ್ಟಿರುವ ಆ

ತಾಯಿಯ ಚಿತ್ರಣ ಭಾರತೀಯ ಸಾಹಿತ್ಯದಲ್ಲಿಯೇ ಅನುಪಮವೆನಿಸಿದೆ. 'ಭಾರತಮಾತೆಯನ್ನೇ ನಾನು ನನ್ನ ತಾಯಿಯಲ್ಲಿ ಕಂಡೆ' ಎಂಬ ಮಾತನ್ನೂ ಸಾನೇ ಅಲ್ಲಿ ಹೇಳಿದ್ದಾರೆ.

ಸಾನೇ ಗುರೂಜಿ ಅವರ ಕವನಗಳು ಅತ್ಯಂತ ಮನೋಹರವಾದವು.

ಶ್ರೇಷ್ಠ ಕಾವ್ಯ ನಿರ್ಮಿತಿ

ಸಾನೇ ಒಬ್ಬ ಶ್ರೇಷ್ಠ ಕವಿ. ಭಾವನೆಯ ತೀವ್ರತೆ ಮಡುಗಟ್ಟಿದಾಗೆಲ್ಲ ಅದು ಕಾವ್ಯರೂಪದಲ್ಲಿ ಹೊಮ್ಮುತ್ತಿತ್ತು. ಹೀಗೆ ದೈವಭಕ್ತಿಪರವಾದವು, ಪ್ರಕೃತಿಪ್ರೇಮ ಕುರಿತವು. ದೇಶಭಕ್ತಿಯ ಅಭಿವ್ಯಕ್ತಿಯ ರೂಪವಾದವು ಈ ಎಲ್ಲ ಪ್ರಕಾರಗಳ ಕವನಗಳನ್ನು ಅವರು ರಚಿಸಿದ್ದಾರೆ. ಸಾಮಾನ್ಯವಾಗಿ ಕಾವ್ಯವೆಂದರೆ ಅದರಲ್ಲಿ ಬಗೆಬಗೆಯ ಅಲಂಕಾರಗಳೂ ತಂತ್ರಗಾರಿಕೆಗಳೂ ಇರುತ್ತವೆ. ಆದರೆ ಸಾನೇ ಅವರ ಕಾವ್ಯಗಳ ಭಾವನೆ, ಮಾತು – ಎಲ್ಲವೂ ನೇರವಾದದ್ದು. ಅದರಲ್ಲಿ ಎದ್ದು ತೋರುವ ಸಾಮಾಜಿಕ ತುಡಿತ ನೇರವಾಗಿ ಹೃದಯದಿಂದ ಹೊಮ್ಮಿದುದು. ಒಂದು ಪದ್ಯದಲ್ಲಿ ಅವರು ಹೀಗೆಂದಿದ್ದರು:

"ಈ ಜೀವನ ಇಷ್ಟು ದುರ್ಭರವಾಗಿರುವಾಗ, ದಾಸ್ಯದ ಅಪಮಾನ ತುಂಬಿರುವಾಗ, ನಾನು ರಮ್ಯ ರೀತಿಯ ಹಾಡನ್ನು ಹೇಗೆ ತಾನೇ ಹಾಡಲಿ?"

ಅವರ ಇನ್ನೊಂದು ಪ್ರಸಿದ್ಧ ಪದ್ಯ ('ಭಾರತವು ಕ್ಷಾತ್ರಶಕ್ತಿಯ ಸಾಗರವಾಗಲಿ') ಎಂಬುದು. ಈ ಪದ್ಯದ ಪಂಕ್ತಿಗಳನ್ನು ೧೯೪೦ರ ದಶಕದಲ್ಲಿ ಎಲ್ಲ ಕಡೆ ತರುಣರ ಬಾಯಲ್ಲಿ ಕೇಳಬಹುದಾಗಿತ್ತು.

೧೯೪೯-೫೦ರ ದಿನಗಳಲ್ಲಿ ತುಂಬಾ ಪ್ರಚಲಿವಾಗಿದ್ದ ಒಂದು ಹಾಡು:

"ನಾವು ಸ್ವಾತಂತ್ರ್ಯದ ಸಿಪಾಯಿಗಳು. ದೇಶಮಾತೆಯನ್ನು ನಾವು ಭವ್ಯಳನ್ನಾಗಿ, ಸುಖಮಯಳನ್ನಾಗಿ ಮಾಡೋಣ"

(ಆ ಹಾಡು ಸಾನೇ ರಚಿಸಿದ್ದು ಎಂದು ನನಗೆ ತಿಳಿದದ್ದು ಎಷ್ಟೋ ವರ್ಷ ಕಳೆದ ಮೇಲೆ!)

ಅಂತಹದೇ ಇನ್ನೊಂದು ಜನಪ್ರಿಯ ಹಾಡು ಹೀಗಿತ್ತು:

"ಶ್ರೀಸಾಮಾನ್ಯರಿಗೆ, ರೈತರಿಗೆ, ಕಾರ್ಮಿಕರಿಗೆ ರಾಜ್ಯಾಧಿಕಾರವನ್ನು ತಂದುಕೊಡುವುದಕ್ಕಾಗಿ ನಮ್ಮ ಪ್ರಾಣಗಳನ್ನು ಪಣವಾಗಿಡೋಣ"

******

'ಸಂಸ್ಕೃತಿ' ಶಬ್ದಾರ್ಥ

ಸಾನೇ ಅವರ ಬರಹಗಳಲ್ಲಿ ಮಹತ್ವದ್ದಾದ 'ಭಾರತೀಯ ಸಂಸ್ಕೃತಿ' ಗ್ರಂಥದ ಕಿರುಪರಿಚಯವನ್ನು ಈಗ ಮಾಡಿಕೊಳ್ಳೋಣ. 'ಸಂಸ್ಕೃತಿ', 'ಕಲ್ಚರ್' – ಈ ಮಾತುಗಳನ್ನು ಈಗೀಗ ಪ್ರಯುಕ್ತವಾಗುತ್ತಿರುವ ವಿಶಿಷ್ಟಾರ್ಥದಲ್ಲಿ ಬಳಕೆಗೆ ಬಂದದ್ದು ಕಳೆದ ನೂರೈವತ್ತು ವರ್ಷಗಳಲ್ಲಿಯಷ್ಟೆ. ನಮ್ಮ ಪಾರಂಪರಿಕ ವಾಙ್ಮಯದಲ್ಲಿ ರೂಢಿಯಲ್ಲಿದ್ದುದು 'ಸಂಸ್ಕಾರ' ಎಂಬ ಮಾತು. ನಮ್ಮ ಲೌಕಿಕಜೀವನದಲ್ಲಿ ಸೌಂದರ್ಯ, ಮಾಧುರ್ಯ, ಸಾತ್ವಿಕತೆ, ಸಾಮರಸ್ಯ, ಉದಾತ್ತತೆ ಮೊದಲಾದವನ್ನು ಮೂಡಿಸುವಂತಹ ಮೌಲ್ಯಗಳನ್ನೂ ವರ್ತನೆಯನ್ನೂ ಸಗಟಾಗಿ 'ಸಂಸ್ಕೃತಿ' ಎಂದು ಕರೆಯಲಾಗಿದೆ. ಸಂಸ್ಕಾರದ ಅಥವಾ ಸಂಸ್ಕರಣದ ಫಲಿತಾಂಶ ಸಂಸ್ಕೃತಿ. ಬದುಕಿನ ಸನ್ನಿವೇಶಗಳಲ್ಲಿ, ಸಂಪರ್ಕಗಳಲ್ಲಿ

ಹಿತಕರವಾದದ್ದು ಯಾವುದೋ ಅದನ್ನು ಗುರುತಿಸಿ ಅನುಸರಿಸುವುದು ಸಂಸ್ಕೃತಿ. ಧರ್ಮದ ಆನ್ವಯಿಕ ರೂಪ ಇದು ಎನ್ನಬಹುದು. ಹೀಗಿರುವುದರಿಂದ ಕೇವಲ ಶಾಸ್ತ್ರ-ಸ್ಮೃತಿಗಳ ಆಧಾರದಿಂದ ಸಂಸ್ಕೃತಿಯ ಕಲ್ಪನೆಯನ್ನು ಪರಿಶೀಲಿಸುವುದು ಪರ್ಯಾಪ್ತವಾಗುವುದಿಲ್ಲ. ಶ್ರುತಿ-ಸ್ಮೃತಿ-ಪುರಾಣಗಳಲ್ಲಿ ಇರುವ ಭಾವನೆಗಳ ಬೆಳಕಿನಲ್ಲಿಯೂ ಇತಿಹಾಸದ ಬೆಳಕಿನಲ್ಲಿಯೂ ಸಾಂಪ್ರತಜೀವನವನ್ನು ಅವಲೋಕಿಸಬೇಕಾಗಿದೆ. ಇದು ಫಲಪ್ರದವಾಗಬೇಕಾದರೆ ನಮ್ಮಲ್ಲಿ ಒಂದು 'ಪಾಸಿಟಿವ್' ರಚನಾತ್ಮಕ ದೃಷ್ಟಿ ಇರಬೇಕಾಗುತ್ತದೆ. ಸಾನೇ ಅವರು ಈ ದೃಷ್ಟಿಯಿಂದ ವಿಶ್ಲೇಷಣೆ, ಪ್ರತಿಪಾದನೆ ಮಾಡಿದ್ದಾರೆ. ಆದ್ದರಿಂದ ಅವರ ಬರಹದಲ್ಲಿ ನಮಗೆ ನೇರ ಉಪಯುಕ್ತವಾದ ಒಳನೋಟಗಳು ಧಾರಾಳವಾಗಿ ಲಬ್ಧವಿವೆ.

ಸಮಾಜಾಭಿಮುಖ ದೃಷ್ಟಿ

ಈ ಗ್ರಂಥದ ರಚನೆಗೆ ಸ್ವಲ್ಪ ಹಿನ್ನೆಲೆ ಇದೆ.

ಸಾನೇ ಅಮಲ್ನೇರ್‌ನ ತತ್ವಶಾಸ್ತ್ರಾಧ್ಯಯನ ಸಂಸ್ಥೆಯಲ್ಲಿ ಎಂ.ಎ.ಪದವಿಗಾಗಿ ವ್ಯಾಸಂಗ ಮಾಡುತ್ತಿದ್ದಾಗ ಒಂದು ರೀತಿಯ ಅತೃಪ್ತಿಯ ಅನುಭವ ಅವರಿಗೆ ಆಗುತ್ತಿತ್ತು. ಅದಕ್ಕೆ ಕಾರಣ ಇದು: ಸಾನೇ ಅವರಿಗೆ ಬೇಕಾಗಿದ್ದುದು ಜಟಿಲ ಶಾಸ್ತ್ರವಿವರಗಳಿಗಿಂತ ಮಿಗಿಲಾಗಿ ತತ್ವಶಾಸ್ತ್ರದಿಂದ ಈಗಿನ ಜೀವನಕ್ಕೆ ಉಪಯುಕ್ತವಾದ ದಿಗ್ದರ್ಶನ ಏನಾದರೂ ಸಿಕ್ಕೀತೆ -ಎಂಬುದು. ಆದರೆ ಅಲ್ಲಿಯೂ ಬೇರೆಕಡೆಗಳಲ್ಲಿಯೂ ಹೆಚ್ಚಾಗಿ ಚರ್ಚೆಯಾಗುತ್ತಿದ್ದವು ಬಹುಮಟ್ಟಿಗೆ ಜೀವನಕ್ಕೆ ನೇರ ಸಂಬಂಧಿಸಿರದ ಶಾಸ್ತ್ರವಿಷಯಗಳು. ಇನ್ನೊಂದು ಕಡೆ ಗ್ರಾಮೀಣರೂ ಸೇರಿದಂತೆ ಜನಸಾಮಾನ್ಯರ ಎಷ್ಟೋ ರೀತಿ-ನೀತಿಗಳಲ್ಲಿ ನಿಜವಾದ ತಾತ್ವಿಕತೆಯು ಪ್ರತಿಫಲಿತವಾಗಿರುತ್ತದೆ. ಇಂಥವರಲ್ಲಿ ಎಷ್ಟೋ ಮಂದಿಗೆ ಓದು-ಬರಹ ಕೂಡ ಬಾರದೆ ಇರಬಹುದು. ಈ ವೈದೃಶ್ಯ ಸಾನೇ ಅವರಿಗೆ ವಿರೋಧಾಭಾಸದ್ದೆನಿಸಿತು. ಕರ್ಮಶ್ರದ್ಧೆಯನ್ನು ಭಗವದ್ಗೀತೆಯ ಮುಖ್ಯ ಸಂದೇಶವೆಂದು ಪ್ರತಿಪಾದಿಸಿದ್ದ ಲೋಕಮಾನ್ಯ ತಿಲಕರಂಥವರ ದಾರಿ ಸಾನೇ ಅವರಿಗೆ ಹೆಚ್ಚು ಮೆಚ್ಚಿಕೆಯಾಗಿತ್ತು. ಈ ಎರಡು ಪ್ರಸ್ಥಾನಗಳ ನಡುವೆ ಸಾಂಗತ್ಯವನ್ನು ನಿರ್ಮಿಸುವುದು ೨೦ನೇ ಶತಮಾನದ ಸನ್ನಿವೇಶದಲ್ಲಿ ಆವಶ್ಯಕವಿದೆ - ಎಂದು ಅವರಿಗೆ ಅನ್ನಿಸಿತು. ಶಾಸ್ತ್ರಪರಂಪರೆಯಲ್ಲಿ ಅವರಿಗೆ ನಿತಾಂತ ಶ್ರದ್ಧೆ ಇದ್ದೇ ಇತ್ತು. ಆದರೆ ತಮ್ಮ ಯಾವುದೇ ಪ್ರಯಾಸಗಳು ಸಮಾಜಾಭಿಮುಖವೇ ಆಗಿರಬೇಕು ಎಂಬುದು ಅವರು ತಮಗಾಗಿ ಆರಿಸಿಕೊಂಡಿದ್ದ ಮಾರ್ಗ. ಅವರ ಈ ಆಶಯದ ಚಿಂತನೆಯ ಫಲ 'ಭಾರತೀಯ ಸಂಸ್ಕೃತಿ' ಹೆಸರಿನ ಬರಹ.

ಹಲವಾರು ವರ್ಷ ಇಲ್ಲಿಯ ಸಮಾಜವನ್ನು ನಿಕಟವಾಗಿ ಅವಲೋಕಿಸಿದಾಗ ಅವರಿಗೆ ನಿಶ್ಚಯಗೊಂಡಿದ್ದುದು ಈ ದೇಶದ ಜನಸಮುದಾಯವನ್ನು ಅಖಂಡವಾಗಿ ಉಳಿಸಿರುವುದು ಸಾಂಸ್ಕೃತಿಕ ಅಂತಃಸಂಬಂಧಗಳೇ ಹೊರತು ರಾಜಕೀಯಾದಿ ಚಿಂತನೆ-ಧೋರಣೆಗಳು ಅಲ್ಲ ಎಂಬುದು; ಪರಂಪರಾಗತ ಆಚರಣೆಗಳೂ ರಾಷ್ಟ್ರೀಯ ಸಾಹಿತ್ಯವೂ ಜನತೆಯನ್ನು ಒಂದಾಗಿ ಬೆಸೆದಿರುವ ಶಕ್ತಿಗಳು ಎಂಬುದು; ರಾಷ್ಟ್ರೀಯ ವಾಙ್ಮಯವು ದೇಶಕಾಲಾತೀತವಾದುದು ಎಂಬುದು; ಅನಕ್ಷರಸ್ಥರೂ ಸೇರಿದಂತೆ ಈ ದೇಶದ ಬಹುಸಂಖ್ಯಾತರು ದೈವದಲ್ಲಿಯೂ ನೈತಿಕಮೌಲ್ಯಗಳಲ್ಲಿಯೂ ಶ್ರದ್ಧೆಯನ್ನು ಸ್ವಭಾವಸಹಜವಾಗಿಯೆ ತಳೆದಿರುತ್ತಾರೆ ಎಂಬುದು. ದಾರ್ಶನಿಕ ಜಿಜ್ಞಾಸೆಗಳು

ಮಹತ್ವದವಾದರೂ ಸಾಮಾನ್ಯಜನರಮಟ್ಟಿಗೆ ಆ ಗಹನಚಿಂತನೆಯ ಸಾಕ್ಷಾತ್ಕೃತ ರೂಪಗಳಾದ ಭಕ್ತಸಂತರ ಬೋಧನೆಗಳೇ ಪರ್ಯಾಪ್ತವೆನಿಸಿವೆ. ಜನರ ದೈನಂದಿನ ಜೀವನಸನ್ನಿವೇಶಗಳನ್ನೂ ಪೌರಾಣಿಕ-ಸಾಮಾಜಿಕಾದಿ ಸಂದರ್ಭಗಳನ್ನೂ ಕುರಿತು ಸಾಮಾನ್ಯಜನರೊಡನೆ ನಡೆಸುತ್ತಿದ್ದ ಸಂವಾದಗಳ ಮಥಿತಾರ್ಥವನ್ನು ಬರಹದ ರೂಪದಲ್ಲಿ ಸಂಗ್ರಹಿಸಿಕೊಟ್ಟರೆ ಚಿಂತನೆಗೆ ನೆರವಾಗುವುದೆಂಬ ಆಕಾಂಕ್ಷೆ ಸಹೃದಯರಿಂದ ಆಗಾಗ ವ್ಯಕ್ತವಾಗುತ್ತಿತ್ತು. ಇದು ಅವಶ್ಯವೆಂದು ಸಾನೇ ಗುರೂಜೀ ಅವರಿಗೂ ಕ್ರಮೇಣ ಅನ್ನಿಸತೊಡಗಿತು. ಹೀಗೆ ತಮ್ಮ ಆಧಾರಭೂತ ವಿಶ್ಲೇಷಣೆಗಳನ್ನು ಅವರು ಲಿಖಿತಪಡಿಸಹೊರಟರು. ಆಸಕ್ತ ತರುಣರೊಡನೆ ಅವರ ಸಂವಾದ ಗೋಷ್ಠಿಗಳು ನಿರಂತರ ನಡೆಯುತ್ತಿದ್ದವಷ್ಟೆ. ಆ ಸಂವಾದಗಳಲ್ಲಿ ಹೊಮ್ಮಿದ ವಿಚಾರಗಳನ್ನು ಅವರು ಆಗಿಂದಾಗ ಬರೆದಿರಿಸತೊಡಗಿದರು. ಈ ಸಂಕಲನವೇ 'ಭಾರತೀಯ ಸಂಸಕೃತಿ' ಎಂಬ ಶೀರ್ಷಿಕೆಯಲ್ಲಿ ಪ್ರಸಿದ್ಧಗೊಂಡಿರುವುದು.

ಶ್ರದ್ಧೆ-ವೈಚಾರಿಕತೆಗಳ ಮೇಳನ

ಸಹಜವಾಗಿಯೆ ಅನೇಕ ಪೌರಾಣಿಕ-ಐತಿಹಾಸಿಕ ವ್ಯಕ್ತಿಗಳ ಮತ್ತು ಸಂದರ್ಭಗಳ ಉಲ್ಲೇಖಗಳು ಈ ಸಂವಾದಸರಣಿಯಲ್ಲಿ ಬಂದಿವೆ. ಆ ಪ್ರಸಂಗಗಳು ಸುವಿದಿತವಾದವೇ. ವಿಶೇಷವೆಂದರೆ ಒಂದೊಂದು ಸಂದರ್ಭದಲ್ಲಿಯೂ ಆಚರಣೆಯ ರೀತಿನೀತಿಗಳಲ್ಲಿಯೂ ಅಡಗಿರುವ ಉದಾತ್ತ ಮೌಲ್ಯಗಳನ್ನು ಸಾನೇ ಅವರು ಪ್ರಕಟೀಕರಿಸಿರುವುದು.

ಸಾನೇ ಅವರು ಭಾವಜೀವಿಯಾಗಿದ್ದಂತೆ ವಿಚಾರಪರರೂ ಆದವರು; ಶ್ರದ್ಧೆಯಿಂದ ವೈಚಾರಿಕತೆಯೂ ವೈಜ್ಞಾನಿಕತೆಯಿಂದ ಶ್ರದ್ಧೆಯೂ ಪುಷ್ಟಗೊಳ್ಳಬೇಕು ಎಂಬುದು ಅವರ ಧೋರಣೆಯಾಗಿದ್ದಿತು. ವಿಚಾರೈಕನಿಷ್ಠರಿಗೆ ಅವರು ಹೇಳುತ್ತಿದ್ದುದು ಇದು: "ಜೀವನವೆಂದರೆ ಬರಿಯ ತರ್ಕವಲ್ಲ. ಕ್ಲೇಶಗ್ರಸ್ತ ಜನಸಾಮಾನ್ಯರಿಗೆ ಸಾಂತ್ವನ, ಆಸರೆ ಎರಡೂ ಬೇಕಾಗುತ್ತದೆ. ಇವು ಅವರಿಗೆ ದೈವಶ್ರದ್ಧೆಯಿಂದ ಲಭಿಸುತ್ತದೆ - ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಢೋಂಗಿಜನರನ್ನೂ ದೇವರ ಹೆಸರಿನ ದುರುಪಯೋಗ ಮಾಡುವವರನ್ನೂ ಬೇಕಾದರೆ ನೀವು ಖಂಡಿಸಿರಿ. ಆದರೆ ಉದ್ವೇಗಗಳಿಂದ ನಮ್ಮಂತಹ ಸಾಮಾನ್ಯರನ್ನು ರಕ್ಷಿಸಬಲ್ಲದ್ದು ದೈವಶ್ರದ್ಧೆ. ನೀತಿ-ಅನೀತಿಗಳನ್ನು ಬೌದ್ಧಿಕವಾಗಿಯೋ ಗ್ರಂಥಸ್ಥವಾಗಿಯೋ ಗ್ರಹಿಸಿದರೆ ಸಾಲದು. ನೀತಿವಂತಿಕೆಯು ಬದುಕಿನ ರೀತಿಯಲ್ಲಿ ಪ್ರತಿಫಲಿತವಾಗಬೇಕಾದುದೂ ಅವಶ್ಯವಿದೆ. ಇದನ್ನೇ ನಾವು ಆಚಾರಧರ್ಮ ಎನ್ನುವುದು". ಇದನ್ನೇ ಶಬ್ದಾಂತರಗಳಲ್ಲಿ ಹೇಳಬೇಕೆಂದರೆ ಕರ್ಮ-ಭಕ್ತಿ-ಜ್ಞಾನ ಸಮನ್ವಯವೆನ್ನಬಹುದು. ಇದೇ ಭಾರತೀಯ ಸಂಸ್ಕೃತಿಯ ಹೃದ್ಭಾಗ. ಇಲ್ಲಿ ಹೃದಯವಂತಿಕೆ, ಮೇಧಾವಂತಿಕೆ - ಎರಡರ ಉಪಾಸನೆಯೂ ಉಂಟು. ಪರಿಶುದ್ಧ ಜ್ಞಾನವನ್ನೂ ಭಾವದ ಔದಾರ್ಯವನ್ನೂ ಮೇಳನಗೊಳಿಸಿರುವುದೇ ಭಾರತೀಯ ಸಂಸ್ಕೃತಿಯ ವಿಶಿಷ್ಟತೆ.

ಹೀಗೆ 'ಅದ್ವೈತ' ಎಂದರೆ ವೇದಾಂತದರ್ಶನವನ್ನು ದಿನನಿತ್ಯದ ಅನುಭವದ ನೆಲೆಯಲ್ಲಿಯೆ ಸಾನೇ ಅವರು ಪ್ರತಿಪಾದಿಸಿದ್ದಾರೆ; ಪ್ರಕೃತಿಸೃಷ್ಟಿಯಷ್ಟೂ ನಮಗೆ ಬೋಧಿಸುವುದು ಅದ್ವೈತವನ್ನೇ - ಎಂದಿದ್ದಾರೆ. ಕಾಲಗತಿಯಲ್ಲಿ ಉದಾತ್ತ ಆಶಯಗಳು ಮಸಕಾಗಿ ಬಾಹ್ಯಸಂಕೇತಗಳೇ ಮುಖ್ಯವೆನಿಸಿರುವುದು ವಿಪರ್ಯಾಸ.

ಸಂಸ್ಕೃತಿಯನ್ನು ಪ್ರತಿಪಾದಿಸುವ ಓಘದಲ್ಲಿ ಸಾನೇ ಅವರು ವಾಸ್ತವೇತಿಹಾಸವನ್ನು

ಮರೆತಿಲ್ಲ. ಒಂದು ಕಾಲಖಂಡದಲ್ಲಿ ಜಾತಿಪಂಥಾದಿ ಸಂಕುಚಿತತೆಗಳಿಂದಾಗಿ ಹೇಗೆ ನಮ್ಮ ಸಮಾಜವು ದುರ್ಬಲಗೊಂಡಿತು ಎಂಬುದನ್ನೂ ಅವರು ಪ್ರಸ್ತಾವಿಸಿದ್ದಾರೆ. ಸಮಾಜದ ಪ್ರಜ್ಞಾವಂತಿಕೆ ವೃದ್ಧಿಹೊಂದಿದಲ್ಲಿ ಹಲವಾರು ಸಮಸ್ಯೆಗಳು ನೀಗುವುದಲ್ಲದೆ ಸರ್ವಾಂಗೀಣ ಅಭ್ಯುದಯಕ್ಕೆ ಅದು ದಾರಿಯಾಗುತ್ತದೆ – ಎಂದಿದ್ದಾರೆ.

ವಿಶೇಷವೆಂದರೆ ಸ್ನಾನ-ಶೌಚಾದಿಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಆರ್ಷ ರೂಢಿಗಳ ಮುಂದುವರಿಕೆಯು ಸಮಾಜಹಿತಸಾಧಕ – ಎಂದಿದ್ದಾರೆ.

ವೈಯಕ್ತಿಕ ಪರಿಧಿಗಳನ್ನು ಮೀರಿ ಸಮಾಜದೊಡನೆ ಐಕ್ಯಭಾವನೆಯನ್ನು ಬೆಳೆಸಿಕೊಳ್ಳುವುದನ್ನೇ ನಾವು 'ಮೋಕ್ಷ'ವೆಂದು ಪರಿಗಣಿಸುವುದು ಯುಕ್ತ – ಎಂಬ ಸಾನೆ ಅವರ ಮಂಡನೆ ಅವರ ಚಿಂತನವೈಶಾಲ್ಯದ ದ್ಯೋತಕವಾಗಿದೆ.

ಸಮಾಜದ ಆಳವಾದ ಅಧ್ಯಯನವೂ ಭೌತರಾಸಾಯನಿಕಾದಿಗಳಂತೆ ಒಂದು ವಿಜ್ಞಾನವೇ – ಎಂಬುದು ಅವರ ಮಂಡನೆ.

ಅನುತ್ಸಾಹಕರ ಸನ್ನಿವೇಶದಲ್ಲಿಯೂ ಗಮ್ಯದತ್ತ ಪಯಣವನ್ನು ಶ್ರದ್ಧೆಯಿಂದ ನಡೆಸುತ್ತಿರಬೇಕೆಂಬುದೇ ಗೀತೋಪದೇಶದ ಸಾಂಪ್ರತಕಾಲದ ಅನ್ವೇಯತೆ ಎಂಬುದನ್ನು ಮಹಾದೇವ ಗೋವಿಂದ ರಾನಡೆ, ಗೋಪಾಲಕೃಷ್ಣ ಗೋಖಲೆ ಮೊದಲಾದ ಮೇರುವ್ಯಕ್ತಿಗಳ ನಿದರ್ಶನಗಳ ಮೂಲಕ ಸಾನೇ ಪ್ರತಿಪಾದಿಸಿದ್ದಾರೆ.

ಔಪನಿಷದ ದರ್ಶನ

ಗುರು-ಶಿಷ್ಯ ಪರಂಪರೆ, ನಾಲ್ಕು ಪುರುಷಾರ್ಥಗಳು, ನಾಲ್ಕು ಆಶ್ರಮಗಳು, ಮಹಿಳೆಯ ಔನ್ನತ್ಯ, ಪ್ರಾಣಿ-ಪಶು-ಪರಿಸರಪ್ರೇಮ ಮೊದಲಾದ ಅಂಶಗಳ ಬಗೆಗೂ ಅತ್ಯಂತ ಹೃದ್ಯವಾದ ವಿಶ್ಲೇಷಣೆ ಈ ಗ್ರಂಥದಲ್ಲಿ ಇದೆ (ಅಧ್ಯಾಯಗಳು ೧೧-೧೫). ತಾತ್ವಿಕ ದೃಷ್ಟಿಯಿಂದಂತೂ ಇದನ್ನು ಔಪನಿಷದ ದರ್ಶನದ ಪ್ರಕೃತಾನ್ವಯ ಸಾರಸಂಗ್ರವೆಂದೇ ಹೇಳಬಹುದು.

ಭಾರತೀಯ ಸಂಸ್ಕೃತಿಯ ಬಗೆಗೆ ತಮ್ಮ ಅಂತರಂಗದಲ್ಲಿ ಆರಾಧನಾಭಾವ ಇರುವುದಕ್ಕೆ ಸಾನೇ ಅವರು ನೀಡುವ ಕಾರಣಗಳು 'ಉದಾರವಾದ ಭಾವನೆ ಮತ್ತು ನಿರ್ಮಲವಾದ ಜ್ಞಾನದಿಂದ ಜೀವನದಲ್ಲಿ ಸೌಂದರ್ಯವನ್ನು ಬೀರುವ ಸಂಸ್ಕೃತಿ ಇದು' ... 'ಭಾರತೀಯ ಸಂಸ್ಕೃತಿಯೆಂದರೆ ಸಾಂತದಿಂದ ಅನಂತಕ್ಕೆ, ಕತ್ತಲೆಯೊಳಗಿಂದ ಬೆಳಕಿಗೆ, ವಿರೋಧದಿಂದ ವಿವೇಕಕ್ಕೆ, ಕೆಸರಿನಿಂದ ಕಮಲಕ್ಕೆ, ಕರ್ಕಶತೆಯಿಂದ ಸಂಗೀತದ ಕಡೆಗೆ ವಿಕಾಸವಾಗುವ ಸಂಸ್ಕೃತಿ' – ಎಂಬವು.

ಯಾವ ಸಂಕೇತಗಳಲ್ಲಿ ನಾವು ನೈಜ ಭಾರತೀಯ ಸಂಸ್ಕೃತಿಯ ಅಭಿವ್ಯಕ್ತಿಯನ್ನು ನಿಚ್ಚಳವಾಗಿ ಗುರುತಿಸಬಹುದು – ಎಂದು ವಿಶ್ಲೇಷಿಸುವುದಕ್ಕೆ ತೊಡಗಿದ ಸಾನೇ ಒಂದು ಸುದೀರ್ಘ ಪಟ್ಟಿಯನ್ನೇ ಕೊಟ್ಟು, ಆ ಸಂಕೇತಗಳಲ್ಲೊಂದೊಂದೂ ಎಷ್ಟು ಅರ್ಥಪೂರ್ಣವಾಗಿದೆ ಎಂದು ವ್ಯಾಖ್ಯಾನ ಮಾಡಿದ್ದಾರೆ. ಅವರು ನಿದರ್ಶನಾರ್ಥ ಯಾವ ಸಂಗತಿಗಳನ್ನು ಹೀಗೆ ವಿಶ್ಲೇಷಿಸಿ ಹೇಳಿದ್ದಾರೆ ಎಂದು ಗಮನಿಸುವುದು ಸ್ವಾರಸ್ಯಕರ. ಯಜ್ಞ, ಉಪನಯನ, ಹಣೆಯಲ್ಲಿ ಧರಿಸುವ ಲಾಂಛನಗಳು, ಮೂರ್ತಿಪೂಜನ, ನೈವೇದ್ಯ, ಮಂಗಳಾರತಿ, ಅಭಿಷೇಕ, ವಿವಾಹದೊಡಗೂಡಿದ ಕಲಾಪಗಳು – ಇಂತಹ ಹತ್ತಾರು ಸಮಾಜರೂಢಿಗಳಲ್ಲಿ ಅವರಿಗೆ ಅರ್ಥವಂತಿಕೆ ಕಂಡಿದೆ.

ಸಾಂಕೇತಿಕಾರ್ಥಾನುಸಂಧಾನ

ಇಲ್ಲಿ ನಾವು ಲಕ್ಷಿಸಬೇಕಾದ ಅಂಶವೆಂದರೆ: ಪರಂಪರೆಯಿಂದ ಬಂದ ಪದ್ಧತಿಗಳನ್ನು ಅದ್ಯತನೀಯ-ಸಮಕಾಲೀನ ದೃಷ್ಟಿಯಿಂದ ಸಮೀಕ್ಷಿಸಲು ಹೊರಟವರು ಸಾನೇ. ಅಂತಹ ವಿಚಾರವಂತರ ಕಣ್ಣಿಗೆ ನಮ್ಮ ಸಮಾಜದ ಸಾಂಪ್ರದಾಯಿಕ ಆಚರಣೆಗಳು ಮಹತ್ವದವು ಎನಿಸಿವೆ. ಆರೋಗ್ಯಕರ ಮನೋರಚನೆ ಇರುವವರ ಸ್ಪಂದನ ಹೇಗಿರುತ್ತದೆ ಎಂಬುದಕ್ಕೆ ಇದು ಒಂದು ಉತ್ತಮ ನಿದರ್ಶನ. ಹಾಗೆಂದು ಸಾಂಪ್ರದಾಯಿಕವಾದ್ದನ್ನೆಲ್ಲ ಯಥಾಶ್ರುತವಾಗಿ ಸ್ವೀಕರಿಸುವ ಶ್ರದ್ಧಾಜಾಡ್ಯ ಇದ್ದವರಲ್ಲ ಅವರು. ಪರಂಪರಾಗತ ಆಖ್ಯಾನ-ವ್ಯಾಖ್ಯಾನಗಳಲ್ಲಿ ಈ ಕಾಲದ ಸನ್ನಿವೇಶಗಳಲ್ಲಿ ಒಪ್ಪಲಾಗದಂಥವನ್ನು ಟೀಕಿಸಲು ಅವರು ಹಿಂದೆಗೆದವರಲ್ಲ. ಅವರಲ್ಲಿ ಸುಧಾರಕ ಪ್ರವೃತ್ತಿಯು ಪ್ರಖರವಾಗಿಯೆ ಇದ್ದಿತು. ಉದಾಹರಣೆಗೆ ವಿಧವೆಯರನ್ನು ಶುಭಸಮಾರಂಭಗಳಿಂದ ದೂರ ಇರಿಸುವುದು ಮೊದಲಾದ ಆಧಾರರಹಿತ ಸಮಾಜ ರೂಢಿಗಳನ್ನು ಅವರು ಕಟುವಾಗಿಯೆ ಟೀಕಿಸಿದರು. ಆದರೂ ಹಿಂದಿನಿಂದ ಉಳಿದು ಬಂದಿರುವ ಅನೇಕ ಆಚರಣೆ-ಕಲಾಪಗಳಲ್ಲಿ ಅರ್ಥಶ್ರೀಮಂತಿಕೆಯನ್ನು ಅವರು ಗುರುತಿಸಿದರು. ಸಮಾಜವು ಆ ವಿಶಾಲಾರ್ಥಗಳನ್ನು ಮನನಮಾಡಿ ಅರಿತುಕೊಂಡು ಆಚರಿಸಬೇಕು - ಎಂಬುದು ಅವರ ದೃಷ್ಟಿಯಾಗಿತ್ತು. ಎಷ್ಟೋ ನಿತ್ಯರೂಢಿಗಳಲ್ಲಿ ಭಾವನಾತ್ಮಕ ಅಂಶಗಳತ್ತ ಬೆರಳನ್ನು ಚಾಚಿ ತೋರುವ ಅವರ ರೀತಿಯು ಮನೋಹರವಾಗಿದೆ. ಉದಾಹರಣೆಗೆ ಧೂಪ ಮತ್ತು ಪ್ರದಕ್ಷಿಣೆಯಂತಹ ಅರ್ಚನ ವಿಧಿಯ ಹಿಂದಿರುವ ಸುಂದರ ಆಶಯವನ್ನು ಅವರು ಹೀಗೆ ಪ್ರಕಾಶಪಡಿಸಿದ್ದಾರೆ (ಅಧ್ಯಾಯ ೨೧):

"ದೇವರಿಗೆ ಊದುಬತ್ತಿಯನ್ನು ಅರ್ಪಿಸುವಾಗ 'ದೇವರೇ, ಈ ಜೀವನವನ್ನು ಉರಿಸಿ ನಿನಗೆ ಸುಗಂಧವನ್ನು ಬೀರುತ್ತೇನೆ' ಎಂಬ ಭಾವವಿದೆ. ಉರಿಯದೇ ಸುಗಂಧ ಹೊರಡದು. ಚಂದನದಲ್ಲಿ 'ದೇಹವನ್ನು ಚಂದನದಂತೆ ಸವೆಯಿಸಿ ನಿನಗೆ ಗಂಧವನ್ನರ್ಪಿಸುವೆ' ಎಂಬ ಅರ್ಥವಿದೆ. ಅದರಂತೆ ಪ್ರದಕ್ಷಿಣೆ: ದೇವರನ್ನು ಪುನಃ ಪುನಃ ಸುತ್ತುವರಿಯುವುದರಿಂದ ಆತನ ಮೂರ್ತಿಯ ನೆನಪು ನಮ್ಮಲ್ಲಿ ಅಖಂಡವಾಗಿ ನಿಲ್ಲುತ್ತದೆ. ನಾವು ಪ್ರದಕ್ಷಿಣೆ ಹಾಕಿದಷ್ಟು ಸಲ ಅದು ನಮ್ಮ ಮನದಲ್ಲಿ ದೃಢವಾಗುತ್ತದೆ. ಇದರಂತೆ ಪ್ರತಿಯೊಬ್ಬನೂ ತನ್ನ ಧ್ಯೇಯದ ಸುತ್ತುವರಿಯಬೇಕು.

"ಈ ರೀತಿ ಪ್ರದಕ್ಷಿಣೆ ಮಾಡುತ್ತ ನಡೆದರೆ, ಜನ್ಮ ಜನ್ಮಾಂತರದಲ್ಲಿಯೂ ಈ ಧ್ಯೇಯದೇವರ ಪೂಜೆ ಮಾಡಬೇಕೆಂದು ಎನಿಸುತ್ತದೆ. 'ನಿನ್ನ ಮೂರ್ತಿ ಮನಸ್ಸಿನಲ್ಲಿ ಮೂಡಲಿ' ಎಂದೆನ್ನಬೇಕೆಂದು ಅನಿಸುತ್ತದೆ. ಈ ದೇಹವು ಹಗಲಿರುಳು ಧ್ಯೇಯ ಸೇವೆಯಲ್ಲಿ ತೊಡಗಿರಬೇಕು. ಈ ಭಾವನೆಯಿಂದ ಪ್ರದಕ್ಷಿಣೆಯಾದ ಮೇಲೆ ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತೇವೆ. ಕೊನೆಗೆ ಮಂತ್ರಪುಷ್ಪ. ಇದು ಜೀವನಪುಷ್ಪದ ಚಿರ ಸಮರ್ಪಣೆಯ ಸಂಕೇತ".

ಅನಾಘ್ರಾತ ಪುಷ್ಪಗಳಿಂದ ದೇವರನ್ನು ಅರ್ಚಿಸುವುದರ ಇಂಗಿತ ದೇವರಿಗೆ ಮಾಡುವ ಯಾವುದೇ ಅರ್ಪಣೆ ಸಂಪೂರ್ಣವಾಗಿರಬೇಕೆಂಬುದು - ಎಂದು ವಿವರಿಸುತ್ತಾರೆ. ಈ ರೀತಿಯ ಅರ್ಥಕಲ್ಪನೆ ಮಾಡುವುದಕ್ಕೆ ಪೂರ್ವಾಧಾರ ಏನು? - ಎಂದು ಯಾರಾದರೂ ಪ್ರಶ್ನಿಸಿದರೆ ಅದಕ್ಕೆ ಸಾನೇ ನೀಡುವ ಉತ್ತರ ಇದು:

"ಅರ್ಥವಿದೆ ಎಂದು ನಾವು ನೋಡಿದರೆ ಅವೇ ನಿರ್ಜೀವವೆನಿಸಿದ ಪ್ರತೀಕಗಳು ಜೀವಕಳೆ ತುಂಬಿ ಎದ್ದುಕಾಣುತ್ತವೆ. ಆ ಸಂಕೇತಗಳಲ್ಲಿ ನವಚೈತನ್ಯವು ಉಂಟಾಗುತ್ತದೆ.

"ಭಾರತೀಯ ಸಂಸ್ಕೃತಿಯ ಅಂತರಂಗವನ್ನು ಅರಿಯಬೇಕಾದರೆ, ಅದರ ನಿಜಸ್ವರೂಪದ ಸುಖವನ್ನು ಅನುಭವಿಸಬೇಕಿದ್ದರೆ, ಅದರ ಉಪಾಸಕನಾಗಬೇಕೆಂದರೆ, ಆಳವಾದ ದೃಷ್ಟಿಯನ್ನು ಗಳಿಸಿರಿ."

ಜ್ಞಾನೋಪಾಸನೆ

ಮನುಸ್ಮೃತಿಯು ಸಮಾಜವಿರೋಧಿ ಎಂದು ಆರೋಪಿಸಿ ಆ ಗ್ರಂಥವನ್ನು ಸುಟ್ಟವರ ಬಗೆಗೆ ಕೇಳಿದ್ದೇವೆ. ಆದರೆ ನಮ್ಮ ಸಮಾಜವನ್ನೂ ಪರಂಪರೆಯನ್ನೂ ನಿಕಟವಾಗಿ ಅಭ್ಯಾಸ ಮಾಡಿದ ಮತ್ತು ಸ್ವಯಂ ವೈಚಾರಿಕ ಪ್ರವೃತ್ತಿಯವರಾದ ಸಾನೇ ಹೇಳುತ್ತಾರೆ : "ನಾನು ಹೇಳಿದ್ದು ನಿಮ್ಮ ಬುದ್ಧಿಗೆ ತೋಚಿದರೆ ಗ್ರಹಿಸಿರಿ, ಇಲ್ಲದಿದ್ದರೆ ತ್ಯಜಿಸಿರಿ – ಎಂದು ಮನು ಹೇಳಿದ್ದಾನೆ.

"ಭಾರತೀಯ ಸಂಸ್ಕೃತಿಯಲ್ಲಿ ಜ್ಞಾನಕ್ಕೆ ವಿರೋಧ ಎಂದೂ ಇದ್ದಿರಲಿಲ್ಲ. ಕ್ರಾಂತಿಕಾರಕ ಮತಗಳನ್ನು ವಿಚಾರಿಸುತ್ತಿದ್ದರು ಆಯಾ ಮತಗಳ ಮೂಲದಲ್ಲಿ ಇರುವ ಕಳಕಳಿಯನ್ನೂ ಅನುಭವವನ್ನೂ ಅಭ್ಯಾಸವನ್ನೂ ನೋಡುತ್ತಿದ್ದರು. ಆಯಾ ಮತಸ್ಥಾಪಕರ ತ್ಯಾಗ ಮಾಡುವ ಸಿದ್ಧತೆಯನ್ನು ನೋಡಲಾಗುತ್ತಿತ್ತು. ಭಾರತೀಯ ಸಂಸ್ಕೃತಿಯು ಒಮ್ಮೆಲೇ ಹೊಸ ಮತಗಳನ್ನು ಗ್ರಹಿಸುವುದಿಲ್ಲ. ಆದರೆ ಪ್ರತಿಯೊಂದು ಬಗೆಯ ಮತಗಳಿಗೆ ಅನುವು ಇತ್ತು. ಸತ್ಯವಾದುದು ಕಾಲದ ಪ್ರವಾಹದಲ್ಲಿ ಉಳಿಯುತ್ತದೆ, ಅಸತ್ಯವಾದ್ದು ಅಳಿಯುತ್ತದೆ – ಎಂಬುದನ್ನು ತೋರಿಸಿಕೊಡುತ್ತಿತ್ತು. (ಅಧ್ಯಾಯ ೩)

"ಕೆಲವು ಸ್ಮೃತಿಗಳಿಗೆ ಪುನರ್ವಿವಾಹವು ಸಮ್ಮತವಿದೆ. ಕೆಲವು ಸ್ಮೃತಿಗಳಿಗೆ ಇಲ್ಲ. 'ಪರಾಶರ ಸ್ಮೃತಿ' ಯು ಕಲಿಯುಗಕ್ಕಾಗಿ ಎಂದು ಹೇಳಿದೆ. ಅದರಲ್ಲಿ ಪುನರ್ವಿವಾಹಕ್ಕೆ ಅಡ್ಡಿ ಇಲ್ಲ. ಪೇಶ್ವೆಯವರ ಮುಖ್ಯ ನ್ಯಾಯಾಧೀಶರಾದ ರಾಮಶಾಸ್ತ್ರಿಯವರ ಕಥೆ ಪ್ರಸಿದ್ಧವಿದೆ. ಅವರು ಪುನರ್ವಿವಾಹಕ್ಕೆ ಸಮ್ಮತಿಯನ್ನಿತ್ತರು.

"ಧ್ಯೇಯನಿಷ್ಠ ವೀರರೇ ಸಮಾಜವನ್ನು ಮುಂದಕ್ಕೆ ಒಯ್ಯುವುದು. ಇಂಥ ಜ್ಞಾನೋಪಾಸಕರಾದ ವಿಷ್ಣುವೀರರು ಯಾರಿಗೂ ಅಂಜುವುದಿಲ್ಲ. ಇವರ ಧ್ಯೇಯಕ್ಕೆ ಮತ್ತು ದೇವರೆದುರು ಮಾತ್ರ ಬಾಗುವರು. ಧ್ಯೇಯದಿಂದಲೇ ಉರಿಯುವ ಮಹಾತ್ಮನೊಬ್ಬನು ಎದ್ದು ನಿಂತರೆ, ಇಡೀ ಸಮಾಜವೇ ಎಚ್ಚರಾಗದೆ ಇರಲಾರದು. ಅವನ ಮಹಾನ್ ಪ್ರಯೋಗದಲ್ಲಿ ಜನರೆಲ್ಲರೂ ಸಹಕರಿಸುವರು."(ಅಧ್ಯಾಯ ೪)

ಸಾನೇಯವರ ಈ ದೃಷ್ಟಿಗೂ ಈಗ ಸೆಕ್ಯುಲರಿಸಂ ಮೊದಲಾದ ಹೆಸರುಗಳಲ್ಲಿ ಪ್ರಚಾರ ಪಡೆದಿರುವ ದೃಷ್ಟಿಗೂ ಅಜಗಜಾಂತರ ಇದೆಯೆಂದು ವಿವರಿಸುವ ಅವಶ್ಯವಿಲ್ಲ. 'ಭಾರತೀಯ ಸಂಸ್ಕೃತಿ' ಪುಸ್ತಕದಲ್ಲಿ ಇಪ್ಪತ್ತೈದು ಅಧ್ಯಾಯಗಳು ಇವೆ. ಒಂದೊಂದು ಅಧ್ಯಾಯದಲ್ಲೂ ಸಂಸ್ಕೃತಿಯ ಒಂದು ವಿಶಿಷ್ಟ ಮುಖವನ್ನು ಕೇಂದ್ರವಾಗಿರಿಸಿಕೊಂಡು ಸಾನೇ ಚಿಂತನೆ ನಡೆಸಿದ್ದಾರೆ.

'ಅವತಾರ'ದ ಅರ್ಥಶೋಧ

ಶ್ರೀಕೃಷ್ಣನ ಅವತಾರದ ಚಿರಂತನ ಸಂಗತತೆಯನ್ನು ಸಾನೇ ಪ್ರಕಟಪಡಿಸುವ ರೀತಿಯು ಮನೋಜ್ಞವಾಗಿದೆ (ಅಧ್ಯಾಯ ೨೨)

"ತನ್ನನ್ನೇ ಗೆಲ್ಲದವನು ಇತರರನ್ನು ಗೆಲ್ಲಲಾರ. ತಾನೇ ಬಿದ್ದವನು ಇನ್ನೊಬ್ಬರನ್ನು ಎತ್ತಲಾರ. ತಾನೇ ಬದ್ಧನಾಗಿರುವವನು ಇತರರನ್ನು ಬಂಧನದಿಂದ ಮುಕ್ತ ಮಾಡುವುದು ಸಾಧ್ಯವೆ? ಸ್ವತಃ ಕುಗ್ಗಿದವನು ಪರರನ್ನು ಹಿಗ್ಗಿಸುವುದು ಹೇಗೆ? ಸ್ಫೂರ್ತಿಹೀನನು ಚೇತನವನ್ನು ಎರೆಯಬಲ್ಲನೆ? ನಿರುತ್ಸಾಹಿಯು ಉತ್ಸಾಹವನ್ನು ತುಂಬಲಾರ. ಆದುದರಿಂದ ಮೊದಲು ನಮ್ಮ ನಮ್ಮ ಜೀವನಗೋಕುಲದಲ್ಲಿ ಸುಖ, ಹಿಗ್ಗು, ಸಮಾಧಾನಗಳನ್ನು ನಿರ್ಮಿಸಿಕೊಳ್ಳಬೇಕು. ಆಮೇಲೆ ನಮ್ಮ ಸುತ್ತಲೂ ಸುಖ, ಸಮಾಧಾನಗಳನ್ನು ನಿರ್ಮಿಸಬೇಕು. ಆಗ ನಾವು ನಮ್ಮ ಸುತ್ತಲೂ ಸುಖ-ಆನಂದವನ್ನು ಪಸರಿಸಬಲ್ಲೆವು. "ಆದರೆ ಇಂಥ ದಿನವು ಜೀವನದಲ್ಲಿ ಬರಬಹುದೇ? ಬರುವುದು ನಿಶ್ಚಯವಾಗಿ ಬಂದೇ ಬರುವುದು. ಅಲ್ಲಿಯವರೆಗೆ ಮಾತ್ರ ನಿಮ್ಮ ಜೀವನಯಮುನೆ ಅಶಾಂತಳಾಗಿ ಹರಿಯುತ್ತಿರುತ್ತಾಳೆ. ಕೆಲವು ಕಾಲ ಈ ಯಮುನೆಯಲ್ಲಿ ಕ್ರೋಧ-ಮತ್ಸರಗಳ ತೆರೆಗಳು ಏಳುತ್ತಿರುತ್ತವೆ. ಕೆಲವು ಕಾಲ ಸ್ನೇಹ-ಪ್ರೇಮದ ಪ್ರಚಂಡ ಅಲೆಗಳೂ ಏಳುತ್ತವೆ. ಈ ಜೀವನಯಮುನೆಯಲ್ಲಿ ತೆರೆಗಳ ತಾಕಲಾಟವು ಏತಕ್ಕಾಗಿ? ಆ ಪರಮಧ್ಯೇಯವನ್ನು ಮುಟ್ಟುವುದಕ್ಕಾಗಿ. ಶ್ರೀಕೃಷ್ಣನ ಅಡಿದಾವರೆಗಳ ಸ್ಪರ್ಶಕ್ಕಾಗಿಯೇ ಈ ಅಲ್ಲೋಲಕಲ್ಲೋಲ ಇದೆ. ಆತನ ಚರಣಸ್ಪರ್ಶವಾದ ದಿನವೇ ನಮ್ಮ ಹೃದಯಯಮುನೆ ಶಾಂತಳಾಗುತ್ತಾಳೆ. ಆ ಧ್ಯೇಯಭಗವಾನನ ಅಡಿದಾವರೆಗಳ ಮೇಲೆ ಬೀಳುವುದಕ್ಕಾಗಿಯೇ ಈ ಯಮುನೆ ತಪ್ಪಿಸುತ್ತಿರುತ್ತಾಳೆ. ಶಾಂತವಾಗುವುದಕ್ಕಾಗಿಯೇ ಈ ಬಿರುಗಾಳಿಯಿದೆ. ಶಾಂತವಾಗಬೇಕೆಂದೇ ಜೀವನದ ಹೋರಾಟ".

ಬಲೋಪಾಸನೆಯ ಮಹತ್ವವನ್ನು ಕುರಿತು ಒಂದು ಇಡೀ ಅಧ್ಯಾಯವನ್ನೇ ಸಾನೇ ಗುರೂಜೀ ಬರೆದಿದ್ದಾರೆ (ಅಧ್ಯಾಯ ೧೭). ಶರೀರ, ಹೃದಯ ಮತ್ತು ಬುದ್ಧಿಯ ಬಲವನ್ನು ಗಳಿಸಿ ಆ ಬಲವನ್ನು ಸಂಘಟನೆಯಲ್ಲಿ ತೊಡಗಿಸಿ ತೇಜೋಮಯ ವಾತಾವರಣವನ್ನು ನಿರ್ಮಿಸಬೇಕೆಂಬುದು ಭಾರತೀಯ ಸಂಸ್ಕೃತಿಯ ನಿರ್ದೇಶನ - ಎಂದಿದ್ದಾರೆ.

'ಅವತಾರ' ಎಂಬುದರ ಕಲ್ಪನೆಯನ್ನು ಸಾನೇ ಕೇವಲ ಪೌರಾಣಿಕ ಪ್ರಾಕಾರದಿಂದ ಆಚೆಗೆ ವಿಸ್ತರಿಸಿದ್ದಾರೆ. ಜಗತ್ತಿನಲ್ಲಿಯ ಶ್ರದ್ಧೆಯನ್ನೆಲ್ಲ ಏಕತ್ರಿತಗೊಳಿಸಿ ಚದುರಿರುವ ಪ್ರಯತ್ನಗಳಿಗೆ ನಿಶ್ಚಲತೆಯನ್ನು ತುಂಬುವವರು ಅವತಾರಿಪುರುಷರು - ಎಂದಿದ್ದಾರೆ. ವಿದ್ಯಾರಣ್ಯರನ್ನೂ ಶಿವಾಜಿ ಮಹಾರಾಜರನ್ನೂ ಸಾನೇ ಅವತಾರಿಪುರುಷರ ಪಂಕ್ತಿಗೆ ಸೇರಿಸಿದ್ದಾರೆ. (ಅಧ್ಯಾಯ ೧೯)

ಉನ್ಮುಖ ದೃಷ್ಟಿ

ಕರ್ಮ ಮಾಡುವುದರಲ್ಲಿ ಇರಬೇಕಾದ ಉನ್ಮುಖ ದೃಷ್ಟಿಯನ್ನೂ ಅದರ ಸತ್ಫಲವನ್ನೂ ವಿವರಿಸುವಲ್ಲಿ ರಾಮಾಯಣದ ಶಬರಿಯ ಆಖ್ಯಾನವನ್ನು ನೆನಪಿಸುತ್ತಾರೆ. ಪ್ರೀತಿಯ ಭಾವನೆಯ ಆಯಾಮ ಸೇರಿದ ಕೂಡಲೆ ನಾವು ಕೈಗೊಂಡ ಕಾರ್ಯ ಹೊರೆಯೆನಿಸದೆ ಆನಂದದಾಯಕವಾಗಿ ಆ ಕಾರ್ಯದ ಬೆಲೆ ನೂರುಪಟ್ಟಾಗುತ್ತದೆ ಎಂದು ವಿವರಿಸಲು ಸಂತ ಕಬೀರನ ನಿದರ್ಶನ ಕೊಡುತ್ತಾರೆ.

ಸಾಂಸ್ಕೃತಿಕ ಆಕ್ರಮಣ ಉಂಟುಮಾಡಿರುವ ಆತಂಕ ಕುರಿತು ಸಾನೇ ನೀಡಿರುವ

ಸೂತ್ರೀಕೃತ ಚಿಂತನೆ ಮನನಾರ್ಹವಾಗಿದೆ (ಅಧ್ಯಾಯ ೧೮)

"ಇಂದು ಭಾರತೀಯರು ಆ ಧ್ರುವನನ್ನು ಮರೆತಿದ್ದಾರೆ. ಇಲ್ಲದಿದ್ದರೆ ಪರಕೀಯರು ಅನಾದರದಿಂದ ಅತ್ತಿತ್ತ ಒಗೆದ ತುಣುಕುಗಳನ್ನು ಆರಿಸಲು ಧಾವಿಸುತ್ತಿರಲಿಲ್ಲ.

"ಏನೇ ಆಗಲಿ, ನನ್ನ ಧ್ಯೇಯವನ್ನು ನಾನು ಸಾಧಿಸಿಯೇ ತೀರುವೆನೆಂದು ಧ್ರುವನ ರಕ್ತದವರಾದ ಭಾರತೀಯರು ನಾವು ಎದೆತಟ್ಟಿ ಹೇಳಬೇಕು. ಆಗ ಮಾತ್ರ ನಮ್ಮ ಧ್ಯೇಯದ ದಾರಿಯಲ್ಲಿ ಪಸರಿಸಿದ ಅನೇಕ ತುಣುಕುಗಳ ಮೋಹವು ನಮ್ಮನ್ನು ತಡೆಯಲಾರದು."

ಧ್ಯೇಯಾಭಿಮುಖ ದೃಷ್ಟಿಯ ಸ್ವರೂಪವನ್ನು ಸ್ಫುಟಗೊಳಿಸಲು ಶ್ರೀರಾಮ, ಜನಕ, ಭರತ, ಲಕ್ಷ್ಮಣ, ಹರಿಶ್ಚಂದ್ರ, ಬಲಿಚಕ್ರವರ್ತಿ, ಗಾಂಧಾರಿ, ಮೀರಾಬಾಯಿ ಮೊದಲಾದ ನಾಲ್ಕಾರು ನಿದರ್ಶನಗಳನ್ನು ಸಾನೇ ರೋಚಕವಾಗಿ ನಿರೂಪಿಸುತ್ತಾರೆ. ಅವರ ಮಾತುಮಾತಿನಲ್ಲಿಯೂ ನಿಶ್ಚಯ ತುಂಬಿತುಳುಕುತ್ತದೆ. ಎಲ್ಲ ಕಾಲಕ್ಕೂ ಸಂಗತವೆನಿಸುವ ಜೀವನಮೌಲ್ಯಗಳನ್ನು ಬೊಟ್ಟುಮಾಡಿ ತೋರಿಸುತ್ತಾ ಹೋಗುತ್ತಾರೆ.

'ಭಾರತೀಯ ಸಂಸ್ಕೃತಿ' ಗ್ರಂಥವನ್ನು 'ಸಾನೇಯವರ ಆಧ್ಯಾತ್ಮಿಕ ಮ್ಯಾನಿಫೆಸ್ಟೋ' ಎಂದು ಗುಜರಾತಿನ ಪ್ರಸಿದ್ಧ ವಿದ್ವಾಂಸ ಪ್ರೊ. ಜಯಂತ ಜೋಶಿ ಕರೆದಿದ್ದಾರೆ.

ಒಟ್ಟಿನ ಮೇಲೆ ಸಾನೇ ಹೇಳಲು ಇಚ್ಛಿಸುವುದು – ಭಾರತೀಯ ಸಂಸ್ಕೃತಿಯು ನಿಂತನೀರಿನಂತಲ್ಲ, ಅದು ಗತಿಶೀಲವಾದುದು – ಎಂದು. ಈ ಅಂಶವನ್ನು ಅವರು ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ.

"ಭಾರತೀಯ ಸಂಸ್ಕೃತಿಯು ಯಾವ ಮಾತಿನ ಬಗ್ಗೆಯೂ ಹಟ ಹಿಡಿಯುವುದಿಲ್ಲ. 'ಬುದ್ಧೇಃ ಫಲಮನಾಗ್ರಹಃ'. ತಾತ್ವಿಕತೆ ಕುರಿತು ಹಟವನ್ನು ಬುದ್ಧಿವಂತರಾದವರು ಹಿಡಿಯುವುದಿಲ್ಲ. ಶ್ರೀಕೃಷ್ಣನಾದರೂ 'ಯಥೇಚ್ಛಸಿ ತಥಾ ಕುರು' ಎಂದು ಅರ್ಜುನನಿಗೆ ಹೇಳಿ ಬುದ್ಧಿಗೆ ಮಹತ್ವವನ್ನು ಕೊಟ್ಟ. ವಿಚಾರದಂತೆ ಆಚರಿಸುವುದೇ ವೇದಧರ್ಮ. 'ನಿಮ್ಮಲ್ಲಿ ಉರಿಯುವ ಜ್ಞಾನದೀಪವನ್ನು ನಂದಿಸದಿರಿ' – ಎಂದು ಭಾರತೀಯ ಸಂಸ್ಕೃತಿಯು ಹೇಳುತ್ತದೆ. ನಿನ್ನ ಹೃದಯದಲ್ಲಿ ವಾಸಿಸುವ ಬುದ್ಧಿಯ ದನಿಯನ್ನು ಚಿತ್ತಗೊಟ್ಟು ಲಾಲಿಸು. ಆ ಬುದ್ಧಿಯ ಶಂಕಾತೀತವಾದ ದನಿಯು ಹೇಳಿದಂತೆ ನಡೆ. 'ಮನಃಪೂತಂ ಸಮಾಚರೇತ್' ಎಂಬ ವಚನದ ಅರ್ಥವಿದು."(ಅಧ್ಯಾಯ ೩)

ಇದು ಎಲ್ಲರೂ ಆಲಿಸಬೇಕಾದ ಆಂತರಂಗಿಕ ಧ್ವನಿ

ಒಂದು ಸಣ್ಣ ಪುಸ್ತಕದಲ್ಲಿ ಮೌಲಿಕವಾದ ಇಷ್ಟೊಂದು ಮನನಸಾಮಗ್ರಿ ದೊರೆಯುವುದು ವಿರಳ. ಎಲ್ಲರೂ ಅವಧಾನಪೂರ್ವಕ ಓದಬೇಕಾದ ಅಪೂರ್ವ ಗ್ರಂಥ ಸಾನೇಯವರ 'ಭಾರತೀಯ ಸಂಸ್ಕೃತಿ'.

ಕವಳಿಗೆ – ಸಾಹಿತ್ಯ ಪ್ರಾಸಂಗಿಕಗಳು, ಎಸ್.ಆರ್.ರಾಮಸ್ವಾಮಿ, ರಾಷ್ಟ್ರೋತ್ಥಾನ ಸಾಹಿತ್ಯ

ಕೈಮಗ್ಗ ಉದ್ಯಮ ಮತ್ತು ಕೇಂದ್ರ ಬಜೆಟ್

ಮೂಲ : ದೊಂಥಿ ನರಸಿಂಹ ರೆಡ್ಡಿ ಅನು : ಸುರೇಂದ್ರ ಕೌಲಗಿ

ಕೈಮಗ್ಗ ಕ್ಷೇತ್ರ ಪ್ರತಿವರ್ಷ ೬೦ ಸಾವಿರಕೋಟಿಗಿಂತಲೂ ಹೆಚ್ಚಾಗಿ ವಹಿವಾಟು ಮಾಡುತ್ತದೆ. ಕೈ ಮಗ್ಗದ ಉತ್ಪಾದನೆಗಳಿಗೆ ಪ್ರತಿವರ್ಷ ಒಂದು ಲಕ್ಷ ಕೋಟಿರೂಪಾಯಿಗಳಷ್ಟು ಬೇಡಿಕೆ ಇದೆ. ಕೈ ಮಗ್ಗ ಉತ್ಪನ್ನಗಳ ರಫ್ತು ಪ್ರತಿವರ್ಷ ೪ಸಾವಿರ ಕೋಟಿಗಳಷ್ಟಿವೆ. ೩ಕೋಟಿ ಜನ ಕೈ ಮಗ್ಗಗಳನ್ನು ಅವಲಂಬಿಸಿದ್ದಾರೆ. ಅದು ಪರಿಸರ ಸ್ನೇಹಿ ಕೈಗಾರಿಕೆಯಾಗಿದೆ. ಅದಕ್ಕಗತ್ಯವಾದ ತಾಂತ್ರಿಕ ಸೌಲಭ್ಯಗಳು ದೇಶದೊಳಗೆ ಲಭ್ಯವಿದೆ. ಇಂಗಾಲದ ಹೊರ ಸೂಸುವಿಕೆ ಮತ್ತು ಹವಾಮಾನ ಬದಲಾವಣೆಯ ಬಗ್ಗೆ ಉಂಟಾಗಿರುವ ಚಿಂತೆಯ ಈ ಕಾಲದಲ್ಲಿ ಯಾವುದೇ ಪಾಶ್ಚಾತ್ಯ ದೇಶಕ್ಕೆ ರಾಯಲಿಟಿ (ಗೌರವಧನ) ಕೊಡಬೇಕಾಗಿಲ್ಲ.

ಕೈಮಗ್ಗದ ಕ್ಷೇತ್ರ ಪ್ರತಿವರ್ಷ ೨೫ಸಾವಿರ ಕೋಟಿಗಿಂತಲೂ ಹೆಚ್ಚು ಹಣವನ್ನು ಹತ್ತಿದಾರ ಪಡೆಯಲು ತೊಡಗಿಸುತ್ತದೆ. ಮತ್ತು ೯,೫೦೦ ಕೋಟಿ ಹಣವನ್ನು ಬಣ್ಣ ಹಾಗೂ ರಾಸಾಯನಿಕಗಳಿಗಾಗಿ ವ್ಯಯಿಸುತ್ತದೆ. ಕೈ ಮಗ್ಗ ಉತ್ಪಾದನೆ ಖಾಸಗಿ ಲೇವಾದೇವಿದಾರರ ಮೇಲೆ ಅವಲಂಬಿಸಿದೆ. ಆ ಖಾಸಗಿ ಲೇವಾದೇವಿ ೩೫,೦೦೦ ಕೋಟಿಯಷ್ಟಿದೆ ಮತ್ತು ೧೮% ರಿಂದ ೨೪% ರಷ್ಟು ಬಡ್ಡಿಯನ್ನು ತೆತ್ತುತ್ತದೆ. ಕೈಮಗ್ಗ ಕ್ಷೇತ್ರ ಕೇಂದ್ರ ಬಜೆಟ್ಟಿನಲ್ಲಿ ಬಹು ಅಲ್ಪ ಪ್ರಮಾಣದ ಹಣವನ್ನು ಪಡೆಯುತ್ತಿದೆ. ಆ ಬಜೆಟ್ ಹಣ ೩೨೮ ಕೋಟಿ ಮಾತ್ರ. ಕೈ ಮಗ್ಗ ಕ್ಷೇತ್ರ ಒದಗಿಸುತ್ತಿರುವ ಉದ್ಯೋಗಾವಕಾಶ ಮತ್ತು ದೇಆಶದ ಆಂತರಿಕ ಉತ್ಪಾದನೆಗೆ(ಜಿ.ಡಿ.ಪಿ) ಗೆ ಅದರ ಕಾಣಿಕೆಯನ್ನು ಗಮನಿಸಿದರೆ ಬಜೆಟ್ಟಿನಲ್ಲಿ ಮಂಜೂರಾಗುವ ಹಣ ಕೊನೆಯ ಪಕ್ಷ ೫,೦೦೦ ಕೋಟಿಯಷ್ಟಾದರೂ ಆಗಬೇಕು. ನಬಾರ್ಡ್ ಸಂಸ್ಥೆ ಚಾಲ್ತಿಯಲ್ಲಿರುವ ಸಾಲಕೊಡುವ ಮೊತ್ತವನ್ನು ೭೫ಕೋಟಿಯಿಂದ ೧೦,೦೦೦ ಕೋಟಿಗೆ ಏರಿಸಬೇಕು. ೨೦೧೩-೧೪ರ ಕೇಂದ್ರ ಬಜೆಟ್ಟಿನಲ್ಲಿ ಕೈ ಮಗ್ಗಕ್ಕೆ ಮೀಸಲಾಗಿದ್ದ ಹಣದ ಮೊತ್ತ ೦.೦೦೩% ಆಗಿತ್ತು. ಆದರೆ ೨೦೧೦-೧೧ನೇ ಸಾಲಿನಲ್ಲಿ ೦.೦೦೩% ಆಗಿತ್ತು. ಕಳೆದ ಎರಡು ವರ್ಷಗಳಲ್ಲಿ ಅದು ೦.೩% ಮತ್ತು ೦.೪% ಆಗಿತ್ತು. ೨೦೧೪-೧೫ನೇ ಸಾಲಿನಲ್ಲಿ ಕೂಡ ಇದೇ ರೀತಿ ಜಾರಿಗೆ ಬಂದು ಕೈ ಮಗ್ಗಕ್ಕೆ ಕೇವಲ ೦.೦೩% ಮಾತ್ರ ಹಣ ದೊರೆಯಿತು.

ಕೈಮಗ್ಗ ಕ್ಷೇತ್ರದಲ್ಲಿ ೨೦೦೮-೦೯ರಲ್ಲಿ ತಯಾರಾಗುವ ಒಂದು ಮೀಟರ್

ಬಟ್ಟೆಯ ಮೇಲೆ ತೊಡಗಿಸಲಗಿದ್ದ ಬಂಡವಾಳ ೪೮ ಪೈಸೆಯಾಗಿತ್ತು. ಆದರೆ ಕೈಮಗ್ಗೇತರ ಕ್ಷೇತ್ರಗಳಲ್ಲಿಯ ಒಂದು ಮೀಟರ್ ಬಟ್ಟೆಯ ಮೇಲೆ ತೊಡಗಿಸಲಾಗಿದ್ದ ಬಂಡವಾಳ ೬೨ ಪೈಸೆಯಾಗಿತ್ತು. ಅಲ್ಲದೆ ಆ ಕೈಗಾರಿಕೆಗಳಿಗೆ ತೆರಿಗೆ ಪಾವತಿಯಲ್ಲಿ ರಿಯಾಯಿತಿ, ಸಬ್ಸಿಡಿಗಳು ಮತ್ತು ಪ್ರೋತ್ಸಾಹದನ ಕೊಡಲಾಗುತ್ತದೆ. ಈ ಮುಂತಾದ ಸೌಲಭ್ಯಗಳ ಮೊತ್ತ ಕಳೆದ ೯ವರ್ಷಗಳಲ್ಲಿ ಒಂದು ಲಕ್ಷ ಕೋಟಿಗೂ ಮಿಕ್ಕಿದೆ. ಕಳೆದ ೧೮ವರ್ಷಗಳ ಕೇಂದ್ರ ಬಜೆಟ್ಟನ್ನು ಗಮನಿಸಿದರೆ ಕೈ ಮಗ್ಗಕ್ಕೆ ಕೊಡ ಮಾಡುವ ಹಣದ ಮೊತ್ತ ಕಡಿಮೆಯಾಗುತ್ತಾ ಬಂದಿರುವುದು ಗೊತ್ತಾಗುತ್ತದೆ. ಹಣದುಬ್ಬರ ಕಾರಣದಿಂದಾಗಿ ಸಹಜವಾಗಿ ವರ್ಷ ವರ್ಷ ದೊರೆಯಬೇಕಾದ ೧೦೦%ರಷ್ಟು ಸಹಾಯ ಕೂಡ ದೊರೆಯುತ್ತಿಲ್ಲ.

ಕೈ ಮಗ್ಗಗಳಿಗೆ ದೊರೆಯುವ ಬಜೆಟ್ ಮೊತ್ತ ಸತತವಾಗಿ ಕಡಿಮೆಯಾಗುತ್ತಿರುವಾಗಲೇ ಮಂಜೂರಾಗಿದ್ದ ಬಜೆಟ್ ಹಣದ ಉಪಯೋಗ ಕೂಡ ಸಮಂಜಸವಾಗಿಲ್ಲ. ೨೦೧೧-೧೨ರಲ್ಲಿ ಪುನರ್ ವಿಮರ್ಶಿತ ಬಜೆಟ್ ಮಂಜೂರಾತಿ ೭೪೪.೭೩ ಕೋಟಿಯಿತ್ತು. ಆದರೆ ಆದ ಪ್ರತ್ಯಕ್ಷ ಖರ್ಚು ೬೫೬.೧೪ ಕೋಟಿಗಿಂತ ಹೆಚ್ಚಿಗೆ ಇರಲಿಲ್ಲ. ೨೦೧೨-೧೩ ರಲ್ಲಿ ಖರ್ಚು ೭೯೩.೨೬ ಕೋಟಿಯಿತ್ತು. ಆದರೆ ಮಂಜೂರಾಗಿದ್ದ ಹಣ ೨೯೬೦.೫೦ ಕೋಟಿ ಮಾತ್ರ ಆಗಿತ್ತು. ಅಂದರೆ ಕೇವಲ ೨೬.೭ ರಷ್ಟು ಹಣ ಖರ್ಚಾಗಿತ್ತು. ಕಳೆದ ೧೧ ವರ್ಷಗಳ ಅವಧಿಯಲ್ಲಿ ಅಂದರೆ ೧೯೯೭-೯೮ ರಿಂದ ೨೦೦೭-೦೮ ರವರೆಗೆ ಪುನರ್ ವಿಮರ್ಶಿತ ಬಜೆಟ್‌ನಲ್ಲಿ ಮಂಜೂರಾತಿ ೪%ರಿಂದ ೨೩.೫%ರಷ್ಟು ಕಡಿಮೆಯಿತ್ತು. ಈ ಪ್ರಕಾರದ ಕಡಿಮೆ ಕೈಮಗ್ಗೇತರ ಕ್ಷೇತ್ರಕ್ಕೆ ಇರಲಿಲ್ಲ.

೧೯೯೭-೯೮ರ ನಂತರ ೧೮ವರ್ಷಗಳ ಕಾಲ ಜವಳಿ ಇಲಾಖೆಯ ಬಜೆಟ್‌ನಲ್ಲಿ ಹ್ಯಾಂಡ್‌ಲೂಮ್ ಕೈಗಾರಿಕೆಗೆ ಮಂಜೂರಾದ ಬಜೆಟ್ ೨೭% ರಿಂದ ೧೦.೮೯ಕ್ಕೆ ಬಂದಿದೆ. ಬೇರೆ ಯಾವುದೇ ವಲಯಕ್ಕಿಂತ ಕೈ ಮಗ್ಗ ಕ್ಷೇತ್ರಕ್ಕೆ ಮಂಜೂರಾದ ಬಜೆಟ್ ಗಮನಿಸಿದರೆ ಪ್ರತಿಯೊಬ್ಬ ನೇಕಾರನಿಗಾಗಿ ಮಂಜೂರಾದ ಹಣ ಬೇರೆ ವಲಯಕ್ಕಿಂತ ಬಹಳ ಕಡಿಮೆಯಿದೆ.

ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ಕೈ ಮಗ್ಗ ಕೈಗಾರಿಕೆಗೆ ಸಂಬಂಧಿಸಿದಂತೆ ರಚನೆಯಾಗಿದ್ದ ಕ್ರಿಯಾ ಸಮಿತಿ ಮಾಡಿದ್ದ ಶಿಫಾರಸ್ಸನ್ನು ಸರ್ಕಾರ ಅಲಕ್ಷ ಮಾಡಿತು. ಆ ಸಮಿತಿಯು ೪,೦೦೦ ಕೋಟಿ ಹಣವನ್ನು ಕೈ ಮಗ್ಗ ಕೈಗಾರಿಕೆಗೆ ಮೀಸಲಿಡಬೇಕೆಂದು ಶಿಫಾರಸ್ಸು ಮಾಡಿತು. ಅದೇ ರೀತಿ ಕೈ ಮಗ್ಗ ವಲಯದ ಪುನಶ್ಚೇತನಕ್ಕಾಗಿ ಕರ್ಮಕರ್ ಕಮಿಟಿ ತನ್ನ ವರದಿಯಲ್ಲಿ ಶಿಪಾರಸ್ಸು ಮಾಡಿದ್ದ ೧೨೯೪ ಕೋಟಿ ಧನ ಸಹಾಯ ಕೊಡುವುದನ್ನು ಅಲಕ್ಷಿಸಿತು.

ಸರ್ಕಾರದ ಪ್ರತಿಕೂಲ ನೀತಿಗಳಿಂದಾಗಿಯೂ, ಜಾಗತೀಕರಣದಿಂದಾಗಿಯೂ

ಮತ್ತು ಬದಲಾವಣೆಗೊಳ್ಳುತ್ತಿರುವ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳಿಂದಾಗಿಯೂ ಕೈ ಮಗ್ಗ ನೇಕಾರರು ಅತಿ ದುಸ್ಥರವಾದ ಜೀವನ ನಡೆಸುತ್ತಿದ್ದಾರೆ. ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ಯೋಜನೆಗಳ ಅಸಮರ್ಪಕ ಅನುಷ್ಠಾನ, ವಿದ್ಯುತ್ ಮಗ್ಗಗಳಿಂದ ಮತ್ತು ಮಿಲ್‌ಗಳಿಂದ ನಡೆಯುತ್ತಿರುವ ಅನೈತಿಕ ಪೈಪೋಟಿ ಮುಂತಾದವುಗಳು ನೇಕಾರರ ಜೀವನದಲ್ಲಿಯ ದುರಂತಗಳಿಗೆ ಕಾರಣವಾಗಿವೆ. ಕೈಮಗ್ಗ ಕೈಗಾರಿಕೆಗೆ ಪ್ರತಿ ವರ್ಷ ಸುಮಾರು ೨೦,೦೦೦ ದಿಂದ ೨೫,೦೦೦ ದವರೆಗೆ ಹತ್ತಿದಾರ ಬೇಕಾಗುತ್ತದೆ. ಇದರೊಂದಿಗೆ ಮಿಲ್‌ಗಳಿಗೆ ಬೇಕಾಗುವ ದಾರದ ಪ್ರಮಾಣವನ್ನು ಹೋಲಿಸಿದರೆ ಅದು ೨೦೦೯-೧೦ರಲ್ಲಿ ೨೫ಕೋಟಿ ಇದ್ದುದು ೨೦೧೦-೧೧ನೇ ಸಾಲಿನಲ್ಲಿ ೫೪ಕೋಟಿಯಿತ್ತು. ಮುಂದೆ ೨೦೧೨-೧೩ರಲ್ಲಿ ಪುನಃ ಸ್ವಲ್ಪ ಹೆಚ್ಚಿಸಲಾಯಿತು. "ಈ ಮಿಲ್‌ಗೇಟ್ ಪ್ರೈಸ್ ಸ್ಕೀಮ್" ನ ಯಾವುದೇ ಪರಿಣಾಮ ದಾದರ ಬೆಲೆಯ ಏರಿಕೆಯ ಮೇಲಾಗಲಿ ಕೈಮಗ್ಗದ ಉತ್ಪಾದನೆಯ ಬೆಲೆಯನ್ನು ಕಡಿಮೆ ಮಾಡುವುದಾಗಲಿ ಆಗುವುದಿಲ್ಲ. ಕೆಲ ಸಾಂಸ್ಥಿಕ ಸಮಸ್ಯೆಗಳಿಂದಾಗಿ ಮಿಲ್‌ಗೇಟ್ ಪ್ರೈಸ್ ಸ್ಕೀಮ್ ಎಂದೂ ದಾರವನ್ನು ಮಿಲ್‌ಗೇಟ್ ಬೆಲೆಗಳಿಗೆ ಕೊಡಲು ಸಾಧ್ಯವಾಗಿಲ್ಲ. ಅದು ಕೇವಲ ೬೦ನೇ ನಂಬರ್‌ನ ದಾರಕ್ಕೆ ಮಾತ್ರ ಸಂಬಂಧಿಸಿದ್ದಾಗಿದೆ. ಕೈಮಗ್ಗ ಅಭಿವೃದ್ಧಿ ನಿಗಮ(ಎನ್.ಹೆಚ್.ಡಿ.ಸಿ) ಮಿಲ್‌ಗೇಟ್ ಪ್ರೈಸ್ ಯೋಜನೆಯನ್ನು ತನ್ನ ಹತ್ತಾರು ಕೇಂದ್ರಗಳ ಮೂಲಕ ಅನುಷ್ಠಾನಕ್ಕೆ ತರುತ್ತದೆ. ಕೈಮಗ್ಗ ಅಭಿವೃದ್ಧಿ ನಿಗಮವು ಲಕ್ನೋದಲ್ಲಿದೆ. ಮಿಲ್‌ಗೇಟ್ ಪ್ರೈಸ್ ಸ್ಕೀಮ್ ತನ್ನ ಮಿತಿಯ ಕಾರಣದಿಂದಾಗಿ ಕೈ ಮಗ್ಗ ನೇಕಾರರ ಪ್ರಚಲಿತ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಅದರ ಸಾಮರ್ಥ್ಯ ಸಾಲದು. ಇದು ವಿಶೇಷವಾಗಿ ಕೈ ಮಗ್ಗದ ಉತ್ಪಾದನೆಗೆ ಬೇಕಾದ ದಾರದ ಲಡಿ, ಗುಣಮಟ್ಟ ಮತ್ತು ಸರಿಯಾದ ಸಮಯಕ್ಕೆ ಸಂಗತವಾದ ಬೆಲೆಯಲ್ಲಿ ದೊರಕಿಸಿಕೊಡುವಂಥ ಸಮಸ್ಯೆಗಳಿಗೆ ಸಂಬಂಧಿಸಿದ್ದಾಗಿದೆ. ೧೧ನೇ ಪಂಚವಾರ್ಷಿಕ ಯೋಜನೆಯ ಸಂಬಂಧವಾಗಿ ರಚಿತವಾಗಿದ್ದ ಕ್ರಿಯಾ ಸಮಿತಿ ಕೈ ಮಗ್ಗದ ಸಮಸ್ಯೆಯ ನಿವಾರಣೆಗಾಗಿ ೧,೭೯೫ ಕೋಟಿ ಮೊತ್ತವನ್ನು ಶಿಫಾರಸ್ಸು ಮಾಡಿತ್ತು. ಆದರೆ ಅದು ಇನ್ನೂ ಕತ್ತಲೆ ಕೋಣೆಯಲ್ಲಿಯೇ ಇದೆ. ನಕಲಿ ಬಟ್ಟೆ ಮತ್ತು ಕಳಪೆ ಉತ್ಪಾದನೆಗಳಿಂದಾಗಿ ಕೈ ಮಗ್ಗಕ್ಕೆ ಸಂಬಂಧಿಸಿದ ಮಾರುಕಟ್ಟೆ ಪಾಲು ಗಂಭೀರವಾಗಿ ಕಂಠಿತಗೊಂಡಿದೆ. ಕೈ ಮಗ್ಗೇತರ ಜವಳಿ ಉದ್ಯಮದ ಉತ್ಪಾದನೆಗಳನ್ನು ಗುರುತಿಸಲು ಸಾಧ್ಯವಾಗುವಂಥ ವಿಧಾನದ ಕಾನೂನಿನ ಮೂಲಕ ಕೈ ಮಗ್ಗದ ಉತ್ಪಾದನೆಗಳನ್ನು ಸಂರಕ್ಷಿಸಬಹುದಾಗಿದೆ.

ಅರುಣ್ ಜೇಟ್ಲಿರವರ ೨೦೧೪-೧೫ರ ಬಜೆಟ್ಟಿನಲ್ಲಿ ಕೈ ಮಗ್ಗದ ಉದ್ಯೋಗದ ಸಮಗ್ರ ಸುಧಾರಣೆಗಾಗಿ ಬಹಳ ಅದ್ದೂರಿಯಾಗಿ ಘೋಷಿಸಿದ್ದ ೬,೮೦೦ಕೋಟಿ ಮೊತ್ತ ೨೦೧೨-೧೩ನೇ ಸಾಲಿನ ಬಜೆಟ್ಟಿನಲ್ಲಿ ಕಾಣಬರುವುದಿಲ್ಲ! ೨೦೧೨-೧೩ರ

ಬಜೆಟ್ಟಿನಲ್ಲಿ ಮಂಜೂರಾದದ್ದು ಕೇವಲ ೨೦೧೫ಕೋಟಿ. ಚುನಾವಣೆಗಳ ಮೊದಲು ಸರ್ಕಾರವು ೬,೮೦೦ ಕೋಟಿ ಘೋಷಿಸಿತ್ತು. ಇಂಥ ಸುಧಾರಣಾ ಸಂಬಂಧಿ ಮೊತ್ತಗಳ ಪ್ರಮಾಣ ಕೈ ಮಗ್ಗ ಕ್ಷೇತ್ರದ ವಾರ್ಷಿಕ ಒಟ್ಟು ವ್ಯವಹಾರದ ೬%ರಷ್ಟು ಮಾತ್ರ ಇದೆ. ೨೦೧೩-೧೪ ರಲ್ಲಿ ಈ ಮೊತ್ತವು ೧೫೭೭ ಕೋಟಿಗೆ ಇಳಿಯಿತು. ಸರ್ಕಾರ ಇಳಿಕೆ ವಿಧಾನವನ್ನು ಅನುಸರಿಸುತ್ತಾ ಬಂದಿತು. ಆದರೆ ಸಂಸತ್ತು ಈ ಮೊತ್ತವನ್ನು ೨,೨೦೫ಕೋಟಿಗಾಗಿ ತನ್ನ ಮತವನ್ನು ಕೊಟ್ಟಿತ್ತು.
ಪ್ರತಿಯೋರ್ವ ಕೈಮಗ್ಗ ನೇಕಾರನ ಸಾಲ ಅನೇಕ ಕಾರಣಗಳಿಂದ ಹೆಚ್ಚುತ್ತಲೇ ಇದೆ. ಆ ಕಾರಣಗಳ ಮೇಲೆ ನೇಕಾರರ ಯಾವ ಹಿಡಿತವೂ ಇಲ್ಲ ಅಥವಾ ಆ ಬಗ್ಗೆ ಅವರು ಹೇಳಬಹುದಾದ ಮಾತು ಇಲ್ಲ. ಜೀವನ ನಿರ್ವಹಣೆಯ ವೆಚ್ಚ ಕಳೆದ ಹದಿನೈದು ವರ್ಷಗಳಿಂದ ನಿಧಾನವಾಗಿ ಹೆಚ್ಚುತ್ತಲೇ ಇದೆ. ಕಚ್ಚಾ ಪದಾರ್ಥದ ಬೆಲೆ ವಿಶೇಷವಾಗಿ ರೇಷ್ಮೆ ನೂಲಿನ ಬೆಲೆಯಲ್ಲಿ ತುಂಬಾ ಏರಿಕೆಯಾಗಿದೆ. ಹತ್ತಿ ನೂಲಿನ ಬೆಲೆ ಕೂಡ ತೀವ್ರಗತಿಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಏರುತ್ತಲೇ ಇದೆ. ಅಗ್ಗದ ಮತ್ತು ನಕಲಿ ಕೈಮಗ್ಗ ಉತ್ಪಾದನೆಗಳ ಪ್ರತಿಸ್ಪರ್ಧೆಯಿಂದಾಗಿ ನೇಕಾರರಿಗೆ ತಮ್ಮ ಉತ್ಪಾದನೆಗಳ ಬೆಲೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಕಳೆದ ಕೆಲವು ವರ್ಷಗಳಿಂದ ಯೋಜನಾ ಆಯೋಗದ ಸಲಹೆಯ ಮೇರೆಗೆ ಕೇಂದ್ರ ಸರ್ಕಾರವು ಕೈ ಮಗ್ಗ ಕ್ಷೇತ್ರಕ್ಕೆ ಸಂಬಂಧಿಸಿದ ಅನೇಕ ಯೋಜನೆಗಳನ್ನು ಕಡಿಮೆ ಮಾಡುತ್ತಾ ಬಂದಿದೆ. ೧೨ ಯೋಜನೆಗಳಲ್ಲಿ ಈಗ ೨೦೧೪-೧೫ನೇ ಸಾಲಿಗೆ ನಾಲ್ಕಕ್ಕೆ ಇಳಿದಿದೆ.

ಮೇಲ್ಕಾಣಿಸಿದ ಎಲ್ಲ ಸಂಗತಿಗಳಿಂದ ಗೊತ್ತಾಗುವುದೇನೆಂದರೆ ಕೈ ಮಗ್ಗ ಕ್ಷೇತ್ರಕ್ಕೆ ಪ್ರತಿ ಬಜೆಟ್ಟಿನಲ್ಲಿ ಬಜೆಟ್ ಮಂಜೂರಾತಿ ಗಣನೀಯವಾಗಿ ಕಡಿಮೆಯಾಗುತ್ತಾ ಹೋಗುತ್ತಿದೆ. ಇದಕ್ಕೆ ಮುಖ್ಯ ಕಾರಣ ಕೈ ಮಗ್ಗ ಕ್ಷೇತ್ರಕ್ಕೆ ವಿರೋಧವಾಗಿರುವ ಹಿತಾಸಕ್ತಿಗಳ ಒತ್ತಡ. ಕೇಂದ್ರ ಸರ್ಕಾರದ ಜವಳಿ ಇಲಾಖೆಯಲ್ಲಿಯ ಉನ್ನತ ಅಧಿಕಾರದಲ್ಲಿಯ ಕಾರ್ಯದರ್ಶಿಗಳೂ ಕೂಡ ಯಾಂತ್ರೀಕೃತ ಜವಳಿ ಉದ್ಯಮದ ಹಿತಾಸಕ್ತಿಗಳ ಪರವಾಗಿಯೇ ಕೆಲಸ ಮಾಡುತ್ತಿದ್ದಾರೆ. ಕೈ ಮಗ್ಗ ನೇಕಾರರು ಸಂಘಟಿತರಾಗಿಲ್ಲ ಮತ್ತು ಮತ ಬ್ಯಾಂಕ್ ಆಗಿಲ್ಲ. ಈ ಕಾರಣಗಳಿಂದಾಗಿ ಸರ್ಕಾರಗಳು ಚುನಾವಣಾ ಸಮಯದಲ್ಲೂ ಕೂಡ ಕೈ ಮಗ್ಗ ಕ್ಷೇತ್ರಕ್ಕೆ ಅಗತ್ಯವಾದ ಮೊತ್ತವನ್ನು ನಿರಾಕರಿಸುವ ಧೈರ್ಯ ಮಾಡುತ್ತದೆ. ಇದೇ ಸಮಯದಲ್ಲಿ ಜವಳಿ ವ್ಯಾಪಾರಸ್ಥರ ಒತ್ತಡವೂ ಕೂಡ ಬಲವಾಗುತ್ತಲೇ ಹೋಗುತ್ತಿದೆ. ಇಂಥ ಪರಿಸ್ಥಿತಿಯಲ್ಲೂ ನೇಕಾರರು ಹೇಗೊ ಜೀವ ಹಿಡಿದುಕೊಂಡಿದ್ದಾರೆ. ಇದಕ್ಕೆ ಕಾರಣ ಅವರ ತ್ಯಾಗ.

ಸಾಭಾರ : ಎಕನಾಮಿಕ್ ಮತ್ತು ಪೊಲಿಟಿಕಲ್ ವೀಕ್ಲಿ

ಸಾಮಾಜಿಕ ಆಚರಣೆಗಳು ಅರ್ಥಪೂರ್ಣವಾಗಿರಲಿ

– ಡಾ.ಕೆ.ಜಗದೀಶ ಪೈ

ನಮ್ಮ ಸಂಪ್ರದಾಯ, ಸಂಸ್ಕೃತಿಯಲ್ಲಿ ಮಾಲಿನ್ಯ ಸೇರಿಕೊಂಡಿದೆ. ಇದಕ್ಕೆ ನಮ್ಮ ಗುಲಾಮಿತನವೂ ಒಂದು ಕಾರಣವಿರಬಹುದು. ಆಶ್ಚರ್ಯದ ಸಂಗತಿಯೆಂದರೆ ನಮ್ಮಲ್ಲಿ ಹಲವಾರು ಒಳ್ಳೆಯ ಆಚರಣೆಗಳಿದ್ದರೂ ಅರ್ಥವಿಲ್ಲದ ಬೆಡಗಿನ ಆಚರಣೆಗಳನ್ನು ಅನುಕರಿಸುತ್ತಿದ್ದೇವೆ. ನಾವು ವಿದೇಶೀಯರಂತೆ ವರ್ತಿಸುವುದರಲ್ಲೆ ಸಾರ್ಥಕತೆಯನ್ನು ಕಾಣುತ್ತೇವೆ.

ನಾವು ಪರಸ್ಪರ ಭೇಟಿಯಾದಾಗ ಒಬ್ಬರಿಗೊಬ್ಬರು ಎರಡು ಕೈಜೋಡಿಸಿ ವಿನೀತರಾಗಿ ವಂದಿಸುತ್ತೇವೆ. ನಮಸ್ಕಾರ ಎಂಬ ಶಬ್ದದ ಅರ್ಥವೇ ಅದು. ನನ್ನೊಳಗೆ ಅಡಗಿರುವ ಅಹಂಕಾರವನ್ನು ತೊರೆದು ನಿನ್ನೊಳಗಿರುವ ಭಗವಂತನಿಗೆ ತಲೆಬಾಗುವ ಭಾವವೇ ನಮಸ್ಕಾರದ ಅರ್ಥ. ಒಬ್ಬ ವ್ಯಕ್ತಿಯನ್ನು ಸಂಬೋಧಿಸುವಾಗಲೂ ನಾವು ನಮ್ಮ ಪದ್ಧತಿಯನ್ನು ಬಿಟ್ಟು 'ಹಲೋ' ಎಂದು ಹೇಳುತ್ತೇವೆ. 'ಹಲೋ' ಎಂಬ ಶಬ್ದದ ಅರ್ಥವಾದರೂ ಏನು? ನಿಜವಾಗಿಯೂ ನೋಡಿದರೆ 'ಹಲೋ' ಎಂಬ ಶಬ್ದಕ್ಕೆ ಯಾವ ಅರ್ಥವೂ ಇಲ್ಲ. ಇದರ ಬದಲಿಗೆ ಫೋನ್‌ನಲ್ಲಿ ಮಾತನಾಡುವಾಗ 'ಹರಿ ಓಂ', 'ಸುಪ್ರಭಾತ' ಎಂಬುದಾಗಿಯೊ ಜೈಶ್ರೀರಾಮ್ ಅಥವಾ ಜೈಗುರುದೇವ್, ಜೈಜಗತ್ ಎಂಬುದಾಗಿಯೊ ಏಕೆ ಮಾತನಾಡಬಾರದು?

ನಾವಿಂದು ನಮ್ಮ ಮಕ್ಕಳ ಜನ್ಮದಿನಾಚರಣೆಯನ್ನು ಹೇಗೆ ಆಚರಿಸುತ್ತಿದ್ದೇವೆ? ದೀಪವನ್ನು ಬೆಳಗಿಸಿ, ಆರತಿಯನ್ನು ಎತ್ತಿ ತೋರಿಸಿ ಮಗುವಿನ ಬದುಕೆಲ್ಲಾ ಬೆಳಗಾಗಲಿ ಎಂದು ಹಾರೈಸಿ ಆಚರಿಸಬೇಕಾದ ಜನ್ಮದಿನಾಚರಣೆಯನ್ನು ವಿಕೃತಗೊಳಿಸಿ, ಕೇಕನ್ನು ಕತ್ತರಿಸಿ, ಆತನ ವಯಸ್ಸಿನ ಸಂಖ್ಯೆಯಷ್ಟು ಉರಿಯುತ್ತಿರುವ ಮೋಂಬತ್ತಿಯನ್ನು ಆರಿಸಿ, ಅಂದರೆ ಜ್ಯೋತಿಯನ್ನು ನಂದಿಸಿ, ಮಗುವಿನ ಬದುಕೆಲ್ಲಾ ಕತ್ತಲಾಗಲಿ ಎಂಬ ಸಂದೇಶವನ್ನು ನೀಡುವಂತೆ ಆಚರಿಸುತ್ತೇವೆ. 'ತಮಸೋಮಾ ಜ್ಯೋತಿರ್ಗಮಯ' ಎಂಬುದಾಗಿ ಉಪನಿಷತ್ ಹೇಳುತ್ತದೆ. ಕತ್ತಲೆಯಿಂದ ಬೆಳಕಿನೆಡೆಗೆ ಹೋಗಬೇಕೆಂದು ನಮ್ಮ ಹಿರಿಯರು ಹೇಳಿದರು. ಆದರೆ ಉರಿಯುತ್ತಿರುವ ದೀಪವನ್ನು ನಂದಿಸಿ ಬೆಳಕಿನಿಂದ ಕತ್ತಲಕಡೆಗೆ ಹೋಗುವ ಸಂಪ್ರದಾಯವನ್ನು ನಾವಿಂದು ಆಚರಿಸುತ್ತೇವೆ. ಹಿಂದೆ ಜನ್ಮದಿನದಂದು ಮಕ್ಕಳನ್ನು ಸಾಯಂಕಾಲ ದೇವಸ್ಥಾನಕ್ಕೆ

ಕರೆದುಕೊಂಡು ಹೋಗಿ ದೇವರ ಆಶೀರ್ವಾದವನ್ನು ಪಡೆಯುತ್ತಿದ್ದರು. ಇಂದು ಕತ್ತಲೆಯಾದ ಮೇಲೆ ಹೋಟೆಲಿಗೊ, ಬಾರಿಗೊ ಹೋಗಿ ಪಾರ್ಟಿ ಮಾಡುತ್ತೇವೆ. ನಮಗೆ ಯಾವ ಸಂದರ್ಭವನ್ನು ಹೇಗೆ, ಯಾವಾಗ, ಯಾಕಾಗಿ ಆಚರಿಸಬೇಕಂತಲೆ ಗೊತ್ತಿಲ್ಲ.

<u>ವಿದೇಶೀ ಆಚರಣೆ ಬೇಕೆ?</u>

ಇತ್ತೀಚೆಗೆ ಈ ದೇಶದಲ್ಲಿ ಹೊಸದೊಂದು ದಿನಾಚರಣೆ ಆರಂಭವಾಗಿ ಇಂದು ಅದು ವಿಜೃಂಭಣೆಯಿಂದ ಆಚರಿಸಲ್ಪಡುತ್ತಿದೆ. ಅದು ಪ್ರೇಮಿಗಳ ದಿನ, ವಾಲೆಂಟೈನ್ಸ್ ಡೇ. ಈ 'ವಾಲೆಂಟೈನ್ಸ್ ಡೇ'ಯ ಹಿನ್ನೆಲೆ ಏನು? -ಎಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದು. ರೋಮ್ ಸಾಮ್ರಾಟ, ಮದುವೆಯಾದ ಹಾಗೂ ಪ್ರೇಮಬಂಧನದಲ್ಲಿ ಸಿಲುಕಿದ ಸೈನಿಕರು ದೇಶಕ್ಕಾಗಿ ನಿಷ್ಠೆಯಿಂದ ಹೋರಾಡಲು ಸಾಧ್ಯವಿಲ್ಲವೆಂದು ಭಾವಿಸಿದ್ದ. ರಾಷ್ಟ್ರನಿಷ್ಠೆಯು ಕೌಟುಂಬಿಕನಿಷ್ಠೆಗೆ ಅಧೀನವಾಗಬಾರದೆಂದು ರೋಮ್ ಚಕ್ರವರ್ತಿ ಕ್ಲಾಡಿಯಸ್ ಕಟ್ಟಾಜ್ಞೆ ಹೊರಡಿಸಿ, ಯಾರೂ ಪ್ರೀತಿಸಿ ಮದುವೆಯಾಗಬಾರದೆಂದು ವಿಧಿಸಿದನಂತೆ. ಆದರೆ ಕ್ರೈಸ್ತ ಸನ್ಯಾಸಿ ವಾಲೆಂಟೈನ್ ರಾಜಾಜ್ಞೆಯನ್ನು ಉಲ್ಲಂಘಿಸಿ ಅದೊಂದು ಸುಮುಹೂರ್ತದಲ್ಲಿ ಪ್ರೇಮೋತ್ಸವ ಏರ್ಪಡಿಸಿದನಂತೆ. ಆ ದಿನ ಅನೇಕ ತರುಣ-ತರುಣಿಯರು ಒಂದುಗೂಡಿ ಪ್ರೇಮವನ್ನು ಹಂಚಿಕೊಂಡರಂತೆ. ರಾಜಾಜ್ಞೆಯನ್ನು ಉಲ್ಲಂಘಿಸಿದ ತಪ್ಪಿಗಾಗಿ ಚಕ್ರವರ್ತಿ ಕ್ಲಾಡಿಯಸ್ ವಾಲೆಂಟೈನ್‌ನನ್ನು ಬಂಧಿಸಿ ಜೈಲಿಗೆ ತಳ್ಳಿದ. ಕ್ರಿ.ಶ.೪೬೩ ಫೆಬ್ರವರಿ ೧೪ರಂದು ವಾಲೆಂಟೈನ್ ಗಲ್ಲಿಗೇರಿಸಲ್ಪಟ್ಟ. ಸಾಯುವ ಮುನ್ನ ವಾಲೆಂಟೈನ್ ತನ್ನ ಜೀವನದ ಅಂತಿಮ ಸಂದೇಶವಾಗಿ ತನ್ನ ಪ್ರೇಯಸಿಗೆ ಪ್ರೇಮಪತ್ರ ಬರೆಯುತ್ತಾನೆ. ವಾಲೆಂಟೈನ್ ಸ್ಮರಣಾರ್ಥ ಪ್ರತಿವರ್ಷ ಜಗತ್ತಿನ ಹದಿಹರೆಯದ ಜೋಡಿಗಳು ಆತನ ಸ್ಮರಣೆಯಲ್ಲಿ ಫೆಬ್ರವರಿ ಹದಿನಾಲ್ಕರಂದು ಪ್ರೇಮೋತ್ಸವ ಆಚರಿಸುತ್ತಾರೆ. ಆ ದಿನವೇ 'ವಾಲೆಂಟೈನ್ಸ್ ಡೇ'. ಕ್ರಿ.ಶ.೪೯೮ರಿಂದ ಯೂರೋಪಿನಾದ್ಯಂತ 'ವಾಲೆಂಟೈನ್ಸ್ ಡೇ' ಜಾರಿಯಲ್ಲಿ ಬಂತು ಎಂಬ ಹೇಳಿಕೆಗಳಿವೆ. ೧೪೧೫ರಲ್ಲಿ ಲಂಡನ್ನಿನ ಸೆರೆಮನೆಯಲಿದ್ದ ಡ್ಯೂಕ್ ಆಫ್ ಜಾರ್ಲಿಯೂನ್ಸ್ (ಮೊದಲನೇ ಚಾರ್ಲ್ಸ್) ತನ್ನ ಪ್ರಿಯತಮೆಗೆ ವಾಲೆಂಟೈನ್ಸ್ ಡೇ ಸಂದರ್ಭದಲ್ಲಿ ಬರೆದ ಪ್ರೇಮ ಪತ್ರವನ್ನು ಇವತ್ತಿಗೂ ಬ್ರಿಟಿಷ್ ಮ್ಯೂಜಿಯಂನಲ್ಲಿ ಕಾಣಬಹುದು. ಈ ಘಟನೆಯ ನಂತರ 'ವಾಲೆಂಟೈನ್ಸ್ ಡೇ' ಕಾರ್ಡುಗಳ ಆವಿಷ್ಕಾರವಾಯಿತು. ಈಗ ಜಗತ್ತಿನಲ್ಲಿ 'ಶುಭೇಚ್ಛಾ ಪತ್ರಗಳು' ಅಂದರೆ 'ವಾಲೆಂಟೈನ್ಸ್ ಡೇ' ಕಾರ್ಡುಗಳು ಸುಮಾರು ನೂರು ಕೋಟಿಗಿಂತ ಅಧಿಕ ಅಚ್ಚಾಗುತ್ತವೆ ಎಂದು ಅಂದಾಜು ಮಾಡಲಾಗಿದೆ. ಕ್ರಿಸ್‌ಮಸ್ ತರುವಾಯ 'ವಾಲೆಂಟೈನ್ಸ್ ಡೇ' ಆಚರಣೆಯ ಸಂದರ್ಭದಲ್ಲಿ ಅತಿ ಹೆಚ್ಚು 'ಶುಭಾಶಯ ಪತ್ರಗಳು' ಕಳುಹಿಸಲ್ಪಡುವವು ಎಂಬುದಾಗಿ ಅಂದಾಜು ಮಾಡಲಾಗಿದೆ.

ಆಮದು ಸಂಸ್ಕೃತಿ

ಪ್ರೇಮಿಗಳ ದಿನವಿದ್ದಂತೆ ಪಾಶ್ಚಾತ್ಯರಲ್ಲಿ 'Mother's day' ಎಂಬುದಾಗಿ ಆಚರಣೆಯಲ್ಲಿದೆ. ಪ್ರಾಯಶಃ ಪಾಶ್ಚಾತ್ಯರಲ್ಲಿ 'Mother's day' ದಿನ ಮಾತ್ರ ತಾಯಿ-ಮಕ್ಕಳು ಒಟ್ಟಾಗಿ ಮಾತನಾಡಿ ಸಂಭ್ರಮವನ್ನು ಆಚರಿಸುತ್ತಾರೆ! ವರ್ಷಪೂರ್ತಿ ತಾಯಿಯನ್ನು ಮರೆತರೂ 'ಮದರ್ಸ್ ಡೇ' ಯಂದು ಮಾತ್ರ ತಾಯಿಯನ್ನು ಪ್ರೀತಿಸುತ್ತಾರೆ. ಯಾಕೆಂದರೆ ತಾಯಿ ಬೇರೆ ಮನೆಯಲ್ಲಿ ಅಥವಾ ವೃದ್ಧಾಶ್ರಮದಲ್ಲಿರುತ್ತಾರೆ. ಹೆತ್ತವರನ್ನು ವೃದ್ಧಾಶ್ರಮದಲ್ಲಿ ಬಿಡುವುದು ವಿದೇಶೀ ಪದ್ಧತಿ. ಇವತ್ತು ನಮ್ಮ ದೇಶದಲ್ಲೂ ಈ 'ಸಂಸ್ಕೃತಿ' ಬಂದಿದೆ. ವಿಧವಾಶ್ರಮ, ಅಬಲಾಶ್ರಮ, ವೃದ್ಧಾಶ್ರಮ ಇವೆಲ್ಲವೂ ನಮ್ಮ ಸಂಸ್ಕೃತಿಯಲ್ಲ, ವಿದೇಶದಿಂದ ಆಮದಾದ ಸಂಸ್ಕೃತಿ. ಓರ್ವ ವಿಧವೆಯನ್ನಾಗಲಿ, ವೃದ್ಧೆಯನ್ನಾಗಲಿ ನಿಜವಾಗಿ ಯಾರು ನೋಡಿಕೊಳ್ಳಬೇಕು? ಅದು ಆಯಾಯ ಕುಟುಂಬದ ಜವಾಬ್ದಾರಿ. ನಮ್ಮ ತಂದೆ-ತಾಯಿಯರಿಗೆ ವಯಸ್ಸಾಯಿತು, ಮುದಿತನ ಬಂತೆಂದು ವೃದ್ಧಾಶ್ರಮಕ್ಕೆ ಸೇರಿಸುವುದು ಎಷ್ಟು ಸರಿ? ಇಂದಿನ ಕಾಲದಲ್ಲಿ ಹೆತ್ತವರ ಮತ್ತು ಮಕ್ಕಳ ಸಂಬಂಧ ಶಿಥಿಲವಾಗುತ್ತಿದೆ. ವಯಸ್ಸಾದ ತಂದೆ-ತಾಯಿಯನ್ನು ನೋಡಿಕೊಳ್ಳಲು ಕಷ್ಟವಾಗುತ್ತದೆಂದು ಅವರನ್ನು ವೃದ್ಧಾಶ್ರಮಕ್ಕೆ ಸೇರಿಸುವ ಪರಿಪಾಟಿ ಬೆಳೆಯುತ್ತಿದೆ. ಹೆತ್ತವರು ತಮ್ಮ ಎಲ್ಲ ಹತ್ತು ಮಕ್ಕಳನ್ನು ಅಕ್ಕರೆಯಿಂದ, ಪ್ರೀತಿಯಿಂದ ಸಾಕಿ ಸಲಹಿ ದೊಡ್ಡವರನ್ನಾಗಿ ಮಾಡುತ್ತಾರೆ. ಆದರೆ ಹತ್ತು ಜನ ಮಕ್ಕಳಿಗೆ ತಮ್ಮ ಹೆತ್ತವರನ್ನು ನೋಡಿಕೊಳ್ಳಲು ಆಗದೆ ಇರುವುದು ನಿಜಕ್ಕೂ ದುರಂತದ ಸಂಗತಿ. ಇದಕ್ಕಿಂತ ಕೃತಘ್ನವಾದ ಕೆಲಸ ಪ್ರಪಂಚದಲ್ಲಿ ಬೇರೊಂದಿರಲಿಕ್ಕಿಲ್ಲ. ನಾವು ಇವತ್ತು ಪಾಶ್ಚಾತ್ಯರ ಸಂಸ್ಕೃತಿಯಿಂದ ಪ್ರಭಾವಿತರಾಗಿ ನಮ್ಮ ಮನೆಯಲ್ಲಿರುವ ವೃದ್ಧರನ್ನು, ವಿಧವೆಯರನ್ನು ಕಡೆಗಣಿಸುತ್ತಿದ್ದೇವೆ.

ಕುರುಡು ತಂದೆ-ತಾಯಿಯನ್ನು ಹೆಗಲ ಮೇಲೆ ಕೂರಿಸಿ ಶ್ರವಣಕುಮಾರನು ತೀರ್ಥಯಾತ್ರೆ ಮಾಡಿಸಿದ ದೇಶವಿದು. ವೃದ್ಧ ತಂದೆಯಾದ ಯಯಾತಿಗೆ ತನ್ನ ಯೌವನವನ್ನೆ ಧಾರೆ ಎರೆದ ಪುರೂರವನ ನಾಡಿದು. ಕುಂತಿ ವಿಧವೆಯಾದಳು ಎಂದು ಅವಳನ್ನು ಯಾರಾದರೂ ವಿಧವಾಶ್ರಮಕ್ಕೆ ಸೇರಿಸಿದರೆ? ಅವರ ಮಕ್ಕಳಾದ ಪಾಂಡವರು ಅವಳನ್ನು ಪ್ರೀತಿಯಿಂದ ನೋಡಿಕೊಳ್ಳಲಿಲ್ಲವೆ? ವರ್ಷಕ್ಕೊಮ್ಮೆ ಮಾತ್ರ ತಾಯಿಗೆ ಪ್ರೀತಿ ತೋರಿಸುವುದು ಭಾರತೀಯ ಸಂಸ್ಕೃತಿಯಲ್ಲ, ಬದಲಿಗೆ ಅದು ಪಾಶ್ಚಾತ್ಯ ಸಂಸ್ಕೃತಿ. ಆದ್ದರಿಂದಲೇ ಅಲ್ಲಿ 'Mother's day' ಆಚರಣೆಯಲ್ಲಿದೆ. ಸ್ತ್ರೀಯರನ್ನು ತಾಯಿಯಂತೆ ಗೌರವಿಸುವ ಈ ನಮ್ಮ ನಾಡಿನಲ್ಲಿ ಇಂದು ಕಾಮವನ್ನು ಪ್ರಚೋದಿಸುವ, ಪ್ರೇಮವನ್ನು ವೈಭವೀಕರಿಸುವ ಸೌಂದರ್ಯಸ್ಪರ್ಧೆ, ವಾಲೆಂಟೈನ್ಸ್ ಡೇ, ಉನ್ಮಾದವನ್ನು ಪ್ರದರ್ಶಿಸುವ ನ್ಯೂ ಯಿಯರ್ಸ್ ಡೇಯನ್ನು ಬಹಿರಂಗವಾಗಿ, ರಾಜಾರೋಷವಾಗಿ ಆಚರಿಸುತ್ತೇವೆ. ಇವೆಲ್ಲವೂ ಪಾಶ್ಚಾತ್ಯ ಸಂಸ್ಕೃತಿಯ ಮೂಲಕ

ಭಾರತಕ್ಕೆ ಪಾದಾರ್ಪಣೆ ಮಾಡಿದ ಸಾಮಾಜಿಕ ಕೆಡುಕುಗಳು.

ಒಮ್ಮೆ ಫೆಮಿನಾ 'ಮಿಸ್ ಇಂಡಿಯಾ' ಸೌಂದರ್ಯ ಸ್ಪರ್ಧೆಯಲ್ಲಿ ಅರೆಬೆತ್ತಲೆ ತರುಣಿಯರು ಬೆಕ್ಕಿನ ನಡಿಗೆಯಿಂದ (Cat Walk)ದರ್ಶಕರ ಸಮ್ಮುಖದಲ್ಲಿ ಬಂದು ಹೋಗುವ ಸಮಯದಲ್ಲಿ ಟೇಪ್‌ರೆಕಾರ್ಡಿನ ಮೂಲಕ ವಿಷ್ಣುಸಹಸ್ರನಾಮದ ಶ್ಲೋಕಗಳನ್ನು ಈ ಕೀಳು ಕಾರ್ಯಕ್ರಮಕ್ಕಾಗಿ ಉಪಯೋಗಿಸಲಾಯಿತು. ಸೌಂದರ್ಯಸ್ಪರ್ಧೆಯ ಮೂಲಕ ಭಾರತೀಯರ ಭಾವನೆಗಳನ್ನು ಕೆಣಕಿದರೂ ನಮ್ಮವರಿಂದ ಪ್ರತಿಭಟನೆಯೇ ಬರಲಿಲ್ಲ.

ಹೊಸ ಮಾರಿ

ಈ.ಎಲ್ಲ ಗೊಂದಲಗಳ ನಡುವೆ ಈಗ ದೇಶದಲ್ಲಿ ಹೊಸದೊಂದು ಆಚರಣೆಯ ಗಾಳಿ ಬೀಸುತ್ತಿದೆ. ಅದೇ 'ಕಿಸ್ಸಿಂಗ್ ಡೇ'. ನೈತಿಕ ಪೊಲೀಸ್‌ಗಿರಿ ವಿರೋಧಿಸಲು ಫ್ರೀ ಥಿಂಕರ್ಸ್ ಎಂಬ ಸಂಘಟನೆಯೊಂದು 'ಕಿಸ್ ಆಫ್ ಲವ್' ಆಯೋಜಿಸುವ ಮೂಲಕ ವಿಶೇಷ ಪ್ರತಿಭಟನೆಯನ್ನು ರಾಷ್ಟದ ಪ್ರಮುಖ ನಗರಗಳಲ್ಲಿ ಹಮ್ಮಿಕೊಂಡಿದೆ. ಯುವ ಪ್ರೇಮಿಗಳು ತಬ್ಬಿಕೊಂಡು ಮುತ್ತಿನ ದಿನವನ್ನು ಯಶಸ್ವಿಗೊಳಿಸಬೇಕು ಎಂದು ಈ ಸಂಘಟನೆ ಕರೆಕೊಟ್ಟಿದೆ.

ಇಂತಹ ಅಸಭ್ಯ, ಅಶ್ಲೀಲ ವರ್ತನೆ ಸಂಘಟಕರ ವಿಕೃತ ಮನಸ್ಸನ್ನು ಎತ್ತಿತೋರಿಸುತ್ತದೆ. ಯುವಜನಾಂಗವನ್ನು ರಚನಾತ್ಮಕ ಕೆಲಸಗಳಲ್ಲಿ ತೊಡಗಿಸಬೇಕಾದ ಆಚರಣೆಗಳನ್ನು ಬಿಟ್ಟು ವಿಘಟನಾತ್ಮಕವಾದ, ಅನೈತಿಕವಾದ ಕೆಲಸಗಳಲ್ಲಿ ತೊಡಗಿಸಿ ಇಡೀ ದೇಶವನ್ನೇ ಅಧಃಪತನದತ್ತ ಒಯ್ಯುವ ಪ್ರಯತ್ನ ನಿಜಕ್ಕೂ ಬೇಸರದ ಸಂಗತಿ. ಹೀಗೆ ಒಂದು ಕಡೆ ಅರ್ಥವಿಲ್ಲದ, ಅನರ್ಥಕಾರಿಯಾದ ಆಚರಣೆಗಳನ್ನು ವಿಚಾರವಾದಿಗಳು ಬೆಂಬಲಿಸಿದರೆ, ಅರ್ಥಪೂರ್ಣವಾದ ಆಚರಣೆಗಳನ್ನು ವಿರೋಧಿಸುವ ಬುದ್ಧಿಜೀವಿಗಳು ಈ ದೇಶದಲ್ಲಿದ್ದಾರೆ.

೧೯೯೮ರ ಸೆಪ್ಟೆಂಬರ್ ಇಪ್ಪತ್ತೆರಡರಂದು ದೆಹಲಿಯ ವಿಜ್ಞಾನಭವನದಲ್ಲಿದ್ದ ಶಿಕ್ಷಣ ಮಂತ್ರಿಗಳ ಸಮ್ಮೇಳನ ಜರುಗಿತು. ಆ ಸಮಯದಲ್ಲಿ ಮಾನವಸಂಪನ್ಮೂಲ ಮಂತ್ರಿಯಾಗಿದ್ದ ಮುರಳಿ ಮನೋಹರ ಜೋಶಿ ಆ ಸಮ್ಮೇಳನದ ಸಂಯೋಜಕರಾಗಿದ್ದರು. ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಸಮ್ಮೇಳನದ ಉದ್ಘಾಟನೆ ಮಾಡಿದರು. ಕರ್ನಾಟಕದ ಜೆ.ಎಚ್.ಪಟೇಲರ ಮಂತ್ರಿಮಂಡಲದಲ್ಲಿ ಶಿಕ್ಷಣಸಚಿವರಾಗಿದ್ದ ಗೋವಿಂದೇಗೌಡರು ಕೂಡ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಸಮಾರಂಭ 'ಸರಸ್ವತೀ ವಂದನೆ'ಯೊಂದಿಗೆ ಪ್ರಾರಂಭವಾದ ಕೂಡಲೆ ಗೋವಿಂದೇಗೌಡರ ಸಮೇತ ಅನೇಕ ಶಿಕ್ಷಣ ಮಂತ್ರಿಗಳು ವಿರೋಧ ಮಾಡುತ್ತ 'ಶಿಕ್ಷಣದ ಕೇಸರೀಕರಣ ಬೇಡ, ನಮಗೆ ಹಿಂದುತ್ವ ಬೇಡ' ಎಂದು ಘೋಷಣೆ ಹಾಕಿ ಸರಸ್ವತಿ ವಂದನೆ ಕಾರ್ಯಕ್ರಮವನ್ನು ಬಹಿಷ್ಕರಿಸಿದರು. ಶಿಕ್ಷಣದ ಸಮ್ಮೇಳನದಲ್ಲಿ

ವಿದ್ಯೆಯ ಅಧಿದೇವತೆಯಾದ ಸರಸ್ವತಿಯನ್ನು ಸ್ಮರಿಸದೆ, ವಂದಿಸದೆ ಬೇರೆ ಯಾರನ್ನು ವಂದಿಸುವುದು? ಒಮ್ಮೆ ಜವಹರಲಾಲ್ ನೆಹರುರವರು ವಿಶಾಖಪಟ್ಟಣದ ಬಂದರನ್ನು ತೆಂಗಿನಕಾಯಿ ಒಡೆದು ಉದ್ಘಾಟಿಸುವಾಗ ಕೆಲವು ಬುದ್ಧಿಜೀವಿಗಳಿಂದ ವಿರೋಧ ಬಂದಿತ್ತು. ಹೀಗೆ ನಮ್ಮ ಆಚರಣೆಗಳಲ್ಲಿ ಮತೀಯತೆಯನ್ನೂ, ಮೂಢನಂಬಿಕೆಯನ್ನೂ, ಪಾಶ್ಚಾತ್ಯ ಆಚರಣೆಗಳಲ್ಲಿ ಜಾತ್ಯಾತೀತತೆಯನ್ನೂ ಸಾರ್ಥಕತೆಯನ್ನೂ ಕಾಣುವವರನ್ನು ಏನೆಂದು ಕರೆಯಬೇಕು?

ಇವತ್ತು ನಮ್ಮ ಆಟ, ಊಟ, ವೇಷಭೂಷಣ ಎಲ್ಲದರಲ್ಲಿಯೂ ಪಾಶ್ಚಾತ್ಯ ಪದ್ಧತಿ ನುಸುಳಿದೆ. ಯಾವುದೇ ಶುಭ ಸಮಾರಂಭ ಮುಗಿದ ಮೇಲೆ ಭೋಜನವನ್ನು ನಾವು ಹೇಗೆ ಸ್ವೀಕಾರ ಮಾಡುತ್ತೇವೆ? ಹೆಚ್ಚಿನ ಕಡೆ ಇಂದು 'ಬುಫೆ' ಪದ್ಧತಿಯಲ್ಲಿ ಊಟ ಮಾಡುತ್ತೇವೆ. ಒಂದು ಕೈಯಿಂದ ತಟ್ಟೆಯನ್ನು ಹಿಡಿದು ಇನ್ನೊಂದು ಕೈಯಿಂದ ಬಡಿಸಿಕೊಳ್ಳುತ್ತಾ ಅಥವಾ ತಿನ್ನುತ್ತಾ ತಿರುಗಾಡುತ್ತೇವೆ. ನಮ್ಮ ದೇಶದಲ್ಲಿ ಆಹಾರ ಸೇವನೆಯೂ ಒಂದು ಯಜ್ಞ, 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ಪ್ರಾಣಾಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ' – ಭಗವಂತನಾದ ನಾನೇ ವೈಶ್ವಾನರ ಅಗ್ನಿಯ ರೂಪದಲ್ಲಿ ಪ್ರಾಣಿಗಳ ಜಠರ ಆಶ್ರಯಿಸಿ ಪ್ರಾಣ, ಅಪಾನ, ವಾಯುವಿನ ಜೊತೆಯಲ್ಲಿ ಸೇರಿ ನಾಲ್ಕು ರೀತಿಯ ವಿವಿಧ ಆಹಾರವನ್ನು ಪಚನಗೊಳಿಸುತ್ತೇನೆ – ಹೀಗೆ ಒಳಗಿರುವ ಭಗವಂತನಿಗೆ ಆಹಾರ ನೀಡಿ ಪೂಜಿಸುವ ಪದ್ಧತಿಯನ್ನು ತಿರುಗಾಡುತ್ತಾ ಮಾಡುವ ಬದಲು ಒಂದೇ ಕಡೆ ಕೂತು ಆತನನ್ನು ನೆನೆದು ಸೇವಿಸುವುದು ಉತ್ತಮ. ನೆಲದ ಮೇಲೆ ಕೂತು ಊಟ ಮಾಡುವುದು ನಮ್ಮ ಮನಸ್ಸಿಗೂ ಹಿತಕರವಾದುದು, ಆರೋಗ್ಯಕ್ಕೂ ಒಳ್ಳೆಯದು. ನಾವು ನಮ್ಮ ತನವನ್ನೇ ಮರೆತು ಬದುಕಿದರೆ ಅದು ನೈಜಜೀವನವಾಗುವುದಿಲ್ಲ. ಬದಲಿಗೆ ಅದೊಂದು ನಕಲಿ ಜೀವನವಾಗುತ್ತದೆ. ಇಂದು ನಾವು ನುಡಿಯುವ ಭಾಷೆಯಲ್ಲೂ, ನಡೆಯುವ ನಡಿಗೆಯಲ್ಲೂ ಪಾಶ್ಚಾತ್ಯರ ಅನುಕರಣೆ ಎದ್ದುಕಾಣುತ್ತಿದೆ. ಪಾಶ್ಚಾತ್ಯರ ಸಂಪ್ರದಾಯವೆಲ್ಲ ನಿಕೃಷ್ಟವಾದದ್ದು, ಭಾರತೀಯರ ಸಂಪ್ರದಾಯವೆಲ್ಲವೂ ಶ್ರೇಷ್ಠವಾದದ್ದು ಎಂಬುದು ಇದರರ್ಥವಲ್ಲ. ಆದರೆ ಯಾವುದೇ ಆಚರಣೆಯಲ್ಲಿ, ಸಂಪ್ರದಾಯದಲ್ಲಿ ಜೊಳ್ಳೆಷ್ಟು, ಕಾಳೆಷ್ಟು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಟೊಳ್ಳನ್ನು ಬಿಟ್ಟು, ಗಟ್ಟಿತನವನ್ನು ಹಿಡಿದುಕೊಳ್ಳಬೇಕು. ನಿರರ್ಥಕತೆಯ ಹಿಂದೆ ಬೀಳದೆ ಸಾರ್ಥಕತೆಯನ್ನು ಅನುಸರಿಸಬೇಕು. ನಮ್ಮ ಆಚರಣೆಗಳು ಅರ್ಥಪೂರ್ಣವಾಗಿರಲಿ. ಆವಾಗಲೇ ನಮ್ಮ ಜೀವನಕ್ಕೊಂದು ಅರ್ಥ ಬರುತ್ತದೆ.

– ಸಾಭಾರ : ಉತ್ಥಾನ

ಭಾರತೀಯ ಚಿಂತನ ಕ್ರಮವೊಂದು ಇದೆಯೇ?

– ಎಂ.ಎ.ಹೆಗಡೆ

(ಕಳೆದ ಅಕ್ಟೋಬರ್ ೨ರಿಂದ ೮ರವರೆಗೆ ಹೆಗ್ಗೋಡಿನ ನೀನಾಸಂ ಸಂಸ್ಕೃತಿ ಶಿಬಿರದಲ್ಲಿ 'ಭಾರತೀಯ ಎನ್ನುವ ಒಂದು ಚಿಂತನ ಕ್ರಮ ಇದೇಯೇ?' ಎಂಬ ವಿಚಾರವನ್ನಾಧರಿಸಿದ ಚಿಂತನ – ಮಂಥನ ನಡೆಯಿತು. ಆ ಸಂದರ್ಭದಲ್ಲಿ ಕೆಲವು ಚಿಂತಕರು ಪ್ರಬಂಧಗಳನ್ನು ಮಂಡಿಸಿದರು. ಅವುಗಳಲ್ಲಿ ಪ್ರಾತಿನಿಧಿಕವಾಗಿ ಒಂದು ಲೇಖನವನ್ನು ಜನಪದ ವಿಚಾರದ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ – ಸಂ)

ಸಾವಿರಾರು ವರ್ಷಗಳ ಸುದೀರ್ಘವಾದ ಇತಿಹಾಸ, ಸಂಸ್ಕೃತಿ, ನಾಗರಿಕತೆಗಳಿರುವ ಭಾರತದಂಥ ಒಂದು ದೇಶಕ್ಕೆ ತನ್ನದೇ ಆದ ಚಿಂತನಕ್ರಮವಿದೆಯೇ? ಎಂಬ ಪ್ರಶ್ನೆಯೆ ಅನೇಕ ಪ್ರಶ್ನೆಗಳ ಪರಂಪರೆಯನ್ನು ಹುಟ್ಟಿಸುತ್ತದೆ. ಭಾರತೀಯರಿಗೆ ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮಗಳೆಂಬ ಐದು ಇಂದ್ರಿಯಗಳಿವೆ; ಅವುಗಳ ಅನುಭವಕ್ಕೆ ಬರುವ ವಿಷಯಗಳಾದ ಬಣ್ಣ, ರೂಪ, ಶಬ್ದ, ಗಂಧ, ರಸ ಮತ್ತು ಸ್ಪರ್ಶಗಳ ಬಗೆಗೆ ತಮ್ಮವೇ ಆದ ಕಲ್ಪನೆಗಳಿವೆ. ಉದಾ : ಭಾರತೀಯರು ಸಾಮಾನ್ಯವಾಗಿ ಇಷ್ಟಪಡುವುದು ಭಾರತೀಯ ಬಿಳಿ ಚರ್ಮವನ್ನೇ ಹೊರತು ಆಂಗ್ಲರ ಬಿಳಿ ಚರ್ಮವನ್ನಲ್ಲ; ಭಾರತೀಯ ಕಪ್ಪು ಬಣ್ಣ ಆಕರ್ಷಕವೆನಿಸಿದಷ್ಟು ಆಫ್ರಿಕನ್ನರ ಕಪ್ಪು ಬಣ್ಣ ಇಷ್ಟವಾಗುವುದಿಲ್ಲ. ಹಾಗಿರುವಾಗ ಚಿಂತನಕ್ರಮವೊಂದು ಇದೆಯೋ ಇಲ್ಲವೋ ಎಂಬ ಸಂದೇಹಕ್ಕೆ ಅವಕಾಶವಿರಲಾರದೆಂದು ಅನಿಸುತ್ತದೆ. 'ಇದೆ'ಯೆಂದು ಹೇಳಿದಾಗ ಅದನ್ನು ಮೂರೂ ಕಾಲಗಳಿಗೆ ಅನ್ವಯಿಸಿಕೊಳ್ಳಬೇಕು. ಅಂದರೆ ಹಿಂದೆಯೂ ಇತ್ತು; ಈಗಲೂ ಇದೆ; ಮುಂದೆಯೂ ಇರುತ್ತದೆಯೆಂದು ಭಾವಿಸಬೇಕು. ಅದು ವೇದದ ಥರವೇ ಆಗಿರುತ್ತದೆಯೆಂದು ತಿಳಿಯಬೇಕಾಗಿಲ್ಲ. ಹೊರಗಿನ ಆವರಣವು ಬದಲಾಯಿಸಿದರೂ ಒಳಗಿನ ತಿರುಳು ಭಾರತೀಯವೇ ಆಗಿರುತ್ತದೆ. ವ್ಯಕ್ತಿ ಭೇದವನ್ನು ಅವಲಂಬಿಸಿ ಅದು ದಟ್ಟವಾಗಿರಬಹುದು ಅಥವಾ ತೆಳ್ಳಗಾಗಿರಬಹುದು.

ಜಗತ್ತಿನ ಬೇರೆ ಬೇರೆ ದೇಶಗಳಿಗೆ ತಮ್ಮದೇ ಆದ ಚಿಂತನಕ್ರಮವೊಂದು ಇದೆಯೆಂದಾದರೆ ಭಾರತೀಯರಿಗೂ ಒಂದು ಚಿಂತನಕ್ರಮವಿದೆಯೆಂದು ಹೇಳಬೇಕಾಗುತ್ತದೆ. ಭಾರತವು ವಿಸ್ತಾರ–ವೈವಿಧ್ಯಗಳಿಂದ ಸೀಮಿತ ಪ್ರದೇಶ ವ್ಯಾಪ್ತಿಯನ್ನು ಮೀರಿದ್ದು ಖಂಡ ಅಥವಾ ಉಪಖಂಡವೆನ್ನಿಸಿಕೊಳ್ಳಲು ಅರ್ಹವಾಗಿದೆ. ಪ್ರಾಚೀನರ ಪ್ರಕಾರ ಇದು ಭರತಖಂಡ; ಭಾರತವರ್ಷ. ಈ ವಿಶಾಲವಾದ ಭೂಖಂಡದಲ್ಲಿ ಒಂದು ಚಿಂತನಕ್ರಮವಿರಲು ಸಾಧ್ಯವೇ? ಎಂಬ ಪ್ರಶ್ನೆ ಪಾಶ್ಚಾತ್ಯ ವಿದ್ವಾಂಸರನ್ನು ಕಾಡಿದಂತೆ ಅವರ ಗರಡಿಯಲ್ಲಿ ಪಳಗಿದ ಆಧುನಿಕ ಭಾರತೀಯರನ್ನೂ ಬಾಧಿಸಿದೆ. ಆದರೆ ಅದು ರಾಮೇಶ್ವರದ ಮರಳನ್ನು ಗಂಗೆಯಲ್ಲಿ ಸೇರಿಸುವ, ಕನ್ಯಾಕುಮಾರಿಯ ಸಮುದ್ರವನ್ನೂ ಕೇದಾರನಾಥನ ದರ್ಶನವನ್ನೂ ಮಾಡಬಯಸುವ, ಮಾನಸಸರೋವರದ ದರ್ಶನದಿಂದ ಪುನೀತರಾದೆವೆಂದು ಭಾವಿಸುವ ಭಾರತೀಯರನ್ನೂ ಬಾಧಿಸುವುದಿಲ್ಲ.

ನ್ಯಾಯದರ್ಶನದಲ್ಲಿ 'ಜಾತಿ' ಯೆಂಬ ಕಲ್ಪನೆಯಿದೆ. ಅದು ಒಂದು ವರ್ಗದ ಲಕ್ಷಣವಾಗಿ ಬಳಕೆಗೊಳ್ಳುತ್ತದೆ. ಇದು ಬ್ರಾಹ್ಮಣ-ಅಬ್ರಾಹ್ಮಣ ಎಂದೆಲ್ಲ ಇಂದು ಹೆಚ್ಚು ಪ್ರಚಾರದಲ್ಲಿರುವ ಜಾತಿಯಲ್ಲ. ವರ್ಗಲಕ್ಷಣ, ಮನುಷ್ಯತ್ವ, ಗೋತ್ವ ಇತ್ಯಾದಿಗಳು ಜಾತಿಗಳೆನಿಸುತ್ತವೆ. ಮನುಷ್ಯರನ್ನೇ ತೆಗೆದುಕೊಳ್ಳಿ. ಈ ಪ್ರಪಂಚದಲ್ಲಿ ಕೋಟ್ಯಾಂತರ ಮನುಷ್ಯರಿದ್ದಾರೆ; ಒಬ್ಬೊಬ್ಬರೂ ಮತ್ತೊಬ್ಬರಂತಿಲ್ಲ; ಒಬ್ಬರಂತೆ ಮತ್ತೊಬ್ಬರಿಲ್ಲ. ಹಾಗಿದ್ದರೂ ಅವರೆಲ್ಲರನ್ನೂ ಮನುಷ್ಯರೆಂದೇ ಗುರುತಿಸುವುದಕ್ಕೆ ಕಾರಣವಾದುದು ಜಾತಿ. ಇದು ಮನುಷ್ಯರು ಹುಟ್ಟುವುದಕ್ಕಿಂತ ಮೊದಲೂ ಇತ್ತು; ಮನುಷ್ಯರೆಲ್ಲ ಅಳಿದುಹೋದರೂ ಇರುತ್ತದೆಯೆಂದು ಹೇಳಲಾಗಿದೆ.

ಅದ್ವೈತವೇದಾಂತವು ಏಕತೆಯ ಕುರಿತು ಕೊಡುವ ದೃಷ್ಟಾಂತವೊಂದಿದೆ. 'ಯಾವನು ಮಗುವಾಗಿ ತಾಯಿಯ ತೊಡೆಯ ಮೇಲೆ ಮಲಗುತ್ತಿದ್ದನೋ ಅವನೇ ಇಂದು ಮೊಮ್ಮಗನನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಆಡಿಸುತ್ತಿದ್ದಾನೆ. ಅಂದು ಶಿಶುವಾಗಿರುವಾಗ ಇರುವ ರೂಪ-ಆಕಾರಗಳೆಲ್ಲವೂ ಬದಲಾಗಿರುತ್ತದೆ. ಪ್ರತಿಕ್ಷಣದಲ್ಲಿಯೂ ಬದಲಾವಣೆಯು ನಡೆಯುತ್ತಿರುವಾಗ ಹೊರಗಿನ ಆಕಾರವು ಪೂರ್ತಿಯಾಗಿ ಬದಲಾಯಿಸಿದ್ದರೂ 'ಅವನೇ ಅವನು' ಎಂದು ತಿಳಿಯುವುದಕ್ಕೆ ಕಾರಣವಾದುದೇ ಆತ್ಮವೆನಿಸುತ್ತದೆ. ಈ ಒಂದುತನದ ಕಲ್ಪನೆಯೂ ಅಂಥದ್ದೇ. ಅದರ ಗುಣ-ಲಕ್ಷಣಗಳನ್ನು ಹೀಗೆಯೇ ಎಂದು ನಿರ್ಧರಿಸಲಾಗದಿದ್ದರೂ ಅದು ಅರಿವಿಗೆ ಬರುತ್ತದೆ. ಈ ಅರಿವಿನ ಹಿನ್ನೆಲೆಯಲ್ಲಿಯೇ 'ವಿವಿಧತೆಯಲ್ಲಿ ಏಕತೆ' ಯೆಂಬ ಘೋಷವಾಕ್ಯವು ಹುಟ್ಟಿಕೊಂಡದ್ದು. ಭಾರತೀಯತೆಯ ಅನನ್ಯತೆ, ವೈಶಿಷ್ಟ್ಯಗಳನ್ನು ಅಲ್ಲಗಳೆಯುವುದು ಕಷ್ಟವೆಂದೇ ನನ್ನ ಅಭಿಪ್ರಾಯ. ತನಗೆ ಎದುರಾಗುವ ಸ್ಪರ್ಧಿಗಳನ್ನು ಅದು ತನ್ನೊಳಗೆ ಸೆಳೆದುಕೊಳ್ಳುವ ಅರಗಿಸಿಕೊಳ್ಳುವ ವಿಧಾನವು ವಿಶಿಷ್ಟವಾದುದು. ಪುರಾಣ, ಇತಿಹಾಸ, ಮತ್ತು ವರ್ತಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸ್ಪಷ್ಟವಾಗುವ ಅಂಶ ಇದು. ಅತ್ಯಂತ ನಿಷ್ಠಾವಂತನಾದ ಬ್ರಾಹ್ಮಣನೂ ವಿಷ್ಣು, ಶಿವರನ್ನು ಪೂಜಿಸಿದಂತೆ ಮಾರಮ್ಮನೇ ಮುಂತಾದ ದೇವತೆಗಳಿಗೂ ನಡೆದುಕೊಳ್ಳುತ್ತಾನೆ. ದೇವರನ್ನು ಪೂಜಿಸಿದಂತೆ ದೆವ್ವಗಳನ್ನೂ ಪೂಜಿಸುತ್ತಾನೆ. ಬದುಕಿನಲ್ಲಿ ಭಕ್ತಿಗೆ ಸ್ಥಾನವಿರುವಂತೆ ಭಯಕ್ಕೂ ಸ್ಥಾನವಿರುವುದು ಕಾರಣ, ಬಹುಕಾಲದ ಹಿಂದೆಯೇ ವೈದಿಕ-ಅವೈದಿಕ ದೇವತೆಗಳಲ್ಲಿ ಭೇದ ಮಾಯವಾಗಿದೆ. ಈ ದೇಶಕ್ಕೆ ಕಾಲಿಟ್ಟ ವಿದೇಶೀಯರಿಗೂ ಇಲ್ಲಿನ ಪ್ರಭಾವಗಳಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಅದನ್ನು ರಾಮಾನುಜನ್ ಅವರು ಸ್ಪಷ್ಟವಾಗಿ ವಿವರಿಸಿದ್ದಾರೆ. ರಾಜೀವ ಮಲ್ಹೋತ್ರಾರವರನ್ನು ಅನುಸರಿಸಿ ಹೇಳುವುದಾದರೆ ಭಾರತೀಯರಲ್ಲಿದ್ದುದು ಪರಧರ್ಮ ಸಹಿಷ್ಣುತೆಯಲ್ಲ; ಪರಧರ್ಮದ ಬಗೆಗೆ ಗೌರವ.

ಪರಧರ್ಮಸಹಿಷ್ಣುತೆಯೆಂಬುದು ಅಸಹಿಷ್ಣುತೆಗಿಂತ ಉತ್ತಮವಾದುದು. ಅಸಹಿಷ್ಣುತೆ ಅನಾಗರಿಕ ವ್ಯವಹಾರ; ಸಹಿಷ್ಣುತೆ ಸುಸಂಸ್ಕೃತರ ರೀತಿ. ತನಗೆ ವೈಯಕ್ತಿಕವಾಗಿ ಇಷ್ಟವಿಲ್ಲದಿದ್ದರೂ ಸಾಮಾಜಿಕ ಶಾಂತಿಯು ಕದಡಬಾರದೆಂದೋ ಇನ್ನಿತರ ಕಾರಣಗಳಿಂದಲೋ ಸಹಿಸಿಕೊಳ್ಳುವುದು ಸಹಿಷ್ಣುತೆಯೆನಿಸುತ್ತದೆ. ಆದರೆ ಭಾರತೀಯರು ಇತರ ಧರ್ಮಗಳನ್ನು ಸಹಿಸಿಕೊಂಡವರು ಮಾತ್ರವಲ್ಲ, ಅವೂ ಕೂಡ ಭಗವಂತನನ್ನು ಕಾಣುವ ಮಾರ್ಗವೆಂದೇ ಭಾವಿಸಿದರು; ಅದಕ್ಕೆ ತಕ್ಕ ಗೌರವ-ಆದರಗಳು ಸಲ್ಲಬೇಕೆಂದು ಭಾವಿಸುವವರು. ಸಾಯಿಬಾಬಾರು ಅನ್ಯ ಕೋಮಿನವರಾದುದರಿಂಧ ಪೂಜಾರ್ಹರಲ್ಲವೆಂಬ ರೀತಿಯ ಮತಾಂಧತೆಯು ಬೇರುಬಿಟ್ಟಿದ್ದು ಈಚಿನ

ವರ್ಷಗಳಲ್ಲೆಂಬುದನ್ನು ಗಮನಿಸಬಹುದು. ಜಾತಿಗಳ ನಾಶವೇ ಜಾತ್ಯತೀತತೆಯೆಂದೂ ಅದರಿಂದಲೇ ಸಮಾಜೋದ್ಧಾರವು ಸಾಧ್ಯವೆಂಬವಾದವು ಪ್ರಬಲವಾದಷ್ಟೂ ಜಾತಿಜಾತಿಗಳ ಸಾಮರಸ್ಯವು ಕಲಕುತ್ತ ಹೋಗುತ್ತಿರುವುದನ್ನು ಕಾಣಬಹುದು. ಜಾತೀಯತೆಯ ವಿಷಬೀಜವನ್ನು ಬಿತ್ತಿ ಬೆಳೆಸುವಲ್ಲಿ ಜಾತ್ಯಾತೀತತೆಯೆಂಬ ವಿದೇಶೀತಳಿಯ ಆಮದಿನ ದೇಣಿಗೆ ದೊಡ್ಡದು. ಅದರ ಬದಲು ಸರ್ವಧರ್ಮಸಮಭಾವದ ಕಲ್ಪನೆಯನ್ನು ಪ್ರೋತ್ಸಾಹಿಸಬೇಕೆನಿಸುತ್ತದೆ.

ಭಾರತೀಯವೆನಿಸುವ ಚಿಂತನಕ್ರಮವಿಲ್ಲವೆನ್ನುವವರ ವಾದವನ್ನು ಒಪ್ಪುವುದು ಕಷ್ಟ. ಭಾರತೀಯರಿಗೆ 'ತತ್ವಶಾಸ್ತ್ರ'ವೆನ್ನುವುದೂ ಇಲ್ಲವೆಂಬುವರು ಯಾರೋ ತಿಳಿಯದು. ಹಾಗೆ ನೋಡಿದರೆ ಸಮಗ್ರದೇಶವು ಒಪ್ಪುವ ಒಂದು ತತ್ವಶಾಸ್ತವು ಭಾರತೀಯರಿಗೆ ಮಾತ್ರವಲ್ಲ, ಜಗತ್ತಿನ ಬಹಳಷ್ಟು ದೇಶಗಳಿಗೂ ಇಲ್ಲ. ಭಾರತದಲ್ಲಿ ಸಾಕಷ್ಟು ಸಂಖ್ಯೆಯ ತತ್ವಶಾಸ್ತ್ರಗಳಿವೆ – ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸಾ, ವೇದಾಂತ, ಬೌದ್ಧ, ಜೈನ, ಚಾರ್ವಾಕ–ಹೀಗೆ ಹೆಸರಿಸುತ್ತ ಹೋಗಬಹುದು. ಜೀವನೋಪಯುಕ್ತ ವಿಜ್ಞಾನಗಳೂ ಸಾಕಷ್ಟು ಪ್ರಮಾಣದಲ್ಲಿ ಬೆಳೆದಿದ್ದವೆಂಬುದಕ್ಕೆ ಸಾಕ್ಷಿಗಳಿವೆ. ಆದರೂ ಪೈಥಾಗೋರಸನ ಪ್ರಮೇಯಕ್ಕೆ ಸಿಕ್ಕ ಪ್ರಸಿದ್ಧಿ ಅವನಿಗಿಂತ ಎಷ್ಟೋ ಮೊದಲೇ ಅದೇ ತತ್ವವನ್ನು ನಿರೂಪಿಸಿದ್ದ ಬೋಧಾಯನನಿಗೆ ಸಿಗಲಿಲ್ಲ. ಗುರುತ್ವಾಕರ್ಷಣದ ಬಗೆಗೆ ನ್ಯೂಟನ್ನನು ಹೇಳಿದ್ದು ಪ್ರಸಿದ್ಧಿ ಪಡೆಯಿತೇ ಹೊರತು ಭಾಸ್ಕರಾಚಾರ್ಯನು ಹೇಳಿದ್ದನ್ನು ಗಮನಿಸಲಿಲ್ಲ. ಇಂಥ ಉದಾಹರಣೆಗಳು ನೂರಾರು.

ರಾಮಾನುಜನ್ ಸರಿಯಾಗಿಯೇ ಗುರುತಿಸುವಂತೆ ಕರ್ಮಸಿದ್ಧಾಂತವನ್ನೂ ಪುನರ್ಜನ್ಮವನ್ನೂ ಭಾರತೀಯ ದರ್ಶನಗಳು ಬಹುತೇಕವಾಗಿ ಒಪ್ಪಿವೆ, ಚಾರ್ವಾಕರು ಮಾತ್ರ ಅಪವಾದ. ಆದರೆ ಕರ್ಮ ಮತ್ತು ಹಣೆಬರಹಗಳು ಬೇರೆಬೇರೆಯೆಂದು ಹೇಳುವುದು ಸರಿಯಲ್ಲವೆನಿಸುತ್ತದೆ. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳು ಮುಂದಿನ ಜನ್ಮದಲ್ಲಿ ಅಥವಾ ಜನ್ಮಗಳಲ್ಲಿ ಫಲವನ್ನು ಕೊಡುತ್ತವೆಂಬುದು ಸಿದ್ಧಾಂತ. ಈ ಜನ್ಮದಲ್ಲಿ ಅನುಭವಿಸಬೇಕಾಗಿರುವುದನ್ನು 'ಪ್ರಾರಬ್ಧ' ವೆನ್ನಲಾಗುತ್ತದೆ. ಅದು ಫಲವನ್ನು ಕೊಡಲು ಆರಂಭಿಸಿದ ಕರ್ಮ. ಹಣೆಯ ಬರಹವೆಂಬುದು ಅನುಭವಿಸಬೇಕಾದ ಕರ್ಮಗಳ ಪಟ್ಟಿಯೆನಿಸುತ್ತದೆ. ಅಲ್ಲಿ ಸುಖ–ದುಃಖಗಳೆರಡೂ ಇವೆ. ಆದರೆ 'ಹಣೆಯ ಬರಹ', 'ಕರ್ಮ'ಗಳನ್ನು ನೆನೆಸಿಕೊಳ್ಳುವುದು ಕಷ್ಟದ, ನೋವಿನ ಸಂದರ್ಭಗಳಲ್ಲಿ ಮಾತ್ರ, ಸುಖದ ಸಂದರ್ಭಗಳಲ್ಲಿ ಅದೃಷ್ಟ, ಯೋಗ, ಭಾಗ್ಯಗಳನ್ನು ಹೇಳಿಕೊಳ್ಳುವುದು ರೂಢಿ. 'ಹಣೆಬರಹ' ವೆನ್ನುವುದು ಯಾದೃಚ್ಛಿಕ ಅಥವಾ ಮನಸ್ವೀಯೆನ್ನುವುದು ಅಸಂಗತ. ಕರ್ಮಸಿದ್ಧಾಂತವನ್ನೊಪ್ಪುವವರಲ್ಲಿ ಯಾದೃಚ್ಛಿಕಕ್ಕೆ ಅವಕಾಶವಿಲ್ಲ. 'ಅನ್ನದ ಒಂದೊಂದು ಅಗುಳಿನ ಮೇಲೆಯೂ ಉಣ್ಣುವವನ ಹೆಸರು ಬರೆದಿರುತ್ತದೆ' ಯೆಂಬಂತೆ ಹಣೆಬರಹವೂ ಸಾಂಕೇತಿಕ. ಅದು ಕರ್ಮದ ಬಲವಾದ ಹಿಡಿತವನ್ನು ಹೇಳುವ ಮಾತು.

'ಸಾರ್ವತ್ರಿಕತೆ', 'ಸಮತೆ'–ಮುಂತಾದವುಗಳ ಕುರಿತು ಭಾರತೀಯ ದೃಷ್ಟಿಕೋನವು ವಿಭಿನ್ನವಾಗಿರುವುದನ್ನು ರಾಮಾನುಜನ್ ಸರಿಯಾಗಿಯೇ ಹೇಳಿದ್ದಾರೆ. ಮನುಷ್ಯರೆಲ್ಲರೂ ಒಂದೇ ತೆರನಾಗಿದ್ದರೆ ಸಾರ್ವತ್ರಿಕವು ಸುಲಭವಾಗಬಹುದಿತ್ತು. ಆದರೆ ಹಾಗಿಲ್ಲವೆಂಬುದು ಇಂಥ ಕಲ್ಪನೆಯನ್ನು ಮತ್ತಿಷ್ಟು ವಿಚಾರಿಸಬೇಕಾದ ಸಂದರ್ಭವನ್ನು ಸೃಷ್ಟಿಸುತ್ತದೆ. ಭಗವದ್ಗೀತೆಯ ಈ ಶ್ಲೋಕವನ್ನು ನೋಡಿ –

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ।
ಶುನಿ ಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ?

ವಿದ್ಯಾ ವಿನಯ ಸಂಪನ್ನನಾದ ಬ್ರಾಹ್ಮಣ, ಹಸು, ಆನೆ, ನಾಯಿ ಮತ್ತು ಚಂಡಾಲರನ್ನು ಪಂಡಿತರು ಸಮಾನವಾಗಿ ಕಾಣುತ್ತಾರೆ.

ಇಲ್ಲಿ ಸಮಾನವಾಗಿ ಕಾಣುವುದೆಂದರೇನು? ಎಲ್ಲರನ್ನು ಒಂದೇ ಪಂಕ್ತಿಯಲ್ಲಿ ಕೂಡ್ರಿಸಿ ಊಟ ಹಾಕುವುದೇ? ಎಲ್ಲರಿಗೂ ಒಂದೇ ತೆರನಾದ ಭೋಜನವನ್ನು ನೀಡುವುದೆ? ಬ್ರಾಹ್ಮಣನಿಗೆ ನೀಡುವ ಆಹಾರವನ್ನೇ, ಅಷ್ಟೇ ಪ್ರಮಾಣದಲ್ಲಿ ಇತರರಿಗೂ ನೀಡಬಹುದೆ? ಹಾಗೆ ಮಾಡಿದರೆ ಇತರರ ಗತಿಯೇನು? ವ್ಯಕ್ತಿ–ವೈಶಿಷ್ಟ್ಯಗಳನ್ನು ಗ್ರಹಿಸದೆ ಎಲ್ಲವನ್ನೂ ಒಂದೇ ತೆರನಾಗಿ ಕಾಣುವುದು ಸಮಂಜಸವಲ್ಲವೆಂದೇ ಭಾರತೀಯ ಧರ್ಮ ಶಾಸ್ತ್ರಕಾರರು ಅಭಿಪ್ರಾಯಪಡುತ್ತಾರೆ; ಸಮಾನತೆಯೆಂಬುದನ್ನು ಇನ್ನೊಂದು ದೃಷ್ಟಿಯಿಂದ ನೋಡುತ್ತಾರೆ. ಮೇಲಿನ ಶ್ಲೋಕದಲ್ಲಿ ಸಮಾನವಾಗಿ ನೋಡುವುದೆಂದರೆ ಅಂತರ್ಯದಲ್ಲಿ ಅವರೆಲ್ಲರ ಬಗೆಗೆ ಸಮಾನವಾದ ಪ್ರೀತಿಯನ್ನು ಹೊಂದಿರುವುದು. ಆದರೆ ಬಹಿರಂಗದಲ್ಲಿ ಅವರವರಿಗೆ ತಕ್ಕ ರೀತಿಯಲ್ಲಿ ಉಪಚರಿಸುವುದು. ಹಸುವಿಗೆ ಹಸಿರು ಹುಲ್ಲು, ಆನೆಗೆ ಸೊಪ್ಪು, ಬ್ರಾಹ್ಮಣನಿಗೆ ಅನ್ನ–ಇತ್ಯಾದಿಯಾಗಿ ಅವರವರಿಗೆ ಯಾವುದು ಹಿತವೋ ಅದನ್ನು ಒದಗಿಸುವುದು. ತಾಯಿಗೆ ತನ್ನ ಮಕ್ಕಳಲ್ಲಿ ಸಮಾನವಾದ ಪ್ರೀತಿಯಿದೆ. ಆದರೆ ಒಂದು ವರ್ಷದ ಮಗುವಿಗೆ ಹಾಲನ್ನುಣಿಸಬಹುದು; ಹನ್ನೊಂದು ವರ್ಷದ ಮಗುವಿಗೂ ಅದನ್ನೇ ಒದಗಿಸಿ ಸಮಾನತೆಯನ್ನು ಸಾಧಿಸಿದರೆ ಆದೀತೇ?

ಮನುಸ್ಮೃತಿಯಲ್ಲಿ ಒಂದೇ ಅಪರಾಧಕ್ಕೆ ಬೇರೆಬೇರೆಯವರಿಗೆ ಬೇರೆ ಬೇರೆ ತೆರನಾದ ದಂಡನೆಯನ್ನು ವಿಧಿಸುವುದರ ಹಿನ್ನೆಲೆಯಲ್ಲಿರುವುದೂ ಇದೆ ಸಮತೆಯ ಕಲ್ಪನೆಯಾಗಿದೆ. 'ಸರ್ವಂ ಖಲ್ವಿದಂ ಬ್ರಹ್ಮ – ಈ ಎಲ್ಲವೂ ಬ್ರಹ್ಮವೇ' ಎಂದು ಸರ್ವಸಮತೆಯನ್ನು ಸಾರುವ ಅದ್ವೈತವೇದಾಂತವು ಕೂಡ ಭಾವಾದ್ವೈತವನ್ನು ಪ್ರತಿಪಾದಿಸುತ್ತದೆಯೇ ಹೊರತು ಕ್ರಿಯಾದ್ವೈತವು ಕೂಡದೆಂದೇ ಹೇಳುತ್ತದೆ. ಅದು ವ್ಯವಸ್ಥೆಯನ್ನು ಕೆಡಿಸುವುದನ್ನು ಮಾತ್ರ ಮಾಡೀತೇ ಹೊರತು ಪುರುಷಾರ್ಥಸಿದ್ಧಿಗೆ ಸಹಾಯಕವಾಗಲಾರದೆಂದೇ ಅಭಿಪ್ರಾಯಪಡುತ್ತದೆ.

ಸತ್ಯದಂಥ ಮೌಲ್ಯವನ್ನು ಕುರಿತು ಭಾರತೀಯ ಚಿಂತಕರು ಸಾರ್ವತ್ರಿಕ ನಿಯಮವನ್ನ ಹೇಳಿಲ್ಲವೆಂಬುದು ತಪ್ಪು. 'ಸತ್ಯಂ ವದ' – ಸತ್ಯವನ್ನು ಹೇಳು. ಎಂಬ ಮಾತನ್ನು ಹೇಳುವುದರ ಜೊತೆಗೆ ಸತ್ಯದ ಅಂತರಂಗ–ಬಹಿರಂಗಗಳನ್ನೂ ಶೋಧಿಸಿದೆ. ಇದ್ದುದನ್ನು ಇದ್ದಹಾಗೆಯೇ ಹೇಳುವುದು ತಥ್ಯ. ಇದು ಸತ್ಯದ ಬಹಿರಂಗ ಸ್ವರೂಪ. ಆದರೆ ಸತ್ಯವನ್ನು ಯಾಕೆ ಹೇಳಬೇಕು? ಸತ್ಯವು ಸ್ವತಃ ಒಂದು ಸಾಧನವೇ? ಅಥವಾ ಗುರಿಯೇ ಎಂಬ ವಿಷಯವಾಗಿ ಚಿಂತಿಸಿ ಅದೊಂದು ಸಾಧನವೆಂದು ತೀರ್ಮಾನಿಸಿದ್ದಾರೆ. ಆ ಶ್ಲೋಕವನ್ನು ಗಮನಿಸಿ –

ನ ತಥ್ಯವಚನಂ ಸತ್ಯಂ ನಾತಥ್ಯವಚನಂ ಮೃಷಾ। ಯದ್ಭೂತಹಿತಮತ್ಯಂತಂ ತತ್ಸತ್ಯಮಿತರನ್ಮೃಷಾ?

ಇದ್ದುದನ್ನು ಇದ್ದಹಾಗೆಯೇ ಹೇಳುವುದು ಸತ್ಯವಲ್ಲ. ಇದ್ದುದನ್ನು ಬೇರೊಂದು ಬಗೆಯಲ್ಲಿ ಹೇಳುವುದು ಸುಳ್ಳಲ್ಲ. ಯಾವುದು ಪ್ರಾಣಿಗಳಿಗೆ ಅತ್ಯಂತ ಹಿತಕರವಾದುದೋ ಅದು ಸತ್ಯ; ಹಾಗಲ್ಲದ್ದು ಸುಳ್ಳು.

'ಯದ್ಭೂತಹಿತಮತ್ಯಂತಂ ತತ್ಸತ್ಯಮಭಿಧೀಯತೇ – ಯಾವುದು ಜೀವಿಗಳಿಗೆ ಅತ್ಯಂತ ಹಿತಕರವಾದುದೋ ಅದನ್ನು ಸತ್ಯವೆನ್ನುತ್ತಾರೆ' ಎಂಬ ಪಾಠವೂ ಇದೆ. ಸತ್ಯ–

ಅಸತ್ಯಗಳ ನಿರ್ಣಯಕ್ಕೆ ಉಚ್ಚರಿಸುವ ಮಾತು ಮಾತ್ರ ಕಾರಣವಾಗುವುದಿಲ್ಲ. ಅದಕ್ಕಿಂತ ಮುಖ್ಯವಾದುದು ಸಕಲಜೀವಿಗಳಿಗೆ ಒಳಿತನ್ನುಂಟುಮಾಡುವುದು. ಪ್ರಾಣಭಯದಿಂದ ಓಡುತ್ತಿರುವ ವ್ಯಕ್ತಿಯನ್ನು ಕುರಿತು ಕೇಳಿದ ದರೋಡೆಕೋರರಿಗೆ ಆ ವ್ಯಕ್ತಿಯ ಬಗೆಗೆ ಸತ್ಯವನ್ನೇ ಹೇಳಿದ ಸಾಧುವಿಗೆ ನರಕಪ್ರಾಪ್ತಿಯಾಯಿತೆಂಬ ಕಥೆ ಪ್ರಸಿದ್ಧವೇ ಆಗಿದೆ. ಅಂಥಲ್ಲಿ ಮತ್ತೊಬ್ಬನ ಪ್ರಾಣವನ್ನು ಸುಳ್ಳಿನಿಂದ ಕಾಪಾಡಲು ಸಾಧ್ಯವಾದರೆ ಆ ಸುಳ್ಳೇ ಸತ್ಯವಾಗುತ್ತದೆ. ಯಾಕೆಂದರೆ ಅದು ಹಿತಕಾರಿಯಾಗಿದೆ.

ಅಲೆಕ್ಸಾಂಡರ್ ವೈಲ್ಡರ್ ಅವರು ಮನುವಿನ ಅಭಿಪ್ರಾಯವೆಂದು ಅಡಿ ಟಿಪ್ಪಣಿಯಲ್ಲಿ ಸೇರಿಸಿರುವ ವಿವರಗಳು ನಿರ್ದಿಷ್ಟ ಸಂದರ್ಭಗಳನ್ನು ತೋರಿಸಿವೆ. ಅಂಥಲ್ಲಿ ಸತ್ಯವು ಸುಳ್ಳಾಗುತ್ತದೆ; ಸುಳ್ಳು ಸತ್ಯವಾಗುತ್ತದೆ. ಹಾಗೆಂದರೆ ಅಲ್ಲಿ ಸುಳ್ಳನ್ನೇ ಹೇಳಬೇಕೆಂದಿಲ್ಲ. ಉದಾ : ಸತ್ಯವನ್ನು ಹೇಳಿದರೆ ವಿವಾಹವೇ ಮುರಿದು ಬೀಳುತ್ತದೆಯೆನ್ನುವಾಗ ಸುಳ್ಳು ಹೇಳಿದರೆ ದೋಷವಿಲ್ಲ – ಎಂಬುದಾಗಿ ಅರ್ಥ ಮಾಡಿಕೊಳ್ಳಬೇಕು. ಅಂದರೆ ಸತ್ಯವನ್ನು ಹೇಳುವುದು ನಿಯಮವಾದರೆ, ಅದಕ್ಕೂ ಕೆಲವು ಅಪವಾದಗಳಿವೆ. ಅದನ್ನು ವಿವೇಚಿಸಿ ವ್ಯವಹರಿಸಬೇಕಾಗುತ್ತದೆ.

ರಾಮಾನುಜನ್ 'ಸಂದರ್ಭಮುಕ್ತ' ಮತ್ತು 'ಸಂದರ್ಭಸ್ಪಂದಿ' ಗಳೆಂದು ನಿಯಮಗಳನ್ನು ವರ್ಗೀಕರಿಸಿ ಭಾರತದಂಥ ದೇಶವು 'ಸಂದರ್ಭಸ್ಪಂದಿ' ನಿಯಮಗಳನ್ನು ಆಯ್ಕೆ ಮಾಡಿಕೊಂಡಿವೆಯೆನ್ನುತ್ತಾರೆ. ಅದು ಒಪ್ಪುವಂಥ ವಿಚಾರವೇ ಆಗಿದೆ. ಆದರೆ ಸಂಕೀರ್ಣವಾದ ಜೀವನದಲ್ಲಿ ಅವೆರಡೂ ಸೇರಿಕೊಂಡಿರುತ್ತವೆಯೆಂಬುದನ್ನು ಗಮನಿಸಬೇಕು. ಸಂದರ್ಭಮುಕ್ತವಾದ ನಿಯಮವನ್ನು ರೂಪಿಸಿಕೊಳ್ಳದಿದ್ದರೆ ಸಂಧರ್ಭದಲ್ಲಿ ನ್ಯಾಯವನ್ನು ತೀರ್ಮಾನಿಸುವುದಾದರೂ ಹೇಗೆ? ವಿಶಿಷ್ಟ ಕಾಲ–ದೇಶ–ಅವಸ್ಥೆಗಳೇ ಮುಂತಾದವುಗಳನ್ನು ಗಮನಿಸದೆ ನ್ಯಾಯವನ್ನು ತೀರ್ಮಾನಿಸಿದರೆ ಅದು ನ್ಯಾಯವಾಗಲು ಸಾಧ್ಯವೇ? ಉದಾ : 'ನಾಯಿಯ ಮಾಂಸವನ್ನು ತಿನ್ನಬಾರದು' ಎಂಬುದು ನಿಯಮ. 'ಕಳ್ಳತನವನ್ನು ಮಾಡಬಾರದು' ಎಂಬುದು ಮತ್ತೊಂದು ನಿಯಮ. ವಿಶ್ವಾಮಿತ್ರನು ಪ್ರಾಣಾಪಾಯದ ಸ್ಥಿತಿಯಲ್ಲಿ ತನ್ನ ಪ್ರಾಣರಕ್ಷಣೆಗಾಗಿ ಆ ಎರಡೂ ನಿಯಮಗಳನ್ನು ಮುರಿಯುತ್ತಾನೆ. ಅದನ್ನು 'ಆಪದ್ಧರ್ಮ' ವೆಂದು ಕರೆಯಲಾಗಿದೆ. ಪ್ರಾಣಾಪಾಯದ ಸಂದರ್ಭದಲ್ಲಿ ಪ್ರಾಣರಕ್ಷಣೆಯೇ ಹೆಚ್ಚಿನದೆಂಬುದು ಇಲ್ಲಿನ ನ್ಯಾಯ. ನಮ್ಮನ್ನು ಕೊಲ್ಲಲು ಬಂದವನನ್ನು ಆತ್ಮರಕ್ಷಣೆಗಾಗಿ ಕೊಲ್ಲಲು ಇಂದಿನ ಕಾನೂನಿನ ಸಮ್ಮತಿಯೂ ಇದೆಯಲ್ಲವೇ? ತನ್ನ ಪ್ರಾಣದ ರಕ್ಷಣೆಗಾಗಿ ಇನ್ನೊಬ್ಬನನ್ನು ಕೊಲ್ಲುವುದಕ್ಕೂ ಉದ್ದೇಶಪೂರ್ವಕವಾಗಿ ಬೇರೆಯವರನ್ನು ಕೊಲ್ಲುವುದಕ್ಕೂ ವ್ಯತ್ಯಾಸವನ್ನು ಕಲ್ಪಿಸದಿದ್ದರೆ ನ್ಯಾಯವು ನ್ಯಾಯವಾಗುವುದೇ?

ಭಾರತೀಯ ಚಿಂತನಕ್ರಮದಲ್ಲಿ ಅಂತರಂಗ–ಬಹಿರಂಗ ಸಮನ್ವಯಕ್ಕೆ ಹೆಚ್ಚಿನ ಒತ್ತು ಇದೆ. ರಾಮಾನುಜನ್ ಹೇಳುವ 'ಸಂದರ್ಭಮುಕ್ತ' ವನ್ನು ಅಂತರಂಗವೆನ್ನಬಹುದು. ಅಥವಾ ಅವರೇ ಹೇಳಿದಂತೆ ಅದು 'ಒಳತಿರುಳು'. 'ಸಂದರ್ಭ ಸ್ಪಂದಿ'ಯು ಬಹಿರಂಗ; ಹೊರಕವಚ. ಒಳಗಿನ ತಿರುಳನ್ನು ಲಕ್ಷಿಸಿ ಹೊರಗಿನ ಕವಚವನ್ನು ಭೇದಿಸಬೇಕಾಗುತ್ತದೆ. ತೆಂಗಿನ ಕಾಯಿಯ ತಿರುಳನ್ನೂ ಬಾಳೆಹಣ್ಣಿನ ತಿರುಳನ್ನೂ ಒಂದೇ ಕ್ರಮದಲ್ಲಿ ತೆಗೆಯಲಾಗುವುದಿಲ್ಲ. ಅನೇಕ ಒಳನೋಟಗಳಿಂದ ಸೊಗಸಾದ ನಿರೂಪಣೆಯಿಂದ ನಮ್ಮನ್ನು ಸೆಳೆಯುವ ರಾಮಾನುಜನ್ ಅವರ ಬರಹವು ನಮ್ಮನ್ನು ನಾವೇ ಅರಿಯುವಲ್ಲಿ ಅನ್ವೇಷಿಸುವಲ್ಲಿ ಮಾರ್ಗದರ್ಶಿಯಾಗಿದೆ. **ಸಾಭಾರ – ಮಾತುಕತೆ**

ಜನಪದ ಸೇವಾ ಟ್ರಸ್ಟ್ ಸಮಾಚಾರ

ಈ ಕೆಳಗೆ ಕಾಣಿಸಿದ ಮಹನೀಯರು ಟ್ರಸ್ಟಿಗೆ ಭೇಟಿ ಕೊಟ್ಟರು ಮತ್ತು ಟ್ರಸ್ಟಿನ ಕೆಲಸಕ್ಕೆ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು.

ಬೆಂಗಳೂರಿನಿಂದ ಮಂಗಳೂರು ವಿಜಯ ಮತ್ತು ಅವರ ಪತ್ನಿ ಶಾರದ; ಇಂಗ್ಲೆಂಡ್‌ನ ತಮರಾಗೋರ್ಡನ್ ಮತ್ತು ಸ್ನೇಹಿತರು, ಬೆಂಗಳೂರಿನಿಂದ ಸಿ.ಎಲ್.ರಮೇಶ್, ಹೆಚ್.ಎಲ್.ಗೋಪಾಲ ಕೃಷ್ಣ, ಜಿ.ಶ್ರೀನಿವಾಸ್, ಬಾಲಾಜಿ, ಮಮತ ಎಂಬ ಸಂಗೀತ ಕಲಾವಿದರು, ಕರುಣಾಗೃಹದ ರುದ್ರಮೂರ್ತಿ, ಸರ್ವೋದಯ ಕಾರ್ಯಕರ್ತರಾದ ಶ್ರೀ.ನಾಮದೇವ ಶೆಣೈ, ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ೫೨ ಜನ ವಿದ್ಯಾರ್ಥಿಗಳು ಸಹಾಯಕ ಪ್ರಾಧ್ಯಾಪಕರಾದ ಶ್ರೀ.ಉರೀಗೌಡ, ಶ್ರೀ.ಪ್ರಕಾಶ್, ಶ್ರೀಮತಿ.ಶೋಭ.

******

ಕಳೆದ ನಾಲ್ಕು ವರ್ಷಗಳಿಂದ ಟ್ರಸ್ಟ್ ನಡೆಸುತ್ತಿರುವ ದತ್ತು ಕೇಂದ್ರದ ವ್ಯವಸ್ಥೆಯಲ್ಲಿ ಆಗಾಗ್ಗೆ ಸುಧಾರಣೆಗಳನ್ನು ಮಾಡಲಾಗುತ್ತಿರುತ್ತದೆ. ಇತ್ತೀಚೆಗೆ ಸೊಳ್ಳೆ ಮತ್ತು ನೊಣಗಳ ಬಾಧೆಯಿಂದ ತಪ್ಪಿಸಲು ಕೇಂದ್ರದ ಕಿಟಕಿ ಮತ್ತು ಬಾಗಿಲುಗಳಿಗೆ ಜಾಲರಿಗಳ ವ್ಯವಸ್ಥೆ ಮಾಡಲಾಯಿತು.

******

ಇತ್ತೀಚೆಗೆ ಪಂಜಾಬಿನ ಚಂಡೀಗಢದಲ್ಲಿ ನಡೆದ ಸಾವಯವ ಕೃಷಿಕರ ದ್ವೈವಾರ್ಷಿಕ ಸಮ್ಮೇಳನದಲ್ಲಿ ಟ್ರಸ್ಟ್ ಪರವಾಗಿ ಸುಮನಸ್ ಕೌಲಗಿ ಭಾಗವಹಿಸಿದರು. ನಂತರ ಗುಜರಾತ್ ಮತ್ತು ರಾಜಸ್ಥಾನದ ಕೆಲ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿ ಬೆಳೆಯಲಾಗುತ್ತಿರುವ ನಾಟಿ ಹತ್ತಿಯ ಬೆಳೆಯ ಬಗ್ಗೆ ಅಧ್ಯಯನ ಮಾಡಿದರು. ಹಾಗೂ ಗುಜರಾತ್ ವಿದ್ಯಾಪೀಠಕ್ಕೂ ಸೇವಾ ಗ್ರಾಮ ಆಶ್ರಮಕ್ಕೂ ಮತ್ತು ಸಾಬರಮತಿ ಆಶ್ರಮಕ್ಕೂ ಭೇಟಿ ಕೊಟ್ಟರು.

******

ಹೆಗ್ಗೋಡಿನ ಪ್ರಸನ್ನರವರ ನೇತೃತ್ವದಲ್ಲಿ ನಡೆಯುತ್ತಿರುವ ಕೈಮಗ್ಗ ಉಳಿಸಿ ಚಳುವಳಿಯ ಅಂಗವಾಗಿ ಬದನವಾಳು ಸತ್ಯಾಗ್ರಹದ ಸಿದ್ಧತಾ ಕಾರ್ಯಕ್ರಮದಲ್ಲಿ ಟ್ರಸ್ಟಿನ ಕಾರ್ಯದರ್ಶಿಯವರಾದ ಶ್ರೀ.ಸಂತೋಷ್ ಕೌಲಗಿಯವರು ಭಾಗವಹಿಸಿದರು

ಜನಪದ ನಿಲಯದ ಅಂತರಂಗದಲ್ಲಿ – ೧೩೨



ಟ್ರಸ್ಟಿನ ಪುಸ್ತಕಾಲಯದ ಕೊಠಡಿಯನ್ನು ಸ್ವಚ್ಛಗೊಳಿಸುವುದಕ್ಕಾಗಿ ಮತ್ತು ಅದನ್ನು ರಿಪೇರ್‌ಗೊಳಿಸುವುದಕ್ಕಾಗಿ ಅಲ್ಲಿದ್ದ ಪುಸ್ತಕಗಳನ್ನು ಮತ್ತು ಕೆಲವು ದಾಖಲೆಗಳನ್ನು, ಪತ್ರಗಳನ್ನು ಇನ್ನೊಂದು ಸುರಕ್ಷಿತ ಸ್ಥಾನಕ್ಕೆ ವರ್ಗಾಯಿಸುತ್ತಿದ್ದಾಗ ಸುಮಾರು ಹನ್ನೊಂದು ವರ್ಷಗಳ ಹಿಂದೆ ಮಾಡಿದ್ದ ಪತ್ರ ವ್ಯವಹಾರಗಳ ನೋಟ್ ಪುಸ್ತಕಗಳು ದೊರೆತವು. ಆ ಪುಸ್ತಕಗಳಲ್ಲಿಯ ವಿಷಯಗಳ ಮೇಲೆ ಕಣ್ಣುಹಾಯಿಸಿದಾಗ ಕೆಲ ಆತ್ಮೀಯ ವಿಚಾರಗಳು ಗೋಚರಿಸಿದವು. ಅನೇಕ ಅಭಿಮಾನಿ ಮಿತ್ರರೊಂದಿಗೆ ಮಾಡಿದ ಪತ್ರ ವ್ಯವಹಾರ ಅದರಲ್ಲಿವೆ. ಹನ್ನೊಂದು ವರ್ಷಗಳ ಹಿಂದೆ ಯಾವ ರೀತಿ ಟ್ರಸ್ಟ್ ನಡೆಯುತ್ತಿತ್ತು ಮತ್ತು ಅದರ ಚಿಂತನೆ ಹೇಗಿತ್ತು ಎಂಬುದರ ಕಲ್ಪನೆ ಮನಸ್ಸಿಗೆ ಬರುತ್ತದೆ. ಅಲ್ಲಿಯ ಕೆಲ ವಿಚಾರಗಳನ್ನು "ಅಂತರಂಗದಲ್ಲಿಯ ಓದುಗರೊಂದಿಗೆ ಹಂಚಿಕೊಳ್ಳಬೇಕೆಂಬ ಇಚ್ಛೆಯಾಗಿದೆ." ಆ ಪ್ರಕಾರವಾಗಿ ಆಗಾಗ್ಗೆ ಕೆಲ ಪತ್ರ ವ್ಯವಹಾರದ ಸಂಗತಿಗಳನ್ನು ಹಂಚಿಕೊಳ್ಳಲಾಗುವುದು. ಈ ಸಲ ಶಿವರಾಜ್ ಎಂಬ ಯುವಕನಿಗೆ ಬರೆಯಲಾದ ಪತ್ರವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಪ್ರಿಯ ಶಿವರಾಜ್,

ನೀನು ಮತ್ತು ನಿನ್ನ ಕುಟುಂಬದ ಸದಸ್ಯರು ಆರೋಗ್ಯವಾಗಿದ್ದೀರೆಂದು ನಂಬಿದ್ದೇನೆ. ಅದೇ ರೀತಿ ನಿನ್ನ ಉದ್ಯಮವು ಸಹ ಸರಾಗವಾಗಿ ನಡೆದಿದೆ ಎಂದು ನಂಬಿದ್ದೇನೆ. ನಿನ್ನ ತಂದೆಯವರು ಇಲ್ಲಿಗೆ ಟ್ರಸ್ಟ್ ಮೀಟಿಂಗ್‌ಗೆ ಬಂದಾಗಲೆಲ್ಲ ನಿನ್ನ ಯೋಗಕ್ಷೇಮದ ಬಗ್ಗೆ ವಿಚಾರಿಸುತ್ತಿರುತ್ತೇನೆ. ಕೆಲವೊಂದು ಸಲ ಮೈಸೂರಿನ ಮನೆಗೆ ಹೋದಾಗ ನಿನ್ನ ತಾಯಿಯವರನ್ನು ಸಹ ವಿಚಾರಿಸುತ್ತಿರುತ್ತೇನೆ. ಒಮ್ಮೆಯಾದರೂ ಬಿಡುವು ಮಾಡಿಕೊಂಡು ನಿನ್ನ ತಂದೆಯವರೊಂದಿಗೆ ನಿನ್ನ ಪತ್ನಿ ಸಮೇತ ಇಲ್ಲಿಗೆ ಬರಬೇಕೆಂದು ಆಹ್ವಾನಿಸುತ್ತೇನೆ.

ನಿನ್ನ ತಂದೆಯವರು ಇದೇ ತಿಂಗಳು ೧೮ಕ್ಕೆ ಇಲ್ಲಿಗೆ ಬರುವ ಕಾರ್ಯಕ್ರಮವಿದೆ.

ನಮ್ಮ ಸಂಸ್ಥೆಯು ಜನಪದ ವಿಚಾರ ಎಂಬ ವೈಚಾರಿಕ ಮಾಸ ಪತ್ರಿಕೆಯನ್ನು ಕಳೆದ ೫ವರ್ಷಗಳಿಂದ ಪ್ರಕಟಿಸುತ್ತಿದೆ. ಆ ಪತ್ರಿಕೆಯನ್ನು ನೀನು ನೋಡಿದೆಯೊ ಇಲ್ಲವೊ ಎಂಬುದು ನನಗೆ ಗೊತ್ತಿಲ್ಲ. ಅಥವಾ ನೀನು ಅದನ್ನು ನೋಡಿರಬಹುದು. ಏನೇ ಆಗಲಿ ನಿನ್ನ ತಿಳುವಳಿಕೆಗಾಗಿ ಪತ್ರಿಕೆಯ ಇತ್ತೀಚೆಗಿನ ಎರಡು ಸಂಚಿಕೆಗಳನ್ನು ಈ

ಪತ್ರದೊಂದಿಗೆ ಕಳುಹಿಸುತ್ತಿದ್ದೇನೆ.

ಜನಪದ ವಿಚಾರದ ಒಂದು ತಿಂಗಳ ಮುದ್ರಣದ ಖರ್ಚು ೨,೦೦೦ರೂಪಾಯಿಗಳಾಗುತ್ತದೆ. ಆದ್ದರಿಂದ ಪ್ರತಿಯೊಂದು ತಿಂಗಳಿಗೆ ಒಬ್ಬರಂತೆ ೧೨ ತಿಂಗಳಿಗೆ ೧೨ ಜನ ಪ್ರಾಯೋಜಕ ಸ್ನೇಹಿತರನ್ನು ಗುರ್ತಿಸಲು ಪ್ರಯತ್ನಿಸುತ್ತಿದ್ದೇನೆ. ಅದೇ ರೀತಿ ಒಂದು ತಿಂಗಳ ಸಂಚಿಕೆಯ ಪ್ರಾಯೋಜಕನನ್ನಾಗಿ ನಿನ್ನನ್ನೂ ಸಹ ಗುರ್ತಿಸಿದ್ದೇನೆ. ಈ ನನ್ನ ವಿನಂತಿ ನಿನಗೆ ಒಪ್ಪಿಗೆಯಾಗಬಹುದೆಂದು ಆಶಿಸಿದ್ದೇನೆ. ಒಂದು ವೇಳೆ ಇದಕ್ಕೆ ನಿನ್ನ ಯಾವ ಅಭ್ಯಂತರವಿಲ್ಲದಿದ್ದರೆ ಪ್ರಾಯೋಜಕನಾಗಿ ಸಹಾಯ ಮಾಡಬೇಕೆಂದು ವಿನಂತಿಸುತ್ತೇನೆ. ಈ ವಿಷಯವನ್ನು ನಿನ್ನ ತಂದೆ ಇಲ್ಲಿಗೆ ಬಂದಾಗ ಅವರಿಗೂ ಸಹ ತಿಳಿಸುತ್ತೇನೆ.

ಶುಭಾಶಯಗಳೊಂದಿಗೆ,

ಪತ್ರಿಕೆಯ ಒಡೆತನ ಮತ್ತು ಇತರ ವಿವರಗಳ ಪ್ರಕಟಣೆ
ಪ್ರಾರೂಪ ೪ (ವಿಧಿ–೮)

೧. ಪ್ರಕಟನೆಯ ಸ್ಥಳ	: ಮೇಲುಕೋಟೆ
೨. ಪ್ರಕಟನೆಯ ನಿಯತಕಾಲಿಕತೆ	: ತಿಂಗಳಿಗೊಮ್ಮೆ
೩. ಮುದ್ರಕರ ಹೆಸರು	: ಚಂದ್ರಗಿರಿ ಪ್ರಿಂಟರ್ಸ್
ಭಾರತದ ಪ್ರಜೆಯೇ	: ಹೌದು
ವಿಳಾಸ	ಚಂದ್ರಗಿರಿ ಪ್ರಿಂಟರ್ಸ್ ಡಾ.ರಾಜ್‌ಕುಮಾರ್ ಬಡಾವಣೆ,ಮಂಡ್ಯ
೪. ಪ್ರಕಾಶಕರ ಹೆಸರು	: ಸುರೇಂದ್ರ ಕೌಲಗಿ
ಭಾರತದ ಪ್ರಜೆಯೇ	: ಹೌದು
ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ
೫. ಗೌ/ಪ್ರಧಾನ ಸಂಪಾದಕರ ಹೆಸರು	: ಸುರೇಂದ್ರ ಕೌಲಗಿ
ಭಾರತದ ಪ್ರಜೆಯೇ	: ಹೌದು
ವಿಳಾಸ	: ಕಲ್ಯಾಣಿ ಬೀದಿ, ಮೇಲುಕೋಟೆ

೬. ಪತ್ರಿಕೆಯ ಒಡೆತನ ವಹಿಸಿರುವ ವ್ಯಕ್ತಿಗಳ ಮತ್ತು ಪಾಲುದಾರರ ಅಥವಾ ಒಟ್ಟು ಬಂಡವಾಳದ ಶೇ೧ಕ್ಕಿಂತ ಹೆಚ್ಚು ಭಾಗಕ್ಕೆ ಪಾಲುದಾರರಾದವರ ಹೆಸರು ಮತ್ತು ವಿಳಾಸ : ಜನಪದ ಸೇವಾ ಟ್ರಸ್ಟ್,
ಮೇಲುಕೋಟೆ – ೫೭೧ ೪೩೧

ಮೇಲೆ ಕೊಟ್ಟಿರುವ ವಿವರಗಳು ನನಗೆ ತಿಳಿದ ಮಟ್ಟಿಗೆ ಮತ್ತು ನನ್ನ ನಂಬಿಕೆಯಂತೆ ನಿಜವೆಂದು ನಾನು ಸುರೇಂದ್ರ ಕೌಲಗಿ ಘೋಷಿಸುತ್ತೇನೆ.

ದಿನಾಂಕ : ೧೩–೦೩–೨೦೧೫
ಮೇಲುಕೋಟೆ – ೫೭೧ ೪೩೧

ಪ್ರಕಾಶಕರ ಸಹಿ
ಸುರೇಂದ್ರ ಕೌಲಗಿ

ಸರ್ವೋದಯ ಆಂದೋಲನದ ಮುನ್ನಡೆ

ಜೈ ಜಗತ್,

ವಿಷಯ: ಕರ್ನಾಟಕ ಸರ್ವೋದಯ ಮಂಡಲಿ ಮತ್ತು ಜಿಲ್ಲಾ ಸರ್ವೋದಯ ಮಂಡಲಿಗಳನ್ನು ಬಲಪಡಿಸುವ ಬಗ್ಗೆ.

ಕರ್ನಾಟಕ ರಾಜ್ಯದಲ್ಲಿ ಸರ್ವೋದಯ ವಿಚಾರದ ಪ್ರಚಾರ ಮತ್ತು ಸರ್ವೋದಯ ಸಮಾಜ ರಚನೆಗಾಗಿ ಪ್ರಯತ್ನಿಸುತ್ತಿರುವ ರಾಜಕೀಯೇತರ ಏಕೈಕ ಸಂಸ್ಥೆ ಕರ್ನಾಟಕ ಸರ್ವೋದಯ ಮಂಡಲಿ. ಇದರ ಸ್ಥಾಪನೆಯಾಗಿ ೫೩ ವರ್ಷಗಳಾದವು. ಇದು ತನ್ನ ಅಸ್ತಿತ್ವದ ಸುವರ್ಣ ಜಯಂತಿಯನ್ನು ಆಚರಿಸಲು ಬಯಸುತ್ತಿದೆ. ಸಂಘಟನೆ ದುರ್ಬಲವಾಗಿದೆ. ಸುವರ್ಣ ಜಯಂತಿಯನ್ನು ಆಚರಿಸಲು ಮೊದಲು ಅಖಿಲ ಭಾರತ ಸರ್ವೋದಯ ಮಂಡಲಿಯ(ಸರ್ವಸೇವಾಸಂಘದ) ನಿಯಮಾವಳಿ ಯನುಸಾರ ರಾಜ್ಯ ಸರ್ವೋದಯ ಮಂಡಲಿಯನ್ನು ಸಂಘಟಿಸುವುದು ಅಗತ್ಯವಾಗಿದೆ. ಸಮಾಜವು ಹಲವಾರು ಬಗೆಯಲ್ಲಿ ತೀವ್ರ ಆಘಾತಕ್ಕೊಳಗಾಗುತ್ತಿರುವಾಗ ಸರ್ವೋದಯ ಮಂಡಲಿಯನ್ನು ಬಲಪಡಿಸುವುದು ತುರ್ತು ಅಗತ್ಯವಾಗಿದೆ.

ನಿಯಮಾವಳಿ ಪ್ರಕಾರ ಯಾವುದೇ ಒಂದು ಕ್ಷೇತ್ರದಲ್ಲಿ ಜಿಲ್ಲೆ, ತಾಲ್ಲೂಕುಗಳಲ್ಲಿ ಸರ್ವೋದಯ ಮಂಡಲಿಗಳ ರಚನೆಯಗಬೇಕಾದರೆ ಕನಿಷ್ಠ ೧೦ ಜನ ಲೋಕ ಸೇವಕರು ೧೫ ಜನ ಸರ್ವೋದಯ ಮಿತ್ರರು ಇರಬೇಕು. ಲೋಕ ಸೇವಕರೇ ಮಂಡಲಿಯ ಅಧ್ಯಕ್ಷರಾಗಿರಬೇಕು.

ನಿಮ್ಮ ಜಿಲ್ಲೆಗಳಲ್ಲಿ ಸರ್ವೋದಯ ಮಂಡಲಿಯನ್ನು ಈಗ ಅಧಿಕೃತವಾಗಿ ರಚಿಸಬೇಕಿದೆ.

ರಾಜ್ಯ ಮಂಡಲಿಯ ಬಲ ಸಂವರ್ಧನೆಗಾಗಿ ಮಾರ್ಗದರ್ಶನ ಮಾಡಲು ಸರ್ವಸೇವಾ ಸಂಘದ ಮಹಾಕಾರ್ಯದರ್ಶಿಗಳಾದ ಶ್ರೀ.ಟಿ.ಆರ್.ಎನ್.ಪ್ರಭು ಮತ್ತು ಶ್ರೀ.ಶೇಖ್‌ಹುಸೇನ್ ರಾಜ್ಯಕ್ಕೆ ೨೦೧೫ ಏಪ್ರಿಲ್ ೫ ಭಾನುವಾರದಂದು ಭೇಟಿ ಕೊಡಲಿದ್ದಾರೆ.

ಆ ದಿನ ಮಂಡ್ಯ ಜಿಲ್ಲೆ ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ಆವರಣದಲ್ಲಿ ಬೆಳಿಗ್ಗೆ ೧೦ ಗಂಟೆಯಿಂದ ಸಭೆ ಏರ್ಪಡಿಸಲಾಗಿದೆ. ಆ ಸಭೆಗೆ ನಿಮ್ಮ ಪ್ರದೇಶದಿಂದ ಲೋಕ ಸೇವಕರು ಮತ್ತು ಸರ್ವೋದಯ ಮಿತ್ರರಾಗಲು ಆಸಕ್ತಿಯಿರುವ ನಿಮ್ಮ ಸ್ನೇಹಿತರನ್ನು ಕರೆದು ಕೊಂಡು ಬರಬೇಕಾಗಿ ವಿನಂತಿ.

ಆಗಮಿಸಿದ ಮುಖ್ಯ ಅತಿಥಿಗಳ ಮುಂದೆ ಅವರೆಲ್ಲರು ನಿಗದಿತ ನಮೂನೆ ಭರ್ತಿಮಾಡಿ ವಾರ್ಷಿಕ ಶುಲ್ಕ ಪಾವತಿಸಿ ಲೋಕಸೇವಕ ಮತ್ತು ಸರ್ವೋದಯ ಮಿತ್ರರಾಗಬೇಕು. ತನ್ಮೂಲಕ ಜಿಲ್ಲಾ ಮತ್ತು ರಾಜ್ಯದ ಸರ್ವೋದಯ ಮಂಡಲಿಗಳನ್ನು ಬಲಪಡಿಸಲು ಸಾಧ್ಯವಾಗುವುದು.

ದಯಮಾಡಿ ಈ ವಿಷಯದ ಗಂಭೀರತೆ ಮತ್ತು ಮಹತ್ವ ಅರ್ಥೈಸಿಕೊಂಡು ನೀವು ೦೫/೦೪/೨೦೧೫ರ ಭಾನುವಾರದ ಸಭೆಗೆ ಸಂಭವನೀಯ ಲೋಕಸೇವಕ ಮತ್ತು ಸರ್ವೋದಯ ಮಿತ್ರರನ್ನು ಕರೆದುಕೊಂಡು ಬರಬೇಕಾಗಿ ಅನನ್ಯ ವಿನಂತಿ.

ನೀವು ಬರುವುದನ್ನು ಮತ್ತು ನಿಮ್ಮೊಂದಿಗೆ ಎಷ್ಟು ಜನ ಸ್ನೇಹಿತರು ಬರುತ್ತಾರೆ ಎಂಬುದನ್ನು ಅಂಚೆ ಮೂಲಕವಾಗಲಿ, ದೂರವಾಣಿ ಮೂಲಕವಾಗಲಿ ಮಾರ್ಚ್ ೨೫ರ ಒಳಗಾಗಿ ತಿಳಿಸಬೇಕಾಗಿ ಪ್ರಾರ್ಥನೆ. ಈ ಸಭೆಗೆ ವಿವಿಧ ಜಿಲ್ಲೆಗಳಿಂದ ಸದಸ್ಯರಾಗಬಹುದಾದ ಒಂದು ನೂರು ಜನ ಸ್ನೇಹಿತರನ್ನು ನಿರೀಕ್ಷಿಸುತ್ತಿದ್ದೇವೆ.

ಸಭೆಯ ಅಪೇಕ್ಷಿತ ಫಲಶ್ರುತಿ ಜಿಲ್ಲಾ ಸರ್ವೋದಯ ಮಂಡಲಿಗಳ ರಚನೆ ಮತ್ತು ರಾಜ್ಯ ಸರ್ವೋದಯ ಮಂಡಲಿಯ ಬಲವರ್ಧನೆ.

ಸಂಪರ್ಕದ ದೂರವಾಣಿಗಳು :-

ಶ್ರೀ.ಎಲ್.ನರಸಿಂಹಯ್ಯ, ಕಾರ್ಯಾಧ್ಯಕ್ಷರು – ೯೮೮೦೮೮೭೧೯೪
ಶ್ರೀ.ಹೆಚ್.ಎಸ್.ಸುರೇಶ್, ಸಂಘಟನಾ ಕಾರ್ಯದರ್ಶಿ – ೯೪೪೮೦೨೭೪೦೦
ಶ್ರೀ.ಎಂ.ಸಿ.ನರೇಂದ್ರ, ಸಂಘಟನಾ ಕಾರ್ಯದರ್ಶಿ – ೯೮೪೫೦೧೨೭೪೦
ಶ್ರೀ.ಸುರೇಂದ್ರ ಕೌಲಗಿ, ಗೌರವಾಧ್ಯಕ್ಷರು – ೯೧೪೮೧೭೦೦೮೧೨

ಟಿಪ್ಪಣಿ: ಲೋಕಸೇವಕತ್ವಕ್ಕೆ ನಿಯಮಗಳು.

೧. ಸತ್ಯ ಮತ್ತು ಅಹಿಂಸೆಯಲ್ಲಿ ನಂಬಿಕೆ ಇರಬೇಕು.
೨. ಯಾವುದೇ ಪಕ್ಷದ ಸಕ್ರೀಯ ಸದಸ್ಯನಾಗಲೀ, ಪದಾಧಿಕಾರಿಯಾಗಲೀ ಆಗಿರಕೂಡದು.
೩. ಅಖಿಲ ಭಾರತ ಸರ್ವೋದಯ ಮಂಡಲಿಯ ಸರ್ವಸೇವಾ ಸಂಘದ ಧ್ಯೇಯೋದ್ದೇಶಗಳ ಬಗ್ಗೆ ಗೌರವವಿರಬೇಕು.
೪. ಲೋಕ ಸೇವಕರಾಗುವ ದಿನದಂದು ಖಾದಿ ಧಾರಿಯಾಗಿರಬೇಕು. ನಂತರ ತಮ್ಮ ಅಭಿರುಚಿ ಮತ್ತು ಶಕ್ತಿ ಅನುಸಾರ ಖಾದಿಧಾರಿಗಳಾಗಬೇಕು.
೫. ಪ್ರತಿ ವರ್ಷ ೧೦ ರೂಪಾಯಿಗಳ ಶುಲ್ಕವನ್ನು ಕೊಟ್ಟು ಲೋಕ ಸೇವಕತ್ವವನ್ನು ನವೀಕರಿಸಿಕೊಳ್ಳಬೇಕು.

ಸರ್ವೋದಯ ಮಿತ್ರತ್ವಕ್ಕೆ ನಿಯಮಗಳು.

೧. ಸತ್ಯ ಮತ್ತು ಅಹಿಂಸೆಯಲ್ಲಿ ನಂಬಿಕೆ ಇರಬೇಕು.
೨. ಸರ್ವೋದಯ ವಿಚಾರದಲ್ಲಿ ಶ್ರದ್ಧೆ ಇರಬೇಕು.
೩. ಯಾವುದೇ ದುಶ್ಚಟಗಳಿರಬಾರದು
೪. ಪ್ರತಿ ವರ್ಷ ೧೦ ರೂಪಾಯಿಗಳ ಶುಲ್ಕವನ್ನು ಕೊಟ್ಟು ಸದಸ್ಯತ್ವ ನವೀಕರಿಸಬೇಕು.

ಸೂಚನೆ :- ನಿವೃತ್ತ ಶಿಕ್ಷಕರು, ಅಧಿಕಾರಿಗಳು, ಸಮಾಜ ಸೇವಾ ಚಟುವಟಿಕೆಗಳಲ್ಲಿ ಈಗಾಗಲೇ ತೊಡಗಿರುವ ಮಹನೀಯರು ಮತ್ತು ಮಹಿಳೆಯರು ಹಾಗೂ ವಿದ್ಯಾಭ್ಯಾಸ ಮುಗಿಸಿ ಸಮಾಜ ಸೇವೆಯಲ್ಲಿ ತೊಡಗಲು ಆಸಕ್ತಿಯುಳ್ಳ ಯುವಕರು, ಈ ಮುಂತಾದ ಶ್ರೇಣಿಯ ವ್ಯಕ್ತಿಗಳನ್ನು ಲೋಕಸೇವಕರನ್ನಾಗಿ ಮಾಡಲು ಪ್ರಯತ್ನಿಸಬಹುದು.

ಪ್ರತಿಧ್ವನಿ

ದೃಢ ಜನಶಕ್ತಿಯ ಧ್ವನಿ ಎಲ್ಲಿ?

ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಆದಾಯ ತೆರಿಗೆ ಇಲಾಖೆಯಲ್ಲಿ ಹಿರಿಯ ಹುದ್ದೆಯಲ್ಲಿದ್ದ ಉತ್ಸಾಹಿ ಯುವ ಐ.ಎ.ಎಸ್. ಅಧಿಕಾರಿ ಡಿ.ಕೆ. ರವಿ ಕಳೆದ ತಿಂಗಳು ನಿಗೂಢ ರೀತಿಯಲ್ಲಿ ಸಾವನ್ನು ಅಪ್ಪಿದ ವಿಷಯ ರಾಜ್ಯಾದ್ಯಂತ ಪ್ರಸಾರವಾಯಿತು. ಈ ಅಧಿಕಾರಿ ಹಿಂದೆ ಕೋಲಾರದಲ್ಲಿ ಜಿಲ್ಲಾಧಿಕಾರಿ ಆಗಿದ್ದಾಗ ಹತ್ತು ಹಲವು ಜನಪರ ಚಟುವಟಿಕೆಗಳನ್ನು ತಾವೇ ಮುಂದೆ ನಿಂತು ನಡೆಸಿದ್ದರು; ಆಸಕ್ತ ಯುವಜನರಿಗೆ ಐಎಎಸ್/ಕೆಎಎಸ್ ಪರೀಕ್ಷೆಗೆ ಪಾಠ ಹೇಳಿಕೊಟ್ಟಿದ್ದರು; ದಲಿತರ ಮನೆಯಲ್ಲಿ ಊಟ ಮಾಡಿದ್ದರು; ಯುವಜನರನ್ನು ನವನಿರ್ಮಾಣ ಕಾರ್ಯದಲ್ಲಿ ತೊಡಗಿಸಲು ಶ್ರಮಿಸಿದ್ದರು. ಬೆಂಗಳೂರಿಗೆ ನೇಮಕಾತಿ ಆದ ಬಳಿಕ, ಆದಾಯ ತೆರಿಗೆ ವಂಚಿಸುತ್ತಿದ್ದ ಹಲವು ಪ್ರಕರಣಗಳನ್ನು ಪತ್ತೆ ಮಾಡಿದ್ದರು; ಕೆಲವು ಬಲಿಷ್ಠ ಕುಳಗಳಿಗೆ ದಂಡ ಕೂಡ ವಿಧಿಸುವುದಕ್ಕೆ ಕಾರಣರಾಗಿದ್ದರು.

ಇಂಥ ಹಿನ್ನೆಲೆಯ ಯುವ ಐಎಎಸ್ ಅಧಿಕಾರಿ ನಿಗೂಢ ರೀತಿಯಲ್ಲಿ ಸಾವಿಗೆ ತುತ್ತಾದಾಗ ಸಹಜವಾಗಿಯೇ ಅದು ಮಾಧ್ಯಮಕ್ಕೆ ಮುಖ್ಯ ವಸ್ತುವಾಯಿತು. ಹಲವು ಕಡೆ ಈ ಕುರಿತು ಪ್ರತಿಭಟನೆಗಳೂ ಸಾರ್ವಜನಿಕರಿಂದ ನಡೆದವು. ರಾಜಕೀಯ ಮುಖಂಡರು ಮೃತ ಅಧಿಕಾರಿಯ ಗುಣಗಾನ ಮಾಡಿದರು; ಈ ಸಾವಿನ ತನಿಖೆಯನ್ನು ಸಿಐಡಿ ಅಥವಾ ಸಿಬಿಐ ನಡೆಸಬೇಕು ಎಂದು ಮೃತ ಅಧಿಕಾರಿಯ ಕುಟುಂಬದವರು ಮಾಡಿದ್ದಾರೆ.

ಸಾರ್ವಜನಿಕ ಜೀವನದಲ್ಲಿ ನೈತಿಕತೆಯ ಸ್ಥಾಪನೆಗಾಗಿ ತಮ್ಮ ಮಿತಿಯಲ್ಲೇ ಪ್ರಯತ್ನಿಸಿದ ಐಎಎಸ್ ಅಧಿಕಾರಿ ಡಿ.ಕೆ. ರವಿ ಅಂಥವರ ಸಾವಿಗೆ ಕಾರಣ ಏನೆಂಬುದು ಜನರಿಗೆ ತಿಳಿಯಲೇಬೇಕು. ಇದರಲ್ಲಿ ಅನ್ಯರ ಕೈವಾಡ ಏನಾದರೂ ಇದ್ದರೆ, ಅದು ಬಯಲಿಗೆ ಬರಲೇಬೇಕು; ಆರೋಪಿಗಳನ್ನು ಗುರುತಿಸುವ ಮತ್ತು ಅವರ ಮೇಲಿನ ಆರೋಪಗಳನ್ನು ಕುರಿತು ಒಂದು ಕಾಲಮಿತಿಯಲ್ಲಿ ವಿಚಾರಣೆ ನಡೆಸಿ, ಆರೋಪ ಸಾಬೀತಾದಲ್ಲಿ ತಕ್ಕ ಶಿಕ್ಷೆ ನೀಡಲೇಬೇಕು.

ಈ ವಿಷಯದಲ್ಲಿ ಸಾರ್ವಜನಿಕರು, ನಾಗರಿಕ ಗುಂಪುಗಳು ನಿರಂತರ ಜಾಗೃತರಾಗಿರುವ ಅವಶ್ಯಕತೆ ಇದೆ. ಕೆಲವು ಪ್ರಕರಣಗಳಲ್ಲಾದರೂ ನಿಗದಿತ ಕಾಲದಲ್ಲಿ ಆರೋಪಿಗಳಿಗೆ ಶಿಕ್ಷೆಯಾದರೇನೇ ಜನತೆಗೆ ಈ ವ್ಯವಸ್ಥೆಯ ಮೇಲೆ ಕಿಂಚಿತ್ತಾದರೂ ನಂಬಿಕೆ ಉಳಿಯಲು ಸಾಧ್ಯ.

ನಮ್ಮದು ಕೇವಲ ಕ್ಷಣಿಕ ಆಕ್ರೋಶ ಆದಲ್ಲಿ ಹೆಚ್ಚಿನ ಉಪಯೋಗ ಇಲ್ಲ. ಪ್ರತಿಯೊಂದು ಪ್ರಕರಣವು ಕನಿಷ್ಠ ತಾರ್ಕಿಕ ಅಂತ್ಯವನ್ನಾದರೂ ಕಾಣಲೇಬೇಕು. ಈ ಬಗ್ಗೆಯೇ ನಾವು, ನಾಗರಿಕ ಗುಂಪುಗಳವರು, ವಿಶೇಷ ಮುತುವರ್ಜಿ ವಹಿಸಬೇಕಿದೆ.

– ಮಂಗ್ಳೂರ ವಿಜಯ, ಬೆಂಗಳೂರು

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀಮತಿ.ಟಿ.ಪದ್ಮ, ಶ್ರೀ. ಮಂಗ್ಳೂರ ವಿಜಯ – ಬೆಂಗಳೂರು
ಶ್ರೀ.ಕುಂದೂರು ಉಮೇಶ್ ಭಟ್ – ಮೈಸೂರು
ಶ್ರೀ.ಹೆಚ್.ಎನ್.ರಾಮಕೃಷ್ಣಯ್ಯ, ಖಾದಿಗ್ರಾಮೋದ್ಯೋಗ ಸಂಘ – ಹೊಳೇನರಸೀಪುರ
ಡಾ–ಚಿಕ್ಕಮರಳಿ ಬೋರೇಗೌಡರು – ಪಾಂಡವಪುರ
ಶ್ರೀ.ಡಿ.ಆರ್.ಬಾಲಕೃಷ್ಣ – ಬೆಂಗಳೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು :–

ಶ್ರೀ.ನಾಗರಾಜ್, ಶ್ರೀಮತಿ.ಹೆಚ್.ಎಲ್.ಶೋಭಾ – ಮೈಸೂರು
ಶ್ರೀ.ಎಚ್.ಉರೀಗೌಡ, ಶ್ರೀ.ಎನ್.ಪ್ರಕಾಶ್ – ಕೆ.ಆರ್.ನಗರ
ಶ್ರೀ.ಪುನೀತ್ ರಾಜ್ – ಗೌಡೇನಹಳ್ಳಿ
ಶ್ರೀ.ಲೋಕೇಶ್ – ಸಂಕನಹಳ್ಳಿ
ಶ್ರೀ.ಶಿವಕುಮಾರ್ – ವಡ್ಡರಹಳ್ಳಿ
ಶ್ರೀ.ಬಿ.ಕೆ.ಸುನೀಲ್ – ಗಂಧನಹಳ್ಳಿ
ಶ್ರೀ.ರವಿ – ತರಗಳಲೆ ಗ್ರಾಮ (ಹಾಸನ)
ಶ್ರೀ.ನವೀನ್ – ಬ್ಯಾಡರಹಳ್ಳಿ
ಶ್ರೀ.ಎಲ್.ಹೊನ್ನೇಗೌಡ – ಪಾಂಡವಪುರ

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust
Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.net
Printed at Sanketh Mudrna, Melkote